# ಸಹಜ ಸಾಗುವಳಿ

ಸಂಪುಟ: 10 ಸಂಚಿಕೆ: 4 ಜುಲೈ–ಆಗಸ್ಟ್ 2012

ಕಾರ್ಪೊರೇಟ್ ದುರಾಕ್ರಮಣ ವಿರೋಧಿಸಿ ಸುಸ್ಥಿರ ಸಾವಯವ/ಸಹಜ ಕೃಷಿಗೆ ಮೀಸಲಾದ ದ್ವೈಮಾಸಿಕ

56






4 ಸಾವಯವ ಪದ್ಧತಿಯಲ್ಲಿ ಬಾಳೆ ಬೆಳೆಯುವ ಬಗ್ಗೆ ಉಪಯುಕ್ತ ಮಾಹಿತಿ ನೀಡುವ ಎರಡು ಲೇಖನಗಳು

10 ಮಳೆಯಾಶ್ರಿತ ಭೂಮಿಯಲ್ಲಿ ಸಾವಯವ ಸಾಗುವಳಿ

14 ಕೃಷಿ ಅರಣ್ಯ: ಕಾರ್ಯಾಗಾರಕ್ಕೂ ಮುನ್ನ

19 ನಮ್ಮ ಮಕ್ಕಳಿಗೆಷ್ಟು ವಿಷ ತಿನಿಸುತ್ತಿದ್ದೇವೆ?



# ಸಹಜ ಸಾಗುವಳಿ

ಸುಸ್ಥಿರ ಸಾವಯವ/ಸಹಜ ಕೃಷಿಗೆ ಮೀಸಲಾದ ದ್ವೈಮಾಸಿಕ

ಜುಲೈ–ಆಗಸ್ಟ್ 2012 (ಅಕ್ಟೋಬರ್‌ನಲ್ಲಿ ಪ್ರಕಟ)

ಸಂಪುಟ 10 ಸಂಚಿಕೆ 4

(new series)



**ಪ್ರಧಾನ ಸಲಹೆಗಾರರು:**
ಡಿ ಡಿ ಭರಮಗೌಡ್ರ

**ಸಲಹಾ ಮಂಡಳಿ:**
ಕೆ ಎಂ ಕುಂಬಳ್,
ಬಸವರಾಜು ಬಿ ಸಂತೇಶಿವರ,
ಸೋಮನಾಥ ರೆಡ್ಡಿ ಪೂರ್ಮ,
ಡಾ. ಕೆ ರವಿ, ಪಿ ಆರ್ ಶೇಷಗಿರಿರಾವ್,
ಸಿ ಅಶೋಕ್ ಕುಮಾರ್

**ಸಂಪಾದಕರು:**
ವಿ ಗಾಯತ್ರಿ

**ಸಂಪಾದಕೀಯ ಮಂಡಳಿ:**
ಎಲ್ ಸಿ ಚನ್ನರಾಜ್
ಕೆ ಸತ್ಯಶಂಕರ್

**ವಿನ್ಯಾಸ:** ಅಪಾರ



## ಚಂದಾ ವಿವರ

| | |
|---|---|
| ಬಿಡಿ ಪ್ರತಿ: | 12 ರೂ. |
| ವಾರ್ಷಿಕ: | 60 ರೂ. |
| ಹತ್ತು ವರ್ಷಕ್ಕೆ: | 600 ರೂ. |
| ಸಂಸ್ಥೆಗಳಿಗೆ(ವಾರ್ಷಿಕ): | 120 ರೂ. |
| **ಮಹಾ ಪೋಷಕರು:** | **1000 ರೂ.** |

**● ಡಿಡಿ ಮತ್ತು ಚೆಕ್‌ಗಳನ್ನು 'Other Karnataka Book Center' ಅಥವಾ 'OKBC' –ಈ ಹೆಸರಿಗೆ ಕಳಿಸಿಕೊಡಿ**

## ನಮ್ಮ ವಿಳಾಸ

**ಸಹಜ ಸಾಗುವಳಿ**
ನಂ. 22, 5ನೇ ಕ್ರಾಸ್, ಮೈಖೇಲ್‌ಪಾಳ್ಯ
2ನೇ ಹಂತ, ಹೊಸ ತಿಪ್ಪಸಂದ್ರ ಅಂಚೆ
ಬೆಂಗಳೂರು – 560 075
ದೂರವಾಣಿ: 080–25283370/25213104
ಇ ಮೇಲ್: **icrablr@gmail.com**


# ಕುಲಾಂತರಿ ಪ್ರಯೋಗಗಳು ನಿಲ್ಲಲಿ

## ಲೋಕಸಭೆಯ ಸ್ಥಾಯಿ ಸಮಿತಿ ವರದಿ ಶಿಫಾರಸ್ಸು

ಕೃಷಿ ಸಂಶೋಧನೆ ಕುರಿತ ಲೋಕಸಭೆಯ ಸ್ಥಾಯಿ ಸಮಿತಿಯು, ದೇಶದಲ್ಲಿ ಯಾವುದೇ ಕುಲಾಂತರಿ ಬೆಳೆಗಳ ಪ್ರಯೋಗಗಳನ್ನು ನಿಲ್ಲಿಸಬೇಕು ಎಂದು ಆಗಸ್ಟ್ ತಿಂಗಳಲ್ಲಿ ನೀಡಿದ ತನ್ನ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಕುಲಾಂತರಿ ಪ್ರಯೋಗಗಳ ವಿಚಾರದಲ್ಲಿ ಸರಿಯಾದ ಮೇಲ್ವಿಚಾರಣಾ ವ್ಯವಸ್ಥೆ ನಿರ್ಮಾಣವಾಗುವವರೆಗೆ ದೇಶದಲ್ಲಿ ಯಾವುದೇ ಕುಲಾಂತರಿ ಪ್ರಯೋಗಗಳು ನಡೆಯುವುದು ಬೇಡ ಎಂದು ಸ್ಪಷ್ಟವಾಗಿ ಹೇಳಿದೆ. ಅಷ್ಟೇ ಅಲ್ಲ, ಕುಲಾಂತರಿ ನಿಯಂತ್ರಣ ವ್ಯವಸ್ಥೆ ತನ್ನ ಈಗಿನ ಸ್ಥಿತಿಯಲ್ಲಿ ಕಂಪನಿಗಳಿಗೆ ಬೆಣ್ಣೆ ಸವರುವ ರೀತಿಯಲ್ಲಿ ಇದ್ದು ಅದನ್ನು ಆಮೂಲಾಗ್ರವಾಗಿ 'ರಿಪೇರಿ' ಮಾಡಬೇಕು ಎಂದು ಶಿಫಾರಸ್ಸು ಮಾಡಿದೆ.

ತನ್ನ 389 ಪುಟಗಳ ವರದಿಯಲ್ಲಿ ಸ್ಥಾಯಿ ಸಮಿತಿಯು, 2009ರಲ್ಲಿ ಮೊನ್ಸಾಂಟೊ–ಮಹಿಕೊ ಕಂಪನಿಗೆ ಬಿಟಿ ಬದನೆಯನ್ನು ವಾಣಿಜ್ಯವಾಗಿ ಬೆಳೆಯಲು ಅನುಮತಿ ನೀಡಿದ ವಿಚಾರದಲ್ಲಿ ಆಳವಾದ ತನಿಖೆ ಆಗಬೇಕು ಎಂದು ಆಗ್ರಹಪಡಿಸಿದೆ. **ಬಿಟಿ ಬದನೆಗೆ ಅನುಮತಿ ನೀಡಲು ತನಗೆ ಕಂಪನಿಯಿಂದ ಮತ್ತು ಒಬ್ಬ ಮಂತ್ರಿಯಿಂದ ಒತ್ತಾಯದ ಕರೆಗಳು ಬರುತ್ತಿದ್ದವು** ಎನ್ನುವ ಜಿಇಎಸಿ ಸದಸ್ಯರೊಬ್ಬರ ಹೇಳಿಕೆಯನ್ನು ಸ್ಥಾಯಿ ಸಮಿತಿ ದಾಖಲಿಸಿಕೊಂಡಿದೆ. ದೇಶದಲ್ಲಿ ಆಹಾರ ಉತ್ಪಾದನೆ ಹೆಚ್ಚಿಸಲು ಕುಲಾಂತರಿ ಬೆಳೆಗಳಿಗಿಂತ ಉತ್ತಮ ಮಾರ್ಗಗಳು ಇವೆ ಎಂಬ ವಿಚಾರದಲ್ಲಿ ಅನುಮಾನವಿಲ್ಲ ಎಂದು ಸ್ಥಾಯಿ ಸಮಿತಿ ಅಭಿಪ್ರಾಯಪಟ್ಟಿದೆ. ಕುಲಾಂತರಿ ಉತ್ಪನ್ನಗಳನ್ನು ಖಡ್ಡಾಯವಾಗಿ ಲೇಬಲಿಂಗ್ ಮಾಡಬೇಕು ಮತ್ತು ಪರಿಸರ ಸುರಕ್ಷತೆ, ಜೀವ ವೈವಿಧ್ಯತೆ, ಮಾನವ ಮತ್ತು ಜಾನುವಾರಿನ ಆರೋಗ್ಯ ಎಲ್ಲವನ್ನೂ ಸಮಗ್ರವಾಗಿ ಒಳಗೊಳ್ಳುವ ಕಾನೂನು ರಚನೆಯಾಗಬೇಕು ಎಂದು ಸಮಿತಿ ಹೇಳಿದೆ.

ಎಲ್ಲಾ ಪಕ್ಷಗಳ ಸದಸ್ಯರನ್ನೂ ಒಳಗೊಂಡ ಸ್ಥಾಯಿ ಸಮಿತಿ ಮೂರು ವರ್ಷಗಳ ಕಾಲ 1,400ಕ್ಕೂ ಹೆಚ್ಚು ದಾಖಲೆಗಳನ್ನು ಪರಿಶೀಲಿಸಿ 50ಕ್ಕೂ ಹೆಚ್ಚು ತಜ್ಞರು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿತು. ಭಾರತದಲ್ಲಿ ಬೆಳೆಯುತ್ತಿರುವ ಏಕೈಕ ಕುಲಾಂತರಿ ಬೆಳೆ ಬಿಟಿ ಹತ್ತಿಯಿಂದಾಗಿ ಒಂದು ದಶಕದಲ್ಲಿ ಸಾವಿರಾರು ಟನ್ ಹತ್ತಿ ಎಣ್ಣೆ ನಮ್ಮ ಆಹಾರ ಪದ್ಧತಿಯಲ್ಲಿ ಹೇಗೆ ಸೇರಿ ಹೋಗಿದೆ ಎಂಬ ಬಗ್ಗೆ ವಿವರಣೆಯನ್ನು ಸಮಿತಿ ಒತ್ತಾಯಿಸಿದೆ. ತನ್ನ ತನಿಖೆಯ ಪ್ರಕಾರ, ಪ್ರಾರಂಭದ ಕೆಲ ವರ್ಷಗಳ ನಂತರ ಬಿಟಿ ಹತ್ತಿ ಸಣ್ಣ ಮತ್ತು ಅತಿಸಣ್ಣ ರೈತರ ಸಂಕಷ್ಟದ ಬೆಂಕಿಗೆ ಎಣ್ಣೆ ಸುರಿಯಿತು ಎಂಬುದು ಸಾಬೀತಾಗಿರುವುದಾಗಿ ಸಮಿತಿ ತಿಳಿಸಿದೆ.

**ಜಿಎಂ ಸುದ್ದಿ**

**ಸುಪ್ರೀಂಕೋರ್ಟ್ ತಜ್ಞರ ಸಮಿತಿ ಕೂಡ ಎಲ್ಲಾ ಕುಲಾಂತರಿ ಕ್ಷೇತ್ರ ಪ್ರಯೋಗಗಳನ್ನು ನಿಲ್ಲಿಸಿ ಎಂದಿದೆ.**

### ಸುಪ್ರೀಂಕೋರ್ಟ್ ತಜ್ಞ ಸಮಿತಿ

ಲೋಕಸಭೆಯ ಸ್ಥಾಯಿ ಸಮಿತಿಯ ಈ ವರದಿಗೆ ಪೂರಕವಾಗಿ, ಸುಪ್ರೀಂ ಕೋರ್ಟ್ ನೇಮಿಸಿದ್ದ 5 ಜನ ತಜ್ಞರ ಸಮಿತಿಯು ಕೂಡ ದೇಶದಲ್ಲಿ ಎಲ್ಲಾ ಕುಲಾಂತರಿ ಕ್ಷೇತ್ರ ಪ್ರಯೋಗಗಳನ್ನು ನಿಲ್ಲಿಸಲು ಶಿಫಾರಸ್ಸು ಮಾಡಿದೆ. ಪಿವಿ ಸತೀಶ್, ದೇವಿಂದರ್ ಶರ್ಮ ಮತ್ತು ಅರುಣಾ ರೋಡ್ರಿಕ್ಸ್ ಅವರು ಸುಪ್ರೀಂ ಕೋರ್ಟಿನಲ್ಲಿ ಹೂಡಿದ್ದ ದಾವೆಗೆ ಉತ್ತರವಾಗಿ ಸುಪ್ರೀಂ ಕೋರ್ಟ್ ನೇಮಿಸಿದ ಸಮಿತಿಯು, ಪ್ರಯೋಗಗಳ ಮೇಲ್ವಿಚಾರಣೆ ನಡೆಸಲು ಸಮರ್ಪಕ ವ್ಯವಸ್ಥೆಯ ರಚನೆಯಾಗುವವರೆಗೆ, ಎಲ್ಲಾ ಪರಿಸರ ಸುರಕ್ಷತಾ ಮಾಹಿತಿ ಲಭ್ಯವಾಗುವವರೆಗೆ, ವಿವಿಧ ಹಿತಾಸಕ್ತಿಗಳ ನಡುವಿನ ಘರ್ಷಣೆ ತಹಬಂದಿಗೆ ಬರುವವರೆಗೆ ನಿಷೇಧ ಇರಲಿ ಎಂದು ಒತ್ತಾಯಿಸಿದೆ. ಮುಂದುವರೆದು, ಭಾರತಕ್ಕೆ ಸ್ಥಳೀಯವಾಗಿರುವಂಥ ಬೆಳೆಗಳ ಮೇಲೆ ಕುಲಾಂತರಿ ಪ್ರಯೋಗ ನಡೆಸುವುದನ್ನು ಸಂಪೂರ್ಣ ನಿಷೇಧಿಸಬೇಕು ಎಂದಿದೆ. ಇಲಿಗಳ ಮೇಲಿನ ದೀರ್ಘಕಾಲಿಕ ಮತ್ತು ಅನೇಕ ಪೀಳಿಗೆಗಳ ಮೇಲಿನ ಪ್ರಯೋಗಗಳು ನಡೆಸದೆ ಇರುವ ಯಾವುದೇ ಕುಲಾಂತರಿ ಪ್ರಯೋಗಗಳು ಸಾಧುವಲ್ಲ ಎಂದು ಘೋಷಿಸಬೇಕು ಎಂದು ಒತ್ತಾಯಿಸಿದೆ. ಭಾರತದ ಸನ್ನಿವೇಶದಲ್ಲಿ ಸಂಪೂರ್ಣ ಸುರಕ್ಷಿತ ಎಂದು ಸಾಬೀತು ಮಾಡುವ ಪ್ರಯೋಗ ನಡೆಸದೆ ಇರುವ ಯಾವುದೇ ಕಳೆನಾಶಕಸಹಿಷ್ಣು ಕುಲಾಂತರಿ ಬೆಳೆ ಪ್ರಯೋಗವನ್ನು ನಿಷೇಧಿಸಬೇಕು ಎಂದು ಹೇಳಿದೆ. ಬಿಟಿ(ಬ್ಯಾಸಿಲಸ್ ತುರಂಜಿನ್ಸಿಸ್) ವಂಶವಾಹಿ ಹೊಂದಿರುವ ಯಾವುದೇ ಕುಲಾಂತರಿ ಬೆಳೆಯ ಮೇಲೆ 10 ವರ್ಷಗಳ ನಿಷೇಧ ತರಬೇಕು ಎಂದು ಸಮಿತಿ ಶಿಫಾರಸ್ಸು ಮಾಡಿದೆ.

ಈ ಎರಡೂ ವರದಿಗಳನ್ನು ಪರಿಗಣಿಸಿ, ಎಲ್ಲಾ ಲಭ್ಯ ದಾಖಲೆಗಳನ್ನು ಪರಿಶೀಲಿಸಿ ಸುಪ್ರೀಂ ಕೋರ್ಟ್ ಆದಷ್ಟು ಶೀಘ್ರದಲ್ಲಿ ತನ್ನ ತೀರ್ಪು ನೀಡಲಿದೆ.

**ಭಾರತದ ಚಿಲ್ಲರೆ ಉದ್ಯಮದಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆಗೆ ವಾಲ್ಮಾರ್ಟ್ ಎನ್ನುವ ಅಮೆರಿಕದ ದೈತ್ಯ ಕಂಪನಿಗೆ ಅನುವು ಮಾಡಿಕೊಡುವ ಕೇಂದ್ರ ಸರ್ಕಾರದ ತೀರ್ಮಾನಕ್ಕೆ ತೀವ್ರ ವಿರೋಧ ವ್ಯಕ್ತವಾಗಿರುವುದನ್ನು ನೋಡುತ್ತಿದ್ದೇವೆ. ರೈತ ಸಂಘಟನೆಗಳು, ವ್ಯಾಪಾರಿಗಳ ಸಂಘಗಳು, ರಾಜಕೀಯ ಪಕ್ಷಗಳು ಇದನ್ನು ವಿರೋಧಿಸಿ ಬಲವಾಗಿ ಪ್ರತಿಭಟಿಸಿವೆ. ಎಂಟು ರಾಜ್ಯ ಸರ್ಕಾರಗಳು, ತಮ್ಮ ರಾಜ್ಯಗಳಲ್ಲಿ ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಘೋಷಿಸಿವೆ. ತೃಣಮೂಲ ಕಾಂಗ್ರೆಸ್ ಪಕ್ಷವಂತೂ ಕೇಂದ್ರ ಸರ್ಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುವ ಕಠಿಣ ಕ್ರಮಕ್ಕೇ ಮುಂದಾಯಿತು. ಇದನ್ನು ವಿರೋಧಿಸುವ ಬಂದ್ ಕರೆಗೆ ಸ್ಪಂದಿಸಿ ಇಡೀ ದೇಶ ದಿನವಿಡೀ ಅಕ್ಷರಶಃ ಸ್ತಬ್ಧಗೊಂಡಿದ್ದನ್ನು ನೋಡಿದ್ದೇವೆ. ಇಷ್ಟಿದ್ದೂ ಕೇಂದ್ರ ಸರಕಾರ, ಈ ವಿರೋಧಗಳಿಗೆ ತಾನು ಸೊಪ್ಪು ಹಾಕುವುದಿಲ್ಲ, ಈ ದೇಶದ ಹಸಿವು ಬಡತನ ಹಿಂಗಿಸಲಿಕ್ಕೆ, ರೈತ–ಗ್ರಾಹಕರ ಉದ್ಧಾರಕ್ಕೆ ಚಿಲ್ಲರೆ ವ್ಯಾಪಾರದಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆ ಇರಲಿ ಎಂದು ಪಟ್ಟು ಹಿಡಿದಿದೆ. ಅಮೆರಿಕ ಮೂಲದ ದೈತ್ಯ ಚಿಲ್ಲರೆ ವ್ಯಾಪಾರಿ ಕಂಪನಿ ವಾಲ್ಮಾರ್ಟ್‌ಗೆ ಭವ್ಯ ಸ್ವಾಗತ ನೀಡಿದೆ. ಈ ಕುರಿತು ದೇವಿಂದರ್ ಶರ್ಮ ಅವರ ಇತ್ತೀಚಿನ ಈ ಲೇಖನ ಇಲ್ಲಿ ಪ್ರಸ್ತುತವೆನಿಸುತ್ತದೆ. ಲೇಖನದ ಆಯ್ದ ಭಾಗಗಳು ಇಲ್ಲಿವೆ.**

# ಚಿಲ್ಲರೆ ವಿಷಯ ಅಲ್ಲ!

ದೇವಿಂದರ್ ಶರ್ಮರ ಲೇಖನದ ಆಯ್ದ ಭಾಗಗಳು

### ಪೆಪ್ಸಿಕೊದಿಂದ ವಾಲ್ಮಾರ್ಟ್‌ವರೆಗೆ

1980ರ ದಶಕದಲ್ಲಿ ಪೆಪ್ಸಿಕೊ ಕಂಪನಿಯು ಪಂಜಾಬಿನಲ್ಲಿ ಎರಡನೆ ತೋಟಗಾರಿಕೆ ಕ್ರಾಂತಿ ಮಾಡುವ ಕನಸನ್ನು ಹೊತ್ತು ತಂದಿತು. ಅತ್ಯಾಧುನಿಕ ತಂತ್ರಜ್ಞಾನ, ಕೃಷಿ ಸಂಶೋಧನೆ ಮತ್ತು ವಿಸ್ತರಣೆಗಳ ಸುಧಾರಣೆ, ಪೂರೈಕೆ–ಸರಪಳಿಯ ವ್ಯವಸ್ಥೆ, ರೈತರಿಗೆ ನೇರ ಮಾರುಕಟ್ಟೆಯ ಅವಕಾಶ ಇವೆಲ್ಲವನ್ನೂ ಒದಗಿಸುವುದಾಗಿ ಹೇಳಲಾಯಿತು. 'ಪಂಜಾಬಿನ ರೈತರ ಸಂಕಷ್ಟಗಳಿಗೆ ಇನ್ನು ಕೊನೆ' ಎಂದು ರಾಜಕಾರಣಿಗಳು, ಅಧಿಕಾರಶಾಹಿ, ಆರ್ಥತಜ್ಞರು, ಕೃಷಿ ವಿಜ್ಞಾನಿಗಳು, ಅಷ್ಟೆ ಯಾಕೆ ರೈತ ಸಂಘಟನೆ(ಭಾರತೀಯ ಕಿಸಾನ್ ಯೂನಿಯನ್)ಗಳು ಕೂಡ ಪುಲಕಗೊಂಡಿದ್ದರು. ಪೆಪ್ಸಿಕೊದ ಸ್ವಂತ ಅಧ್ಯಯನಗಳನ್ನೇ ಆಧರಿಸಿ, ಇವೆಲ್ಲಾ ಎಂಥ ಭ್ರಮೆ ಎಂದು ತೋರಿಸಿಕೊಡುವ ನನ್ನ ಪ್ರಯತ್ನವನ್ನು ಎಲ್ಲರು ನಿರ್ಲಕ್ಷಿಸಿದರು.

ಪ್ರಾಜೆಕ್ಟ್ ಶುರುವಾಗಿ ಹದಿನೈದು ವರ್ಷಗಳ ತರುವಾಯ ಪೆಪ್ಸಿಕೊದ ತೋಟಗಾರಿಕಾ ಕ್ರಾಂತಿ ನೆಲಕಚ್ಚಿ ಪಂಜಾಬಿನ ಕೃಷಿ ತಲ್ಲಣಿಸಿತ್ತು. ರೈತರ ಆತ್ಮಹತ್ಯೆ ಮುಗಿಲು ಮುಟ್ಟಿತ್ತು. ಸುಳ್ಳು ಕನಸು ಮಾರಿ ಹಗಲು ದರೋಡೆ ಮಾಡಿದ ಪೆಪ್ಸಿಕೊ ಕಂಪನಿ ಯಾವ ವಿಚಾರಣೆಗೂ ಒಳಪಡದೆ ಹಾಯಾಗಿ ತನ್ನ ತಂಪು ಪಾನೀಯ ಮಾರುತ್ತಾ ಇತ್ತು.

ಈಗ ಬಂದಿದೆ ವಾಲ್ಮಾರ್ಟ್ ಮತ್ತು ಇನ್ನಿತರ ದೈತ್ಯ ಚಿಲ್ಲರೆ ವ್ಯಾಪಾರದ ಕಂಪನಿಗಳ ಸರದಿ. ಭಾರತೀಯ ಕೃಷಿಯ ಎಲ್ಲಾ ರೋಗ ರುಜಿನಗಳಿಗೆ ಚಿಲ್ಲರೆ ವ್ಯಾಪಾರದಲ್ಲಿ ನೇರ ವಿದೇಶಿ ಹೂಡಿಕೆಯೇ ಉಪಶಮನ ಎನ್ನುವಂತೆ ಈಗ ತೋರಿಸಲಾಗುತ್ತಿದೆ. ಒಳರಚನೆಗಳ ವ್ಯವಸ್ಥೆ; ಶೈತ್ಯಾಗಾರಗಳು ಮತ್ತು ಸುಧಾರಿತ ಸಾರಿಗೆ ವ್ಯವಸ್ಥೆ ತಂದು ನಷ್ಟ ತಡೆಯುವುದು; ರೈತರ ಲಾಭ ಕಸಿಯುವ ಮಧ್ಯವರ್ತಿ ದಲಾಲಿಗಳನ್ನು ತೊಡೆದು ಹಾಕಿ ರೈತರಿಗೆ ಉತ್ತಮ ಬೆಲೆ ಸಿಗುವಂತೆ ಮಾಡುವುದು; ಬೆಳೆ ವೈವಿಧ್ಯತೆಗೆ ಸುಧಾರಿತ ತಂತ್ರಜ್ಞಾನ ಬಳಕೆ; ಮತ್ತು ಮಿಲಿಯನ್‌ಗಟ್ಟಲೆ ನೌಕರಿಗಳನ್ನು ಸೃಷ್ಟಿಸುವುದು ಇದು ಈಗ ಮಾರುತ್ತಿರುವ ಕನಸಿನ ಪ್ಯಾಕೇಜ್. ಕಾರ್ಪೊರೆಟ್ ಸ್ವಾಮ್ಯದ ವಿದ್ಯುನ್ಮಾನ ಮಾಧ್ಯಮಗಳು ಹುರುಪಿನಿಂದ ಇದರ ಪ್ರಚಾರ ಮಾಡುತ್ತಿವೆ.

ವಾಲ್ಮಾರ್ಟ್ ಕಂಪನಿ ಕಳೆದ ಎರಡು ವರ್ಷಗಳಲ್ಲಿ 52 ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರದೊಂದಿಗೆ ಕೇವಲ ಲಾಬಿ ಮಾಡಲು ವೆಚ್ಚಮಾಡಿದೆ. ಮೆಕ್ಸಿಕೊದಲ್ಲಿ 50% ಚಿಲ್ಲರೆ ವ್ಯಾಪಾರದ ಮಾರುಕಟ್ಟೆಯ ಮೇಲೆ ನಿಯಂತ್ರಣ ಹೊಂದಲು ವಾಲ್ಮಾರ್ಟ್ ಹೇಗೆ ಲಂಚದ ಹೊಳೆ ಹರಿಸಿತು ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಬಯಲು ಮಾಡಿದೆ. ಇದರಿಂದ ಖುಷಿಗೊಂಡಂತೆ ಕಾಣುತ್ತಿರುವ ಭಾರತ ಸರ್ಕಾರ ವಾಲ್ಮಾರ್ಟಿಗೆ ದೇಶದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ನೇರ ಹೂಡಿಕೆ ಮಾಡಲು ಸ್ವಾಗತ ನೀಡಿದೆ. ಮೆಕ್ಸಿಕೊದಲ್ಲಿ ಲಂಚದಿಂದ ಕೆಲಸ ಸಾಧನೆ ಸಾಧ್ಯವಾದರೆ ಭಾರತದಲ್ಲಿ ಇನ್ನೂ ಸುಲಭ ಅಲ್ಲವೇ?

ಈಗ ವಾಲ್ಮಾರ್ಟ್, ಟೆಸ್ಕೊ, ಸೆನ್ಸ್ಬ್ಯುರಿ, ಕೇರ್ಫೋರ್ ಮುಂತಾದ ಚಿಲ್ಲರೆ ವ್ಯಾಪಾರದ ದೈತ್ಯ ಕಂಪನಿಗಳು ಭಾರತದಲ್ಲಿ ಕೃಷಿ ಆದಾಯವನ್ನು ಹೆಚ್ಚಿಸುತ್ತವೆ ಎಂದು ಹೇಳಲಾಗುತ್ತಿದೆ. ಅಮೆರಿಕದಲ್ಲಿ 50 ವರ್ಷಗಳಿಂದ ವಾಲ್ಮಾರ್ಟ್ ಚಿಲ್ಲರೆ ವ್ಯಾಪಾರದಲ್ಲಿದೆ. ಹಾಗಿದ್ದರೆ ಅಲ್ಲಿನ ಕೃಷಿಯ ಆದಾಯ ಯದ್ವಾತದ್ವ ಹೆಚ್ಚಿರಬೇಕಿತ್ತಲ್ಲವೇ? ಅದು ಬಿಟ್ಟು ಅಮೆರಿಕದಲ್ಲಿ ರೈತರ ಸಂಖ್ಯೆ ಜನಸಂಖ್ಯೆಯ 1%ಗೂ ಕಮ್ಮಿಯಾದದ್ದು ಯಾಕೆ? ಏಕೆಂದರೆ, ಅಮೆರಿಕದ ರೈತರು ಕೃಷಿ ಮಾಡಲು ಸಾಧ್ಯವಾಗಿರುವುದು ವಾಲ್ಮಾರ್ಟ್‌ನಿಂದಲ್ಲ. ಅಲ್ಲಿನ ಸರ್ಕಾರ ಕೊಡುವ ಅಗಾಧ ಸಬ್ಸಿಡಿ ಮತ್ತು ನೇರ ಹಣಸಹಾಯದಿಂದ. 1997–2008ರ ಅವಧಿಯಲ್ಲಿ ಅಮೆರಿಕದಲ್ಲಿ 12.60 ಲಕ್ಷ ಕೋಟಿ ಹಣವನ್ನು ರೈತರಿಗೆ ಬೆಂಬಲವಾಗಿ ನೀಡಲಾಯಿತು. ಇದಿಲ್ಲದಿದ್ದರೆ ಅಮೆರಿಕದ ಕೃಷಿ ಎಂದೋ ಬಿದ್ದು ಹೋಗುತ್ತಿತ್ತು. ಹಾಗೆಯೇ ಯುರೋಪಿನಲ್ಲಿ ದೈತ್ಯ ಕಂಪನಿಯ ಚಿಲ್ಲರೆ ವ್ಯಾಪಾರ ಇದ್ದಾಗ್ಯೂ ಪ್ರತಿ ನಿಮಿಷ ಒಬ್ಬ ರೈತರು ಕೃಷಿ ಬಿಡುತ್ತಿದ್ದಾರೆ. ಇಲ್ಲಿಯೂ ರೈತರಿಗೆ ಅತಿಹೆಚ್ಚು ಸಬ್ಸಿಡಿ ಮತ್ತು ನೇರ ಹಣ ಸಹಾಯ ಕೊಡಲಾಗುತ್ತಿದೆ(ಇದನ್ನು ದೊಡ್ಡ ರೈತರು ಮತ್ತು ಕಂಪನಿಗಳು ತಿಂದು ಹಾಕುತ್ತಿರುವುದು ಬೇರೆ ವಿಚಾರ). ವಾಲ್ಮಾರ್ಟ್ ಇರುವ ಫ್ರಾನ್ಸ್‌ನಲ್ಲಿ ಕೃಷಿ ಆದಾಯ 2008ರಲ್ಲಿ 22%ನಿಂದ 2009ರಲ್ಲಿ 39%ಗೆ ಕಡಿಮೆಯಾಯಿತು. 30 ಶ್ರೀಮಂತ ವ್ಯಾಪಾರಿ ದೇಶಗಳನ್ನು ಹೊಂದಿರುವ ಒಇಸಿಡಿಯಲ್ಲಿ 2009ರ ಒಂದೇ ವರ್ಷದಲ್ಲಿ 14 ಲಕ್ಷ ಕೋಟಿ ಕೃಷಿ ಸಬ್ಸಿಡಿ ಕೊಡಲಾಯಿತು. ಆದ್ದರಿಂದ ಇಲ್ಲೆಲ್ಲಾ ರೈತರು ಅಲ್ಪ ಸ್ವಲ್ಪ ಕೃಷಿಯಲ್ಲಿ ಉಳಿದಿರುವುದು ವಾಲ್ಮಾರ್ಟ್ ಇತ್ಯಾದಿಗಳ ಕಾರಣಕ್ಕಲ್ಲ, ಸರ್ಕಾರ ರೈತರಿಗೆ ಕೊಡುವ ಸಬ್ಸಿಡಿಯಿಂದ.

ಈ ದೇಶಗಳಲ್ಲಿ ಕೊಡುವ ಈ ಮಟ್ಟದ ಸಬ್ಸಿಡಿಯಿಂದ ಆಂತರಿಕವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಬೆಲೆ ಕುಸಿತ ಉಂಟಾಗುತ್ತದೆ. ಆದ್ದರಿಂದಲೇ ಈ ದೈತ್ಯ ಚಿಲ್ಲರೆ ವ್ಯಾಪಾರದ ಕಂಪನಿಗಳು ಅಗ್ಗವಾಗಿ ಪದಾರ್ಥಗಳನ್ನು ಮಾರಾಟ ಮಾಡುವುದು ಸಾಧ್ಯವಾಗುತ್ತದೆ. ಆದರೆ ಈ ಕಂಪನಿಗಳು ಅದನ್ನೂ ನುಂಗುತ್ತಿವೆ. ಅಧ್ಯಯನಗಳ ಪ್ರಕಾರ, ಲ್ಯಾಟಿನ್ ಅಮೆರಿಕ ಮತ್ತು ದಕ್ಷಿಣ ಏಶಿಯಾದಲ್ಲಿ ದೈತ್ಯ ರಿಟೈಲಿಂಗ್ ಕಂಪನಿಗಳು ಮುಕ್ತ ಮಾರುಕಟ್ಟೆಗಿಂತ 20–30% ಹೆಚ್ಚು ಬೆಲೆ ಇಟ್ಟಿರುವುದು ಕಂಡು ಬಂದಿದೆ.

**(..25ನೇ ಪುಟ ನೋಡಿ)**

ಓದುಗರ ಒತ್ತಾಯದ ಮೇರೆಗೆ ಸಾವಯವ ಬಾಳೆ ಬೇಸಾಯ ಕುರಿತು ಈ ಹಿಂದೆ ಪ್ರಕಟವಾಗಿದ್ದ ಎರಡು ಮುಖ್ಯ ಲೇಖನಗಳನ್ನು ಮರು ಪ್ರಕಟಿಸಿದ್ದೇವೆ.

● ಡಾ. ಕೆ. ರವಿ

# ಸಣ್ಣ ರೈತರ ಕೈಗೆಟುಕುವ ಬಾಳೆ

## ಸಾವಯವ ಪದ್ಧತಿ ಮತ್ತು ಕ್ರಮಗಳು

ಹಣ್ಣಿನ ಬೆಳೆಗಳಲ್ಲಿ ಬಾಳೆ ಮುಖ್ಯವಾದುದ್ದು. ಇದು ದೇಹದ ಪೋಷಣೆಗೆ ಅಗತ್ಯವಾದ ಅನ್ನಾಂಗಗಳು, ಖನಿಜಾಂಶಗಳು ಮತ್ತು ಶರ್ಕರಾಂಶಗಳಿಂದ ಕೂಡಿರುತ್ತದೆ. ಬಹುಪಯೋಗಿಯಾದ ಬಾಳೆ ಬೆಳೆಯ ಎಲ್ಲಾ ಭಾಗಗಳಿಂದಲೂ ಪ್ರಯೋಜನ ಉಂಟು. ಇದರ ಎಲೆಯನ್ನು ಊಟಕ್ಕೆ ಮತ್ತು ದೊನ್ನೆ ಮುಂತಾದವನ್ನು ಮಾಡಲು ಉಪಯೋಗಿಸಿದರೆ, ಇದರ ದಿಂಡು ತರಕಾರಿಯಾಗಿ ಜನಪ್ರಿಯವಾಗಿದೆ. ಅಲ್ಲದೆ ಅಂಟು (ಸ್ಟಾರ್ಚ್) ಮಾಡಲು ಕೂಡ ಬಳಕೆಯಲ್ಲಿದೆ.

ಬಾಳೆ ಮುಖ್ಯವಾಗಿ ಉಷ್ಣವಲಯದ ಬೆಳೆ. ತೇವದಿಂದ ಹೆಚ್ಚು ಉಷ್ಣಾಂಶವಿರುವ ವಾತಾವರಣದಲ್ಲಿ ಇದು ಚೆನ್ನಾಗಿ ಬರುತ್ತದೆ. ಅಂದರೆ, ಗಾಳಿ, ಚಳಿ ಕಡಿಮೆ ಇದ್ದು ಮಳೆ ಹದವಾಗಿ ಬೀಳತಕ್ಕಂಥ ಪ್ರದೇಶ ಈ ಬೆಳೆಗೆ ಯೋಗ್ಯವಾದದ್ದು. ಅತಿಯಾಗಿ ಮಳೆ ಬೀಳುವ, ಘಟ್ಟ ಪ್ರದೇಶಗಳು ಈ ಬೆಳೆಗೆ ಯೋಗ್ಯವಲ್ಲ.

ಬಾಳೆ ಬೆಳೆಯನ್ನು ಎಲ್ಲಾ ವಿಧದ ಮಣ್ಣುಗಳಲ್ಲಿಯೂ ಬೆಳೆಯಬಹುದಾದರೂ ಮೆಕ್ಕಲು ಮಣ್ಣು, ಕಪ್ಪು ಮಣ್ಣು, ಗೋಡು ಹಾಗು ನೀರು ಬಸಿದು ಹೋಗುವ ಮಣ್ಣುಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಅತಿ ಜಿಗುಟು ಮಣ್ಣಿನಲ್ಲಿ, ಅಂದರೆ ಜೇಡಿ ಮಣ್ಣಿನಲ್ಲಿ ಇದು ಸಮರ್ಪಕವಾಗಿ ಬರುವುದಿಲ್ಲ. ಅದೇ ರೀತಿ ಅತಿ ಕ್ಷಾರ ಅಥವಾ ಹುಳಿ ಜಾಸ್ತಿ ಇರುವ ಮಣ್ಣಿನಲ್ಲಿ ಕೂಡ ಇದರ ಬೆಳವಣಿಗೆ ಸಮರ್ಪಕವಾಗಿರುವುದಿಲ್ಲ. ಸಾಮಾನ್ಯವಾಗಿ ಮಣ್ಣಿನಲ್ಲಿ ರಸಸಾರ (ಪಿ.ಎಚ್) 4ರಿಂದ 7ರವರೆಗೆ ಇರುವಲ್ಲಿ ಬಾಳೆ ಬೆಳೆಯಬಹುದು.

### ತಳಿಗಳು

ನಮ್ಮ ದೇಶದಲ್ಲಿ ಸುಮಾರು ನೂರಕ್ಕೂ ಹೆಚ್ಚು ಬಾಳೆ ತಳಿಗಳಿವೆ. ನಮ್ಮ ಕರ್ನಾಟಕ ರಾಜ್ಯದ ಮುಖ್ಯವಾದ ತಳಿಗಳೆಂದರೆ, ರೋಬಸ್ಟ, ಕ್ಯಾವಂಡಿಷ್, ಸೇಲಂಬಾಳೆ, ರಸಬಾಳೆ, ಏಲಕ್ಕಿಬಾಳೆ, ಪುಟ್ಟಬಾಳೆ, ಚಂದ್ರಬಾಳೆ, ಮದುರಂಗಬಾಳೆ, ನೇಂದ್ರಬಾಳೆ ಹಾಗೂ ಬೂದುಬಾಳೆಗಳು. ಇವುಗಳಲ್ಲಿ ರೋಬಸ್ಟಾ ಮತ್ತು ಕ್ಯಾವಂಡಿಷ್ ಬಾಳೆ ಹೆಚ್ಚಿನ ಇಳುವರಿ ಕೊಡುತ್ತದೆ. ಇವೆರಡನ್ನೂ ಸಹ ನಮ್ಮಲ್ಲಿ ಪಚ್ಚಬಾಳೆ ಎಂದು ಕರೆಯುತ್ತೇವೆ. ರೋಬಸ್ಟ ಸುಮಾರು 7 ಅಡಿ ಮತ್ತು ಕುಳ್ಳಗಿನ ಜಾತಿಯ ಕ್ಯಾವಂಡಿಷ್ 5 ಅಡಿ ಬೆಳೆಯುತ್ತದೆ. ಜಿ–9 ಎನ್ನುವ ಪಚ್ಚ ಬಾಳೆ 8 ಅಡಿ ಎತ್ತರಕ್ಕೆ ಹೋಗುತ್ತದೆ. ಇದನ್ನು ತೆಂಗಿನ ತೋಟದಲ್ಲಿ ಕೂಡಾ ಬೆಳೆಯುತ್ತಾರೆ.





ಬಯಲು ಸೀಮೆ ಪ್ರದೇಶದಲ್ಲಿ ಬಾಳೆಯನ್ನೇ ಪ್ರತ್ಯೇಕವಾಗಿ ಹಾಕಬೇಕಾದ ಸಂದರ್ಭದಲ್ಲಿ ಕುಳ್ಳಗಿನ ಕ್ಯಾಂವೆಂಡಿಶ್ ತಳಿ ಹಾಕುವುದು ಒಳ್ಳೆಯದು. ಮೇಲ್ಕಂಡ ಬಾಳೆ ತಳಿಗಳನ್ನು ರಾಜ್ಯದ ಎಲ್ಲಾ ಭಾಗಗಳಲ್ಲಿ ಬೆಳೆಯುತ್ತಿದ್ದು ರಸಬಾಳೆಯನ್ನು ಮಾತ್ರ ನಂಜನಗೂಡು, ವಾಣಿವಿಲಾಸ ಸಾಗರದ ಅಚ್ಚುಕಟ್ಟು, ಗಂಗಾವತಿ ಈ ಮುಂತಾದ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ರಸಬಾಳೆ ಹಣ್ಣು ಬಲು ರುಚಿಕರ ಅಲ್ಲದೆ ಬೆಲೆಯೂ ಹೆಚ್ಚು. ಆದರೆ ಈ ತಳಿ ಪನಾಮಾ ರೋಗಕ್ಕೆ ತುತ್ತಾಗುವುದು ಹೆಚ್ಚು.

**ಗಾಳಿ, ಚಳಿ ಕಡಿಮೆ ಇದ್ದು ಮಳೆ ಹದವಾಗಿ ಬೀಳತಕ್ಕಂಥ ಪ್ರದೇಶ ಈ ಬೆಳೆಗೆ ಯೋಗ್ಯವಾದದ್ದು. ಅತಿಯಾಗಿ ಮಳೆ ಬೀಳುವ, ಘಟ್ಟ ಪ್ರದೇಶಗಳು ಈ ಬೆಳೆಗೆ ಯೋಗ್ಯವಲ್ಲ.**

### ಬಾಳೆಗಿಡಗಳ ವಂಶಾಭಿವೃದ್ಧಿ

ಬಾಳೆಯ ವಂಶಾಭಿವೃದ್ಧಿಗೆ ಕಂದುಗಳನ್ನು ಬಳಸುತ್ತಾರೆ. ನೆಡುವ ಕಂದುಗಳನ್ನು ಉತ್ತಮ ಗೊನೆ ಕೊಡುವ ರೋಗರಹಿತವಾದ ತೋಟದಿಂದ ಆರಿಸಿಕೊಳ್ಳಬೇಕು. ಎಲೆಗಳು ಕತ್ತಿಯಾಕಾರದಲ್ಲಿ ಇದ್ದು, ಬುಡದಪ್ಪವಾಗಿರತಕ್ಕಂಥ ಕಂದುಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಎಲೆಗಳು ಅಗಲವಾಗಿರುವ ನೀರುಗಂದು ನೆಡಲು ಯೋಗ್ಯವಲ್ಲ. ಇಂತಹ ನೀರುಕಂದುಗಳು ನೆಟ್ಟಲ್ಲಿ ಫಸಲು ಬರುವುದು ನಿಧಾನ ಮತ್ತು ಉತ್ತಮ ಫಸಲು ಲಭಿಸುವುದಿಲ್ಲ.

ಬಿತ್ತನೆಗೆ ಆರಿಸುವ ಬಾಳೆಗೆಡ್ಡೆಗಳು ಸಾಧಾರಣ ಒಂದು ಕಿಲೋಗ್ರಾಂನಷ್ಟು ತೂಕವಿರುಬೇಕು. ಅವುಗಳನ್ನು ನೆಡುವ ಮೊದಲು ಹರಿತವಾದ ಕತ್ತಿ ಅಥವಾ ಕುಡುಗೋಲಿನಿಂದ ಕೊಳೆತ ಭಾಗಗಳನ್ನೆಲ್ಲಾ ಸವರಿ ತೆಗೆಯಬೇಕು. ಕನಿಷ್ಟ ಒಂದು ದಿವಸ ಬಿಸಿಲಿನಲ್ಲಿ ಒಣಗಿಸಬೇಕು. ಆನಂತರ ಬೇವಿನ ಹಿಂಡಿ ಗೋಮೂತ್ರ ಮತ್ತು ಕೆಂಪು ಮಣ್ಣಿನ ಕೆಸರು ಮಾಡಿ ಎಲ್ಲಾ ಕಂದುಗಳಿಗೆ ಲೇಪಿಸಬೇಕು. ಇದರಿಂದ ಬಾಳೆಗೆಡ್ಡೆಯಲ್ಲಿ ಸೇರಿಕೊಂಡಿರಬಹುದಾದ ಗೆಡ್ಡೆ ಕೊರೆಯುವ ಹುಳು (Weevil) ಮತ್ತು ದುಂಡಾಣು (Nematode)ಗಳನ್ನು ನಾಶಪಡಿಸಲು ಸಾಧ್ಯ. ಮಲೆನಾಡು ಪ್ರದೇಶದಲ್ಲಿ ಪೂವನ್ ಅಥವ ರಸಬಾಳೆ ತಳಿಗಳಲ್ಲಿ 3 ರಿಂದ 4 ಅಡಿ ಎತ್ತರದ ಕಂದುಗಳನ್ನು ಸಹ ನೆಡಬಹುದು.

### ಬಾಳೆಯಲ್ಲಿ ಒಟ್ಲುಪಾತಿ

ರೋಬಸ್ಟ ಮತ್ತು ಕ್ಯಾವಂಡಿಷ್ ಜಾತಿಯ ಬಾಳೆಯನ್ನು ನಾಟಿ ಮಾಡುವ ರೈತರು ಒಟ್ಲುಪಾತಿ ಪದ್ಧತಿಯನ್ನು ಅನುಸರಿಸುವುದು ಒಳ್ಳೆಯದು. ಮೂರು ಅಡಿ ಅಗಲ ಮತ್ತು ಸಾಕಾದಷ್ಟು ಉದ್ದದ ಒಟ್ಲುಪಾತಿಯನ್ನು ತಯಾರಿಸಿ ಅದಕ್ಕೆ ಮರಳನ್ನು ತುಂಬಬೇಕು. ಈ ಮರಳಿಗೆ ಸುಮಾರು 5 ರಿಂದ 10 ಕೆ.ಜಿ ಬೇವಿನ ಹಿಂಡಿ ಅಥವಾ ಹೊಂಗೆ ಹಿಂಡಿ ಇಲ್ಲವೇ ಈ ಎರಡೂ ಹಿಂಡಿ ಸೇರಿಸಿ ಪಾತಿಯನ್ನು ನೆನೆಸಬೇಕು. ಅಂದರೆ 2 ದಿವಸ ಬಿಡಬೇಕು. ನಂತರ ಸ್ವಚ್ಚಗೊಳಿಸಿದ ಕಂದುಗಳನ್ನು ನಾಟಿ ಮಾಡಬೇಕು. ಒಟ್ಲುಪಾತಿಗೆ ಸಾಧಾರಣ ನೆರಳು ಬೀಳುವಂತೆ ಕೈಚಪ್ಪರ ಹಾಕಬೇಕು ಮತ್ತು ನೀರನ್ನು ಹಾಯಿಸದೆ ಕೈಯಿಂದ ನೀರು ಹಾಕಬೇಕು. ಈ ರೀತಿ ಬೆಳೆಸಿದ ಕಂದುಗಳು ಒಂದು ತಿಂಗಳಲ್ಲಿ ನೆಡಲು ತಯಾರಾಗುತ್ತವೆ.

ಈ ರೀತಿಯಲ್ಲಿ ಒಟ್ಲುಪಾತಿಯ ಕ್ರಮವನ್ನು ಅನುಸರಿಸುವುದರಿಂದ ಅನೇಕ ಅನುಕೂಲಗಳಿವೆ. ಮೊದಲನೆಯದಾಗಿ, ಒಂದು ತಿಂಗಳ ಕಾಲ ಬಾಳೆ ನಾಟಿ ಮಾಡುವ ಜಮೀನಿಗೆಲ್ಲಾ ನೀರು ಹಾಯಿಸಿ ಕಳೆ ತೆಗೆಯುವ ಖರ್ಚು ಉಳಿತಾಯವಾಗುತ್ತದೆ. ಎರಡನೆಯದಾಗಿ, ಒಂದೇ ಮಟ್ಟದ ಕಂದುಗಳನ್ನು ಆರಿಸಿಕೊಂಡು ನೆಡಲು ಅನುಕೂಲವಾಗುತ್ತದೆ. ಇದರಿಂದ ಫಸಲನ್ನು ಒಂದೇ ಸಮಯದಲ್ಲಿ ಕಟಾವು ಮಾಡಲು ಸಾಧ್ಯ. ಮೂರನೆಯದಾಗಿ, ನೆಡಲು ಯೋಗ್ಯವಾದ ಕಂದುಗಳನ್ನು (Stored Sucker) ಆರಿಸಿಕೊಳ್ಳಲು ಅನುಕೂಲ ಮತ್ತು ಕೊನೆಯದಾಗಿ, ಒಟ್ಲುಪಾತಿಯನ್ನು ತಯಾರಿಸುವ ಒಂದು ತಿಂಗಳ ಅವಧಿಯಲ್ಲಿ ಭೂಮಿಯನ್ನು ಹದಗೊಳಿಸಲು ಅನುಕೂಲವಾಗುತ್ತದೆ.

ಅಂಗಾಂಶ ಕೃಷಿ (tissue culture)ಯಲ್ಲಿ ಬೆಳೆಸಿರುವ ಸಣ್ಣ ಸಸಿ 5–7 ರೂಪಾಯಿಗೆ ಸಿಗುತ್ತದೆ. ಇದನ್ನು ತಂದು ಒಂದು ಕೆ.ಜಿ ಮಣ್ಣಿಡಿಸುವ ಪಾಲಿಥೀನ್ ಚೀಲಕ್ಕೆ ಒಳ್ಳೆಯ ಗೊಬ್ಬರ, ಹಿಂಡಿ, ಕೆಂಪುಮಣ್ಣು ತುಂಬಿ, ಕೆಳಗಡೆ ರಂಧ್ರ ಮಾಡಿ ಈ ಸಸಿಗಳನ್ನು ನಾಟಿ ಮಾಡಬೇಕು. ಇದನ್ನು ಮತ್ತೆ ನಾವು 30–55 ದಿವಸ ನೆರಳಲ್ಲಿ ಸಾಕಬೇಕು. ನೀರು ಹಾಯಿಸದೆ ಕೈಯಿಂದ ನೀರು ಹಾಕಬೇಕು. ಇದಕ್ಕೆ ಸಸಿಯನ್ನು ಬಲಿಷ್ಟಗೊಳಿಸುವುದು ಎನ್ನುತ್ತೇವೆ. ಆ ನಂತರ ನಾಟಿ ಮಾಡಬೇಕು. ಹೀಗೆ ಬೆಳೆಸಿದ ದೊಡ್ಡ ಸಸಿ ಕೂಡ ಮಾರಾಟಕ್ಕೆ ಸಿಗುತ್ತದೆ. ಇದನ್ನು 12–13 ರೂಪಾಯಿಗೆ ಮಾರುತ್ತಾರೆ. ಇದನ್ನು ತಂದು ಹಾಕುವುದರಿಂದ 2–3 ತಿಂಗಳು ಸಮಯ ಉಳಿಸಬಹುದು. ಅಂಗಾಂಶ ಕೃಷಿಯಲ್ಲಿ ಬೆಳೆಸಿದ ಸಸಿಗಳನ್ನು ತರುವುದರಿಂದ ರೈತರು 6–7 ರೂಪಾಯಿ ಉಳಿತಾಯ ಮಾಡಬಹುದು. ಅಲ್ಲದೆ ಲೇಬರ್ ಕೂಡಾ ಉಳಿತಾಯವಾಗುತ್ತದೆ.

### ಬಾಳೆ ನಾಟಿಗೆ ಸೂಕ್ತ ಸಮಯ

ಈಗ ಬಾಳೆಯನ್ನು 365 ದಿವಸಗಳೂ ಬೆಳೆಯುತ್ತಾರೆ. ಬೆಲೆ ಸಹ ಯಾವಾಗಲೂ ಒಂದೇ ರೀತಿಯಾಗಿರುತ್ತದೆ. ಬಾಳೆಯನ್ನು ಹೆಚ್ಚಿನ ಮಳೆಯ ಕಾಲದಲ್ಲಿ ಬಿಟ್ಟು ವರ್ಷದ ಉಳಿದ ಎಲ್ಲಾ ಕಾಲದಲ್ಲಿಯೂ ನಡೆಬಹುದು. ಆದರೆ ಜೂನ್–ಜುಲೈ ಬಾಳೆಯ ನಾಟಿಗೆ ಅತ್ಯುತ್ತಮ. ಏಕೆಂದರೆ, ಸಾಮಾನ್ಯವಾಗಿ ಎಲ್ಲ ತಳಿಯ ಬಾಳೆಗಳೂ 12–13 ತಿಂಗಳ ಬೆಳೆಗಳೇ ಆಗಿವೆ. ಕಂದುಗಳನ್ನು ಹಾಕುವುದರಿಂದ ನಮಗೆ 3–4 ತಿಂಗಳ ಸಮಯ ಉಳಿತಾಯವಾಗುತ್ತದೆ. ಅಂದರೆ 8–9 ತಿಂಗಳಲ್ಲಿ ನಾವು ಫಸಲು ಪಡೆಯಬಹುದು ಹೀಗಾಗಿ ಬಾಳೆಯನ್ನು ನೆಡುವಾಗ ನಾವು ಸಮಯವನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಬಯಲುಸೀಮೆ ಪ್ರದೇಶ, ಉದಾ., ಬಳ್ಳಾರಿ, ಬೆಳಗಾಂ, ಗಂಗಾವತಿ, ಚಿತ್ರದುರ್ಗ ಜಿಲ್ಲೆಯ ಕೆಲ ಭಾಗಗಳಾದ ಮೊಳಕಾಲ್ಮೂರು ಮುಂತಾದ ಕಡೆಗಳಲ್ಲಿ ಡಿಸೆಂಬರ್–ಜನವರಿಯಲ್ಲಿ ರಾತ್ರಿ ಸಮಯದಲ್ಲಿ ಅತಿಯಾದ ಚಳಿ ಇರುತ್ತದೆ. ಉಷ್ಣಾಂಶ 9 ಡಿಗ್ರಿಗಿಂತ ಕಮ್ಮಿಯಾಗಿ, ಅದು 2–3 ದಿವಸ ಹಾಗೆ ಇದ್ದರೆ ಮತ್ತು ಅಂಥ ಸಮಯದಲ್ಲಿ ಬಾಳೆ ಗೊನೆ ಬರಲು ಶುರು ಮಾಡಿದರೆ ಬಹಳ ತೊಂದರೆಯಾಗುತ್ತದೆ. ಗೊನೆಯ ಬೆಳವಣಿಗೆ ಮತ್ತೆ 2 ತಿಂಗಳು ತಡವಾಗಿ ಬಿಡುತ್ತದೆ. ಅಂದರೆ ಗೊನೆ ಬರುವ ಸಮಯವೂ ಮತ್ತು ಈ ಅತೀ ಚಳಿಯ ಸಮಯವೂ ಹೊಂದಿಕೊಳ್ಳಕೂಡದು. ಇದನ್ನು ಬಹಳ ಮುಖ್ಯವಾಗಿ ಗಮನದಲ್ಲಿಟುಕೊಳ್ಳಬೇಕು.

### ಬೇಸಾಯ ಕ್ರಮಗಳು

ಮೊದಲು 2, 3 ಸಾರಿ ಭೂಮಿಯನ್ನು ಹದವಾಗಿ ಉಳುಮೆ ಮಾಡಿ ನಂತರ ಕಂಪೋಸ್ಟನ್ನು ಚಲ್ಲುವುದು ಉತ್ತಮ. ಇದರಿಂದ ಕಂಪೋಸ್ಟ್ ಒಳಗೆ ಬಿದ್ದು ಹದವಾಗಿ ಬೆರೆಯುತ್ತದೆ. ಕಂಪೋಸ್ಟನ್ನು ಸಾಲುಗಳಿಗೆ ಸೇರಿಸುವುದು ಒಳ್ಳೆಯದು. ಹಸಿರೆಲೆ ಗೊಬ್ಬರ

ಸೇರಿಸಿದರೆ ನಿಧಾನಕ್ಕೆ ಗಿಡಗಳು ಅದನ್ನು ಪಡೆಯಲು ಅನುಕೂಲವಾಗುತ್ತದೆ. ಕಂದನ್ನು ನೆಡಲು ಒಂದೂವರೆ ಅಡಿ ಆಳ–ಅಗಲ–ಉದ್ದವುಳ್ಳ ಗುಂಡಿಗಳನ್ನು ಸಾಲಿನಿಂದ ಸಾಲಿಗೆ ಮತ್ತು ಗಿಡದಿಂದ ಗಿಡಕ್ಕೆ 5 ಅಥವಾ 6 ಅಡಿ ಅಂತರ ಕೊಟ್ಟು ತೆಗೆಯಬೇಕು. ಕುಳ್ಳಗಿನ ತಳಿಯ ಕ್ಯಾವಂಡಿಶ್ ಆದರೆ ಸುಮಾರು 1200 ಕಂದುಗಳು ಒಂದು ಎಕರೆ ಜಮೀನಿಗೆ ಬೇಕಾಗುತ್ತದೆ. ರೊಬಸ್ಟ, ಏಲಕ್ಕಿ, ರಸಬಾಳೆ ಇವೆಲ್ಲ 1000 ಕಂದುಗಳನ್ನು ಹಾಕಬಹುದು. ನಂತರ ಗುಣಿ ಒಂದಕ್ಕೆ 10–15 ಕೆ.ಜಿ ಚನ್ನಾಗಿ ಕಳಿತ ದನದ ಗೊಬ್ಬರ, 300–500 ಗ್ರಾಂ ಬೇವು ಅಥವಾ ಹೊಂಗೆ ಹಿಂಡಿ ಮತ್ತು ಮೇಲು ಮಣ್ಣಿನ ಮಿಶ್ರಣದೊಡನೆ ತುಂಬಬೇಕು. ಎರೆಹುಳು ಗೊಬ್ಬರ, ಕುರಿ ಗೊಬ್ಬರ ಇವನ್ನೆಲ್ಲ ಗಿಡಕ್ಕೆ 100 ಗ್ರಾಂ ಕೊಡಬಹುದು. ಕಂದುಗಳನ್ನು ಒಟ್ಲುಪಾತಿಯಿಂದ ಕೀಳುವ ಮೊದಲು ಒಟ್ಲು ಪಾತಿಗೆ ನೀರು ಹಾಕುವುದರಿಂದ ಕೀಳುವಾಗ ಬೇರುಗಳು ತುಂಡಾಗುವುದಿಲ್ಲ.

ನಾಟಿ ಮಾಡಿದ 3 ನೇ ತಿಂಗಳಲ್ಲಿ ಅರ್ಧ ಕಿ.ಗ್ರಾಂನಷ್ಟು ಹೊಂಗೆ ಅಥವಾ ಬೇವಿನ ಹಿಂಡಿ ಕೊಡುವುದು ಒಳ್ಳೆಯದು. ಗೊಬ್ಬರಗಳನ್ನು ಗೊನೆ ಬರುವ, ಸುಳಿಕಟ್ಟುವ ಮೊದಲು, ಅಂದರೆ 2–5 ತಿಂಗಳ ಒಳಗೆ ಕೊಡಬೇಕು.

## ನೀರು ನಿರ್ವಹಣೆ

ಕಂದುಗಳನ್ನು ಜಮೀನಿನಲ್ಲಿ ನೆಟ್ಟ ನಂತರ ವಾರದಿಂದ ಹತ್ತು ದಿನಗಳೊಳಗೆ ನೀರು ಹಾಯಿಸಬೇಕು. ಜಿಗಟು ಕಪ್ಪು ಮಣ್ಣಿನಲ್ಲಿ ಬಾಳೆ ನೆಡುವವರು ಬಸಿಕಾಲುವೆಗಳನ್ನು ತೆಗೆದು ನೀರು ಬಸಿದು ಹೋಗುವಂತೆ ಎಚ್ಚರಿಕೆ ವಹಿಸತಕ್ಕದ್ದು.

ಪೂರ್ತಿ ಜಮೀನಿಗೆ ನೀರು ಹಾಯಿಸುವ ಬದಲು ರಿಂಗ್ ವಿಧಾನದಲ್ಲಿ ಕೊಡುವುದು ಒಳ್ಳೆಯದು. ಅಂದರೆ ಪ್ರತಿ ಗಿಡದ ಸುತ್ತಲೂ ಒಂದೂವರೆ ಅಡಿ ಸುತ್ತಳತೆ ಬಿಟ್ಟು ಒಂದು ರಿಂಗು ಮಾಡಬೇಕು. ಏಕೆಂದರೆ ಗಿಡದ ಬೇರುಗಳೆಲ್ಲ ಅಲ್ಲಿರುತ್ತವೆ. ಒಂದೂವರೆ ಅಡಿಯಲ್ಲಿ ನೀರು ಮತ್ತು ಖನಿಜಾಂಶಗಳನ್ನು ಹೀರಿಕೊಳ್ಳುವ ಬೇರು ಸಿಗುತ್ತದೆ.

ಒಂದು ಸಲ ಒಂದು ಗಿಡಕ್ಕೆ 5 ಲೀಟರ್ ನೀರು ಕೊಟ್ಟರೆ ಮತ್ತೆ ವಾರದತನಕ ಕೊಡುವ ಅವಶ್ಯಕತೆ ಇಲ್ಲ. ಮಣ್ಣಿನಲ್ಲಿ ಒಳ್ಳೆ ಹ್ಯೂಮಸ್ ಇದ್ದರೆ 15 ದಿವಸಕ್ಕೆ ಒಮ್ಮೆ ನೀರು ಕೊಟ್ಟರೂ ಸಾಕು. ಕಂಪೋಸ್ಟ್, ಬೇವಿನಹಿಂಡಿ, ಹಸಿರೆಲೆಗೊಬ್ಬರ ಮಣ್ಣಿನಲ್ಲಿ ಇದ್ದಾಗ ಆವಿಯಾಗುವುದಿಲ್ಲ. ಹೀಗಾಗಿ ವಾರ–ಹದಿನೈದು ದಿವಸಕ್ಕೆ ಒಂದು ಸಲ ನೀರು ಕೊಟ್ಟರೂ ಸಾಕು. ಮಳೆಗಾಲದಲ್ಲಿ ಜೂನ್‌ನಿಂದ ಸಪ್ಟೆಂಬರ್‌ವರೆಗೆ ನಿರಂತರ ಮಳೆ ಬಂದರೆ ನೀರು ಕೊಡುವ ಅವಶ್ಯಕತೆ ಇರುವುದಿಲ್ಲ. ಒಟ್ಟಿನಲ್ಲಿ ಗಿಡದ ಸುತ್ತಲೂ ಸಾಧಾರಣವಾದ ತೇವಾಂಶ ಇದ್ದರೆ ಸಾಕು.

## ಕಂದುಗಳನ್ನು ತೆಗೆಯುವುದು

ನಾಟಿ ಮಾಡಿದ 2 ತಿಂಗಳ ನಂತರ ಪಕ್ಕದಲ್ಲಿ ಕಂದುಗಳು ಬರಲು ಪ್ರಾರಂಭವಾಗುತ್ತವೆ. ಇವುಗಳನ್ನು ನೆಲಮಟ್ಟಕ್ಕೆ ಕತ್ತರಿಸಿ ತೆಗೆಯುತ್ತಿರಬೇಕು. ಸುಳಿ ಕಟ್ಟಿದ ನಂತರ ಗೊನೆ ಬರಲು ಒಂದು ಒಳ್ಳೆಯ ಕಂದನ್ನು (Stored Sucker) ಮಾತ್ರ ಬೆಳೆಯಲು ಬಿಡಬೇಕು.

ನೆಟ್ಟ 7ನೇ ತಿಂಗಳಲ್ಲಿ ಕಂದು ಸಾಳಿಕಟ್ಟಿ ಗೊನೆ ಬರಲು ಪ್ರಾರಂಭವಾಗುತ್ತದೆ. ಗೊನೆಯಲ್ಲಿ ಚಿಪ್ಪುಗಳೆಲ್ಲಾ ಈಚೆ ಬಂದ ನಂತರ 10–12 ದಿವಸಗಳ ಮೇಲೆ ಗೊನೆಯ ತುದಿಯಲ್ಲಿ ನೇತಾಡುವ ಮೋತೆಯನ್ನು ಮುರಿದು ಹಾಕಬೇಕು. ಗೊನೆಯನ್ನು ಬಿಸಿಲಿನ ತಾಪದಿಂದ ರಕ್ಷಿಸಲು ಬಾಳೆ ಎಲೆಗಳನ್ನು ಕೂಡಿಸಿ ಮುಚ್ಚುವುದು ಒಳ್ಳೆಯದು. ಈ ರೀತಿ ಮಾಡುವುದರಿಂದ ಕಾಯಿ ಕಂದು ಬಣ್ಣಕ್ಕೆ ತಿರುಗಿ ಹಾಳಾಗುವುದಿಲ್ಲ. ಗೊನೆ ಹೊರಬಿದ್ದ 3–4 ತಿಂಗಳ ನಂತರ ಕಟಾವಿಗೆ ಸಿದ್ಧವಾಗುತ್ತದೆ.

## ಕೀಟ–ರೋಗಗಳು

### ಗೆಡ್ಡೆ ಕೊರೆಯುವ ಹುಳು

ಇದರ ಉಪಟಳ ಇರುವಲ್ಲಿ ಗೆಡ್ಡೆಯಲ್ಲಿ ಕೊಳೆಯುವಂಥ ರಂಧ್ರಗಳು ಕಂಡುಬರುತ್ತವೆ. ಈ ಕೀಟದ ಭಾದೆಯನ್ನು ತಡೆಗಟ್ಟಲು ಕಂದುಗಳನ್ನು ತರುವಾಗಲೇ ಈ ಕೀಟಗಳ ಭಾದೆ ಇಲ್ಲದಂಥ ತೋಟದಿಂದ ಆಯ್ದು ತರಬೇಕು. ಕಂದುಗಳನ್ನು ನೆಡುವ ಮೊದಲೇ ಈಗಾಗಲೇ ತಿಳಿಸಿದಂತೆ ಅದನ್ನು ಚೊಕ್ಕಟಗೊಳಿಸಿ ನೆಡಬೇಕು. ನೆಡುವ ಮುನ್ನ ಸುಮಾರು 500 ಗ್ರಾಂ ಬೇವಿನ ಹಿಂಡಿ ಅಥವಾ ಹೊಂಗೆ ಹಿಂಡಿಯನ್ನು ಗುಂಡಿಗಳಲ್ಲಿ ಹಾಕಬೇಕು.

### ನಂಜುರೋಗ

ಇದು ವೈರಸ್ ರೋಗ. ಈ ರೋಗ ಬಂದ ಗಿಡದ ಎಲೆಗಳು ಚಿಕ್ಕದಾಗಿ, ಎಲೆಗಳು ಪಟ್ಟಿಯಂತೆ ಒಂದರ ಮೇಲೆ ಒಂದು ಸೇರಿಕೊಂಡು ಗಿಡದ ಬೆಳವಣಿಗೆ ಕುಂಠಿತವಾಗುತ್ತದೆ. ಇದಕ್ಕೆ 'ಬಂಚಿ ಟಾಪ್' ಎಂತಲೂ ಕರೆಯುತ್ತಾರೆ.

ಇದಕ್ಕೆ ನಿವಾರಣೋಪಾಯವಾಗಿ, ರೋಗ ಭಾದೆ ಇಲ್ಲದ ತೋಟದಿಂದ ಕಂದುಗಳನ್ನು ತಂದು ನೆಡುವುದು ಮುಖ್ಯ. ರೋಗದ ಚಿನ್ಹೆ ಕಾಣಿಸಿಕೊಂಡ ಗಿಡಗಳನ್ನು ಕಿತ್ತು ನಾಶಪಡಿಸಿ ರೋಗ ಹಬ್ಬದಂತೆ ನೋಡಿಕೊಳ್ಳಬೇಕು. ಈ ರೋಗ ಎಪಿಡ್ಸ್(ಸಸ್ಯ ಹೇನು) ನಿಂದ ಹರಡುವುದರಿಂದ ಗಿಡಕ್ಕೆ 3–4 ತಿಂಗಳಾಗಿದ್ದಾಗ ಹೇನುಗಳ ನಿಯಂತ್ರಣಕ್ಕೆ ಬೇವಿನ ಎಣ್ಣೆ ಸಿಂಪಡಣೆ ಮಾಡಬಹುದು.

### ಪನಾಮ ರೋಗ

ಇದು ಫಂಗಸ್‌ನಿಂದ ಬರುವ ರೋಗ. ಇದು ನೆಲದಿಂದ ಬರುತ್ತದೆ. ನೀರು ಪೋಷಕಾಂಶ ಹೀರುವ ಬೇರುಗಳನ್ನು ರೋಗಾಣು ಆಕ್ರಮಿಸಿ ಅವುಗಳ ಹರಿವನ್ನೇ ತಡೆಯುತ್ತದೆ. ಈ ರೋಗ ಬಂದ ಗಿಡಗಳ ಎಲೆಗಳು ಹಳದಿಯಾಗಿದ್ದು ಇಳಿಬಿಟ್ಟುಕೊಂಡಿರುತ್ತವೆ. ಸಾಮಾನ್ಯವಾಗಿ ಕೆಳಗಿನ ಒಂದು ಪದರ ಹೀಗೆ(ಚಿತ್ರದಲ್ಲಿರುವಂತೆ) ಇಳಿಬಿಟ್ಟುಕೊಳ್ಳುತ್ತದೆ. 5ನೇ ತಿಂಗಳಲ್ಲಿ, 7ನೇ ತಿಂಗಳಲ್ಲಿ ಬುಡವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಬಾಯಿ ಬಿಟ್ಟುಕೊಂಡಿರುವುದು ಕಂಡುಬರುತ್ತದೆ. ಬಿಲ್ಲಿನಲ್ಲಿ ಹೊಡೆದಾಗ ಸೀಳಿಕೊಳ್ಳುವಷ್ಟು ಚನ್ನಾಗಿ ಸೀಳು ಬಿಟ್ಟುಕೊಂಡಿರುತ್ತದೆ. ಇದು ಸಾಧಾರಣವಾಗಿ ರಸಬಾಳೆ ಮತ್ತು ಏಲಕ್ಕಿ ಬಾಳೆಗಳಲ್ಲಿ ಬಹಳವಾಗಿ ಕಾಣಿಸಿಕೊಳ್ಳುತ್ತದೆ. ಕುಳ್ಳಗಿನ ಕ್ಯಾವೆಂಡಿಶ್ ಮತ್ತು ಪಚ್ಚಬಾಳೆ ತಳಿಗಳಿಗೆ ಇದು ಸಾಮಾನ್ಯವಾಗಿ ಬರುವುದಿಲ್ಲ. ಅವುಗಳ ಬೇರು ಗಟ್ಟಿ ಇರುತ್ತವೆ. ಆದರೆ ಈಗ ದುಂಡಾಣು ರೋಗ ಜಾಸ್ತಿಯಾಗಿರುವುದರಿಂದ ಅದರ ಸಹಾಯದಿಂದ ಇವುಗಳಿಗೂ ಕೂಡ ಪನಾಮ ರೋಗ ಬರುವ ಸಾಧ್ಯತೆ ಇದೆ.

ಈ ರೋಗದ ಸ್ವರೂಪ ಗಂಭೀರವಾಗಿದ್ದು ಗಿಡಗಳು ಸಂಪೂರ್ಣ ನಾಶವಾಗುತ್ತವೆ. ಇದನ್ನು ತಡೆಯಲು ರೋಗರಹಿತ ಕಂದುಗಳನ್ನು ತಂದು ನೆಡುವುದು ಬಹಳ ಮುಖ್ಯ. ಜತೆಗೆ ಗುಂಡಿಗಳಿಗೆ ಬೇವಿನ ಹಿಂಡಿ ಅಥವಾ ಹೊಂಗೆ ಹಿಂಡಿ, ಹಸಿರೆಲೆ ಗೊಬ್ಬರ ಜೊತೆಗೆ ಟ್ರೈಕೊಡರ್ಮಾ ಪುಡಿಯನ್ನು ಹಾಕಬೇಕು.

ಪಂಚಗವ್ಯವನ್ನು 3, 5, 7 ಮತ್ತು 9ನೇ ತಿಂಗಳಲ್ಲಿ ಕೊಡುವುದರಿಂದ ರೋಗರಹಿತ ಫಸಲು ಪಡೆಯಬಹುದು. ತಿಂಗಳಿಗೆ 2, 3 ಸಾರಿ, 5:1 ತೆಳುವಾಗಿಸಿದ ಪಂಚಗವ್ಯವನ್ನು 5 ಲೀಟರ್ ಪ್ರಮಾಣದಲ್ಲಿ ಕೊಡಬೇಕು. ಇದು ಅತ್ಯುತ್ತಮ ಪರಿಣಾಮ ಕೊಡುತ್ತದೆ. ಪಂಚಗವ್ಯವನ್ನು ನೀರಾವರಿಯಲ್ಲಿ ಕೊಟ್ಟರೆ ಅಡ್ಡಿಯಿಲ್ಲ.

### ದುಂಡಾಣು ರೋಗ

ರಸಬಾಳೆ, ಏಲಕ್ಕಿ, ಪಚ್ಚಬಾಳೆಗಳು, ಮದರಂಗ ಎಲ್ಲವಕ್ಕೂ ಇದು ಕಾಡುತ್ತದೆ. ಈಗ್ಗೆ ಕೆಲ ವರ್ಷದಿಂದ ಈ ದುಂಡಾಣು ಹಾವಳಿ ಸಾಕಷ್ಟು ಹೆಚ್ಚಾಗಿದ್ದು ಬೆಳೆ ಹಾಳಾಗುತ್ತಿದೆ.

ಇದು ಬೇರುಗಳಿಂದ ಬರುತ್ತದೆ. ಇದು ಕಣ್ಣಿಗೆ ಕಾಣಿಸುವುದಿಲ್ಲ. ನೀರು, ಖನಿಜಾಂಶ ಹೀರುವ ಬೇರುಗಳನ್ನು ಆಕ್ರಮಿಸಿ ನೀರು ಮತ್ತು ಖನಿಜಾಂಶಗಳ ಹರಿವನ್ನು ತಡೆಯುತ್ತವೆ. ಇದರಿಂದ ಮೇಲಿನ ಎಲ್ಲ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಎಲೆ ಹಳದಿ ಬಣ್ಣ ಬಂದಿದ್ದರೆ ಅದಕ್ಕೆ ದುಂಡಾಣು ಬಂದಿದೆ ಎಂದು ಅರ್ಥ. ಇದು ಯಾವ ಹಂತದಲ್ಲಾದರೂ ಬರಬಹುದು.

**ದುಂಡಾಣು ರೋಗ ಯಾವಾಗ ಬರುತ್ತದೋ ಆಗ ಪನಾಮ ರೋಗಕ್ಕೂ ಆಹ್ವಾನವಿದೆ ಎಂದು ನಾವು ತಿಳಿದುಕೊಳ್ಳಬೇಕು.** ಏಕೆಂದರೆ ಇದು ಬೇರಿನಲ್ಲಿ ತನಗಾಗಿ ತೆರೆದುಕೊಂಡ ಬಾಗಿಲಲ್ಲಿ ಪನಾಮ ಫಂಗಸ್‌ಗಳು ನಿರಾಯಾಸವಾಗಿ ಪ್ರವೇಶಿಸುತ್ತವೆ. ಇದು ಏಲಕ್ಕಿ, ರಸಬಾಳೆಗಳಲ್ಲಿ ಅತಿ ಹೆಚ್ಚಾಗಿ ಕಂಡುಬರುತ್ತದೆ.

ಇದನ್ನು ತಡೆಯಲು ಮಣ್ಣಿಗೆ ಬೇವಿನ ಹಿಂಡಿ ಮೊದಲೇ ಕೊಡುವುದು ಒಳ್ಳೆಯದು. ಅಲ್ಲದೆ ರೋಗರಹಿತ ಕಂದುಗಳನ್ನು ಆಯ್ಕೆ ಮಾಡುವುದನ್ನು ಮರೆಯಬಾರದು.

## ಮಿಶ್ರ ಬೆಳೆ

ದುಂಡಾಣುಗಳ ನಿಯಂತ್ರಣಕ್ಕೆ ಬಾಳೆ ಗಿಡದ ಸುತ್ತ ನಾಲ್ಕು ಗಿಡಗಳಂತೆ ಚಂಡು ಹೂ ಹಾಕುವುದು ಒಳೆಯದು. ನಾಟಿ ಮಾಡಿ ಒಂದೂವರೆ ತಿಂಗಳಾದಾಗ ಇದನ್ನು ಹಾಕಬಹುದು. ಚಂಡು ಹೂ ಹಾಕುವುದರಿಂದ ಉತ್ಪನ್ನವೂ ಇದೆ. ಏನೂ ಖರ್ಚಿಲ್ಲದೆ ಚಂಡುಹೂ ಬೆಳೆ ಸಿಗುತ್ತದೆ. ಒಂದು ಎಕರೆಯಲ್ಲಿ 5 ಗುಂಟೆಯ ಚಂಡು ಹೂ ಉತ್ಪನ್ನ ಸುಲಭವಾಗಿ ಸಿಕ್ಕಿಬಿಡುತ್ತದೆ.

ಅಲ್ಲದೆ ಮಿಶ್ರ ಬೆಳೆಯಾಗಿ ಮೆಣಸಿನಕಾಯಿ, ದಪ್ಪ ಮೆಣಸಿನಕಾಯಿ ಎಲ್ಲ ಹಾಕಬಹುದು. ಇವೆಲ್ಲ ಮನೆ ಬಳಕೆಗೆ ಬರುತ್ತದೆ. ಬಾಳೆಯಲ್ಲಿ ಮಿಶ್ರ ಬೆಳೆಯಾಗಿ ಒಂದು ಬೆಳೆ ಶೇಂಗಾ ಹಾಕಬಹುದು. ಪಾವಗಡ, ಚಿತ್ರದುರ್ಗ ಮೊಳಕಾಲ್ಮೂರು, ಗಂಗಾವತಿ ಮುಂತಾದ ಬಯಲುಸೀಮೆ ಪ್ರದೇಶಗಳಲ್ಲಿ ಇದು ಉತ್ತಮವಾಗಿ ಬರುತ್ತದೆ. ಬಾಳೆಗೆ 2–3 ತಿಂಗಳಾಗಿದ್ದಾಗ ಮಧ್ಯದಲ್ಲಿ ಶೇಂಗಾ ಹಾಕಬಹುದು.

## ಇಳುವರಿ

ರೊಬಸ್ಟಾ ಮತ್ತು ಕ್ಯಾವಂಡಿಷ್ ಬಾಳೆಗಳಲ್ಲಿ ಎಕರೆಗೆ ಸುಮಾರು 20–25 ಟನ್ ಮತ್ತು ಇತರೆ ತಳಿಗಳಲ್ಲಿ 10–15 ಟನ್ ಇಳುವರಿಯನ್ನು ತೆಗೆಯಬಹುದು. ■







1 ದುಂಡಾಣುಗಳ ದಾಳಿಗೊಳಗಾದ ಬೇರುಗಳು
2 ಪನಾಮ ರೋಗಕ್ಕೆ ತುತ್ತಾದ ಗಿಡ
3 ಪನಾಮ ರೋಗಕ್ಕೆ ತುತ್ತಾದ ದಿಂಡಿನ ಒಳಭಾಗ.

## ಒಂದು ಸಲಹೆ ಕೊಡುವಿರಾ?

ನಾನು ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕಿನ ಕಂದಗಲ್ಲು ಎಂಬ ಗ್ರಾಮದ ರೈತನಾಗಿದ್ದು ಈ ಹಿಂದೆ ಮೆಕ್ಕೆ ಜೋಳ ಬೆಳೆಯುತ್ತಿದ್ದ 2 ಎಕರೆ ಕೆಂಪು ಮಣ್ಣಿನ ಭೂಮಿಯಲ್ಲಿ ಈ ವರ್ಷ ಜಿ–9 ತಳಿಯ ಬಾಳೆ ಹಾಕಬೇಕೆಂದಿದ್ದೇನೆ. ನನ್ನ ಬೋರ್‌ನಲ್ಲಿ 2 ಇಂಚು ನೀರು ಲಭ್ಯವಿದೆ. 10 ಟ್ರಾಕ್ಟರ್ ಕೊಟ್ಟಿಗೆ ಗೊಬ್ಬರ, 20 ಟ್ರಾಕ್ಟರ್ ಗೋಡು ಮಣ್ಣು, 1 ಕ್ವಿಂಟಲ್ ಬೇವಿನ ಹಿಂಡಿ ಕೊಡಬಲ್ಲೆ. ಸಸಿಯಿಂದ ಸಸಿಗೆ ಮತ್ತು ಸಾಲಿನಿಂದ ಸಾಲಿಗೆ 6 ಅಡಿ ಅಂತರ ಕೊಡಬೇಕೆಂದಿದೆ. ಇವೆಲ್ಲ ಕ್ರಮಗಳು ಮತ್ತು ಈ ಬಾಳೆಯ ನಾಟಿಯನ್ನು ಯಾವ ತಿಂಗಳಲ್ಲಿ ಮಾಡಬೇಕು ಎಂಬ ಬಗ್ಗೆ ಸಲಹೆ ನೀಡುವಿರಾ?

ಬಿ.ಬಹುಗುಣ
'ಪ್ರಯೋಗ ಪರಿವಾರ'ದ ಸದಸ್ಯರು, ಕೊಟ್ಟೂರು

ಪ್ರಿಯ ಬಹುಗುಣ,

ನೀವು ಹೇಳಿರುವ ಎಲ್ಲ ಅಂಶಗಳೂ ಸರಿಯಾಗಿದೆ. ಆದರೆ ಈಗ ಚಳಿ ಪ್ರಾರಂಭವಾಗುತ್ತಿದೆ. ಈಗ ಖಂಡಿತವಾಗಿಯೂ ಬಾಳೆ ಹಾಕಬೇಡಿ. ನೀವು ದೊಡ್ಡ ಬೆಳೆಗೆ ಕೈಹಾಕಲು ಹೊರಟಿರುವುದರಿಂದ ನಾಟಿಯ ಸಮಯದ ಬಗ್ಗೆ ಎಚ್ಚರಿಕೆ ಇರಲಿ. ಕೂಡ್ಲಿಗಿ ತಾಲೂಕಿನಲ್ಲಂತೂ ಚಳಿಗಾಲದಲ್ಲಿ ರಾತ್ರಿ ಉಷ್ಣಾಂಶ ಬಹಳ ಕಡಿಮೆ ಇರುತ್ತದೆ. ಈಗ ಬಾಳೆ ಹಾಕಿದರೆ ಇನ್ನೂ 3 ತಿಂಗಳ ತನಕ ಗಿಡ ಹಾಗೆ ಮುಟರಿಕೊಂಡೇ ಇರುತ್ತದೆ. ನೀವು ಏನಿದ್ದರೂ ಚಳಿ ಹೋದ ಮೇಲೆ ಹಾಕಬೇಕು. ಆದರೆ ಫೆಬ್ರವರಿ–ಮಾರ್ಚ್‌ಗೆ ಹಾಕಿದರೂ ಕೂಡ ನವಂಬರ್–ಡಿಸಂಬರ್‌ನಲ್ಲಿ ಮತ್ತೆ ನಿಮ್ಮ ಬೆಳೆ ಗೊನೆ ಬಿಡುವ ಸಮಯಕ್ಕೆ ಚಳಿಗೆ ಸಿಕ್ಕಿಹಾಕಿಕೊಂಡು ಬಿಡುತ್ತದೆ. ಆದ್ದರಿಂದ ನೀವು ಬರುವ ಮೇ–ಜೂನ್‌ಗೆ ಹಾಕುವುದು ಒಳ್ಳೆಯದು. ನಿಮ್ಮ ಪ್ರದೇಶಕ್ಕೆ ಅದೇ ಸೂಕ್ತ. ನಿಮಗೆ ನೀರಾವರಿ ಇರುವುದರಿಂದ ಈಗ ಒಂದು ಅಲ್ಪಾವಧಿ ಬೆಳೆ ಬೆಳೆದುಕೊಳ್ಳುವುದು ಒಳ್ಳೆಯದು. ಹಸಿಮೆಣಸಿನ ಕಾಯಿ, ದಪ್ಪ ಮೆಣಸು, ಸೂರ್ಯಕಾಂತಿ, ಈರುಳ್ಳಿ ಯಾವುದಾದರೂ ಹಾಕಬಹುದು.

ಕೆ. ರವಿ

# ಬಾಳೆಯಲ್ಲಿ ಬಹುಬೆಳೆ ಲಾಭದಾಯಕ

'ಬಡವನಿಗೆ ಬಾಳೆ, ಬಾಳೆಗೊಂದು ಗೊನೆ, ಬಾಳಿಗೊಂದು ಗುರಿ' ಇದೆಲ್ಲಾ ಬಾಳೆ ಬೆಳೆದ ನಮ್ಮ ಹಿರಿಯರ ಅನುಭವದ ಮಾತುಗಳು. ಅದರರ್ಥ ಬಾಳೆ ಸಣ್ಣ ರೈತನ ಬದುಕಿಗೆ ಆಧಾರವಾಗುತ್ತದೆ ಎಂಬುದು. ಆದರೆ ಇಂದು ಬಾಳೆ ಬೆಳೆಯಲು ರೈತರು ಮಾಡಿಕೊಳ್ಳುತ್ತಿರುವ ಖರ್ಚು ವಿಪರೀತ. ಆದರೂ ಅನೇಕ ವೇಳೆ ನಷ್ಟ ಅನುಭವಿಸುತ್ತಾರೆ. ಬಾಳೆ ನೆಟ್ಟು ಒಂದು ಗೊನೆ ಬಂದ ಮೇಲೆ ಅದನ್ನು ಕಿತ್ತು ಮರಳಿ ನಾಟಿಮಾಡುವುದು ಈಗಿನ ಪದ್ಧತಿಯಾಗಿದೆ. ಬಾಳೆ ನೆಟ್ಟ ದಿನದಿಂದ ಅಗತ್ಯಕ್ಕಿಂತ ತೀರಾ ಹೆಚ್ಚಾಗಿ ನೀರು ಪೂರೈಸುವುದು, ವಿಪರೀತ ರಸಗೊಬ್ಬರ, ಪ್ರತಿಯೊಂದು ಕೀಟ–ರೋಗಕ್ಕೂ ವಿಷ ಸಿಂಪಡಣೆ ಇದೆಲ್ಲಾ ಪರಿಪಾಠವಾಗಿ ಹೋಗಿದೆ.

ಆದರೆ ಬಾಳೆ ಬೇಸಾಯದಲ್ಲಿ ಇದ್ಯಾವುದನ್ನೂ ಮಾಡಬೇಕಾಗಿಲ್ಲ. ಈ ಪದ್ಧತಿಗಳನ್ನು ಪಾಲಿಸದೆಯೇ ಉತ್ತಮವಾದ ಬಾಳೆ ಇಳುವರಿ ಪಡೆಯಲು ನಮ್ಮ ತೋಟದಲ್ಲಿ ಸಾಧ್ಯವಾಗಿದೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ಹಿಂದೆಯೂ ಹೇಳಿದ್ದೆ. ಇಲ್ಲಿ ಮತ್ತಷ್ಟೂ ವಿವರಗಳನ್ನು ಕೊಡುವುದರ ಜೊತೆಗೆ ಬಾಳೆಯಲ್ಲಿ ಬಹುಬೆಳೆ ಪದ್ಧತಿ ಅನುಸರಿಸುವುದರಿಂದ ಇರುವ ಲಾಭಗಳನ್ನು ಕುರಿತು ಹೇಳಲು ಇಚ್ಚಿಸುತ್ತೇನೆ.



● ಬಸವರಾಜು ಬಿ. ಸಂತೇಶಿವರ

**ಒಂದು ಗಿಡಕ್ಕೆ ಒಂದು ದಿನಕ್ಕೆ ಒಂದು ಲೀಟರ್ ಲೆಕ್ಕದಲ್ಲಿ ನೀರು ಪೂರೈಸಿದರೆ ಸಾಕು**

## ನೀರು

ಬಾಳೆಗೆ ಮುರಿ ಕಟ್ಟುವುದು ಅನ್ನುವ ಪದ್ಧತಿಯಿದೆ. ಗಿಡ–ಗಿಡವನ್ನೂ ಸುತ್ತಿಕೊಂಡು ಹೋಗುವ ರೀತಿಯಲ್ಲಿ ನೀರು ಹಾಯಿಸುತ್ತಾರೆ. ಇಲ್ಲಿ ವರ್ಷಕ್ಕಾಗುವಷ್ಟು ನೀರನ್ನು ಕೆಲವೇ ದಿನಗಳಲ್ಲಿ ಕೊಡುತ್ತಿರುತ್ತಾರೆ. ಖಂಡಿತವಾಗಿಯೂ ಬಾಳೆಗೆ ಇಷ್ಟು ನೀರು ಬೇಕಿಲ್ಲ.

ನೀರು ಹೆಚ್ಚು ಕೊಟ್ಟಷ್ಟೂ ರೋಗಗಳು ಬರುವುದು ಹೆಚ್ಚು. ಬಾಳೆಯನ್ನು ನೆಟ್ಟ ದಿನದಿಂದ ನೀರಿನ ಪೂರೈಕೆಯಲ್ಲಿ ವ್ಯತ್ಯಾಸವಾಗದಂತೆ ನೋಡಿಕೊಂಡರೆ ಸಾಕು. ಒಂದು ಗಿಡಕ್ಕೆ ಒಂದು ದಿನಕ್ಕೆ ಒಂದು ಲೀಟರ್ ಲೆಕ್ಕದಲ್ಲಿ ನೀರು ಪೂರೈಸಿದರೆ ಸಾಕು. ಕಾಲುವೆ ಮುಖಾಂತರ ಕೊಡುವುದಾದರೆ ವಾರಕ್ಕೊಮ್ಮೆ ಹಾಯಿಸಿದರೆ ಸಾಕು. ನಾಟಿ ಮಾಡಿದ 3, 4 ಮತ್ತು 5ನೇ ತಿಂಗಳು ಹೀಗೆ ಒಂದೊಂದು ಲೀಟರ್ ನೀರು ಕೊಟ್ಟರೆ ಸಾಕು. ಆನಂತರ ಬೇಕಿಲ್ಲ. ಭೂಮಿಯ ತೇವಾಂಶವೇ ಸಾಕಾಗುತ್ತದೆ. ಆದರೆ ಇಲ್ಲಿ ಹೊದಿಕೆ ಮಾಡುವುದು ಬಹಳ ಮುಖ್ಯ. ಈಗ ನನ್ನ ತೋಟವನ್ನೇ ನೋಡಿ. ಎಷ್ಟೊಂದು ಕಳೆಗಳು ಬೆಳೆದಿವೆ. ಪಾರ್ಥೇನಿಯಂ ಅಂತೂ ಯತೇಚ್ಛವಾಗಿ ಬೆಳೆದಿದೆ. ಬೀಜವಾಗುವ ಮುಂಚೆ ಅದನ್ನೆಲ್ಲ ನಾನು ಕೊಚ್ಚಿ ಹಾಕಿ ಮಣ್ಣಿಗೆ ಹೊದಿಕೆ ಕೊಡುತ್ತೇನೆ. ಇದರಿಂದ ಮಣ್ಣಿನ ತೇವಾಂಶವೂ ಕಾಪಾಡುತ್ತದಲ್ಲದೆ ಪೋಷಕಾಂಶವೂ ಸಿಗುತ್ತದೆ. ಬಾಳೆ ತೋಟದಲ್ಲಿ ವೆಲ್ವೆಟ್ ಬೀನ್ಸ್, ಅವರೆಗಳನ್ನು ಹಾಕುವ ಮೂಲಕ ಉತ್ತಮವಾದ ಹಸಿರಿನ ಹೊದಿಕೆ ಮಾಡಬಹುದು.

ಬಾಳೆಗೆ ಕೆಂಪು ಮಣ್ಣು ಅಥವಾ ಕೆಂಪು ಮಿಶ್ರಿತ ಗೋಡು ಮಣ್ಣು ಉತ್ತಮ. ಮರಳಿನ ಅಂಶ ಹೆಚ್ಚಾಗಿರುವ ಮಣ್ಣು ಬಾಳೆ ಬೇಸಾಯಕ್ಕೆ ಸೂಕ್ತವಲ್ಲ.

ಮೊದಲ ಸಲ ನಾಟಿ ಮಾಡುವಾಗ 2/2/2 ಅಡಿ ಅಳತೆಯ ಗುಣಿ ತೆಗೆದು ಅದರಲ್ಲಿ ಹಸುರೆಲೆ ಗೊಬ್ಬರ ಹಾಕಿ ನಂತರ ಗೆಡ್ಡೆ ಇಟ್ಟು ಮೇಲೆ ಕಂಪೋಸ್ಟ್ ಗೊಬ್ಬರ ಹಾಕಿ ಅದರ ಮೇಲೆ ಗೋಡು ಹಾಕುತ್ತೇವೆ. ನಾಟಿ ಮಾಡಿ ಒಂದು ತಿಂಗಳ ನಂತರ ಕಶಾಯ ಕೊಡಲು ಶುರು ಮಾಡುತ್ತೇವೆ. 30 ಕೆ.ಜಿ ಸಗಣಿ, 30 ಲೀಟರ್ ಗಂಜಲ, 200 ಗ್ರಾಂ ಸುಣ್ಣ ಒಂದು ಕೆ.ಜಿ ಕಪ್ಪು ಬೆಲ್ಲ, 30 ಲೀಟರ್ ನೀರು ಸೇರಿಸಿ ಪ್ರತಿದಿನ ಕಲಕುತ್ತಿರುತ್ತೇವೆ.

ಒಂದು ವಾರದ ನಂತರ ಅದನ್ನು ಅದಕ್ಕೆ 5 ಲೀಟರ್ ಹುಳಿ ಮೊಸರು ಬೆರೆಸಿ 24 ಗಂಟೆಗಳು ಬಿಟ್ಟು ಒಂದು ಲೀಟರ್ ಕಶಾಯಕ್ಕೆ 5 ಲೀಟರ್ ನೀರು ಹಾಕಿ ತೆಳುವಾಗಿಸಿ ಒಂದು ಬಾಳೆ ಗಿಡಕ್ಕೆ ಒಂದು ಲೀಟರ್‌ನಂತೆ ಕೊಡುತ್ತೇವೆ. ಬಾಳೆ ಗಿಡದ ಸುತ್ತ 2 ಅಡಿ ವ್ಯಾಪ್ತಿಯಲ್ಲಿ ಇದನ್ನು ಕೊಡಬೇಕು. ಗಿಡದ ಬುಡಕ್ಕೆ ಒಂದುವರೆ ಅಡಿಯ ಗುನ್ನ ಮಾಡಿ ಅದರಲ್ಲಿ ಕಶಾಯವನ್ನು ಕೊಡುತ್ತೇವೆ. ತಿಂಗಳಿಗೆ ಒಂದು ಸಲ ಇದನ್ನು ಕೊಡುತ್ತೇವೆ. ಪ್ರತಿ ತಿಂಗಳು ಕಶಾಯ ಕೊಡುವುದನ್ನು ನಿಲ್ಲಿಸಬಾರದು.

ಹಿಂದೆ ಹೇಳಿದಂತೆ ನಮ್ಮ ತೋಟದಲ್ಲಿ ಬರುವ ಒಂದು ಕಳೆಯನ್ನೂ ನಾವು ಕಿತ್ತು ಬಿಸಾಡುವುದಿಲ್ಲ. ಅದೆಲ್ಲವನ್ನೂ ಭೂಮಿಗೇ ಕೊಡುತ್ತೇವೆ. ಕಳೆ ಹೆಚ್ಚು ಬಂದಷ್ಟೂ ನಮಗೆ ಒಳ್ಳೆಯದು. ಒಂದೊಂದು ಕಳೆಯಲ್ಲಿ ಒಂದೊಂದು ಗುಣ ಇರುತ್ತದೆ. ಯಥೇಚ್ಛವಾಗಿ ಸಾರಜನಕ ಒದಗಿಸುತ್ತವೆ. ಕೊಚ್ಚಿ ಹಾಕಿ ಮೇಲೆ ಕಶಾಯ ಕೊಡುವುದರಿಂದ ಒಂದು ತಿಂಗಳಲ್ಲೇ ಅದು ಚನ್ನಾಗಿ ಕೊಳೆತು ಭೂಮಿಗೆ ಪೋಷಕಾಂಶ ಒದಗಿಸುತ್ತವೆ.

## ಕೀಟ– ರೋಗ

ನನ್ನ ತೋಟದಲ್ಲಿ ಬಾಳೆಗೆ ಕೀಟ ರೋಗಗಳ ಬಾಧೆ ಇಲ್ಲ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಈ ಪ್ರದೇಶದಲ್ಲಿ ಬಾಳೆಗೆ ಪನಾಮ ರೋಗ ಮತ್ತು ಕೆಂಪು ಮೂತಿ ಹುಳದ ಕಾಟ ಹೆಚ್ಚು. ಗಿಡದ ಸುಳಿ ಬಿಸಿಲಲ್ಲಿ ತಾಮ್ರದ ಬಣ್ಣಕ್ಕೆ ಕಾಣುತ್ತಿದ್ದರೆ, ಕಾಂಡಗಳು ಒಡೆದುಕೊಂಡಿದ್ದರೆ ಅದು ಪನಾಮ ರೋಗ ಚಿನ್ಹೆ. ಇದಕ್ಕೆ ಪಂಚಗವ್ಯ ಕೊಡುವುದು ಪರಿಣಾಮಕಾರಿ (ಡಾ. ಕೆ. ರವಿಯವರ ಲೇಖನ ನೋಡಿ).

ಇನ್ನು ಕೆಂಪು ಮೂತಿ ಹೆಚ್ಚಾಗಿ ಬರುವುದು ಗೊನೆ ತೆಗೆದುಕೊಂಡ ಮರವನ್ನು ಅರ್ಧ ಕಡಿದು ಬಿಟ್ಟಾಗ. ಅದು ಹೋಗಿ ಅಲ್ಲಿ ಸೇರಿಕೊಳ್ಳುತ್ತದೆ. ಆದ್ದರಿಂದ ಗೊನೆಯನ್ನು ಮಾತ್ರ ಕಡಿದು ಮರವನ್ನು ಹಾಗೆಯೇ ಬಿಡಬೇಕು. ವಿಪರೀತ ನೀರು ಪೂರೈಕೆ ಮಾಡುವುದರಿಂದ ಗೆಡ್ಡೆ ಕೊಳೆ ರೋಗ ಹೆಚ್ಚಾಗಿ ಬರುತ್ತದೆ. ಇದನ್ನು ನೀರು ನಿರ್ವಹಣೆಯಿಂದ ನಿಯಂತ್ರಿಸಬಹುದು.

## ಬಾಳೆಯಲ್ಲಿ ಬಹುಬೆಳೆ

ಬಾಳೆಯನ್ನು ಒಂದು ಗೊನೆ ಬಿಟ್ಟಮೇಲೆ ಅದನ್ನು ಕಿತ್ತು ಹೊಸದಾಗಿ ನಾಟಿ ಮಾಡಬೇಕು ಎನ್ನುವುದು ಎಲ್ಲರೂ ನಂಬಿಕೊಂಡಿರುವುದು. ಆದರೆ ಖಂಡಿತವಾಗಿಯೂ ಅದರ ಅಗತ್ಯವಿಲ್ಲ. ಬಾಳೆಯಲ್ಲಿ ಬಹುಬೆಳೆಯನ್ನು ಯಶಸ್ವಿಯಾಗಿ ಬೆಳೆಯಬಹುದು.

ಹಿಂದೆ ಹೇಳಿದಂತೆ ಗುಣಿ ತೆಗೆದು ಅದರಲ್ಲಿ ಒಳ್ಳೆ ದಪ್ಪವಾಗಿ ಬೆಳೆದಿರುವ ಉತ್ತಮ ಗುಣಮಟ್ಟದ ಮರಿಗಳನ್ನು ಕಿತ್ತು ತಂದು ಬೇರುಗಳನ್ನು ತೆಗೆದು ಗುಣಿಯಲ್ಲಿ ಅದನ್ನು ನಿಲ್ಲಿಸದೆ ಮಲಗಿಸಿ ಬಿಡಬೇಕು. ಮೇಲೆ ಕಂಪೋಸ್ಟ್ ಗೊಬ್ಬರ ಹಾಕಿ ವಾರಕ್ಕೊಮ್ಮೆ ಹಿಂದೆ ಹೇಳಿದ ಪ್ರಮಾಣದಲ್ಲಿ ನೀರು ಪೂರೈಸುತ್ತಿದ್ದರೆ 15 ದಿನಗಳಲ್ಲಿ ಗೆಡ್ಡೆಯಿಂದ ಮರಿ ಹೊರಬರುತ್ತದೆ. ಇಲ್ಲಿ ಎಷ್ಟು ಉತ್ತಮ ಗುಣಮಟ್ಟದ ಮರಿ ಬೆಳೆದು ಬರುತ್ತದೆ ಎಂದು ನೋಡಿದರೆ ಆಶ್ಚರ್ಯವಾಗುತ್ತದೆ. ಆರು ತಿಂಗಳವರೆಗೂ ಬೇರೆ ಮರಿಗಳು ಬಾರದೆ ಇದೊಂದೇ ಮರಿ ಸೊಗಸಾಗಿ ಬೆಳೆಯುತ್ತಿರುತ್ತದೆ.

ಒಂದು ತಿಂಗಳಿಂದ ಇದಕ್ಕೆ ಕಶಾಯ ಪೂರೈಸಲು ಪ್ರಾರಂಭಿಸುತ್ತೇವೆ. ಈಗ ಬುಡದಲ್ಲಿ ಬೇರೆ ಮರಿಗಳು ಬರುತ್ತಿದ್ದರೆ ಅವನ್ನು ಕತ್ತರಿಸಿ ಹಾಕುತ್ತೇವೆ. ಈಗ ಗಿಡದಲ್ಲಿ ವಾರಕ್ಕೊಂದು ಹೊಸ ಎಲೆ ಬರುತ್ತಿರುತ್ತದೆ. 54ನೇ ಎಲೆಯೊಂದಿಗೆ ಹೂ ಬರುತ್ತದೆ. ಹೂ ಬಂದಾಗ ಬಾಳೆ ಮರಕ್ಕೆ ತಾಗಿಕೊಂಡು ಬೆಳೆಯುತ್ತಿರುವ ಒಂದು ಮರಿಯನ್ನು ಬೆಳೆಯಲು ಬಿಡುತ್ತೇವೆ.

ಹೂ ಬಂದ 3 ತಿಂಗಳಲ್ಲಿ ಬಾಳೆಗೊನೆ ಕಟಾವಿಗೆ ಬರುತ್ತದೆ. ಈಗ ಬಾಳೆಗೊನೆಯನ್ನು ಮಾತ್ರ ಕತ್ತರಿಸಿ ಬಾಳೆಮರವನ್ನು ಹಾಗೇ ಬಿಟ್ಟುಕೊಳ್ಳುತ್ತೇವೆ. ಈ ರೀತಿ ಬಿಟ್ಟ ಮರ ನಿಧಾನಕ್ಕೆ ಕರಗುತ್ತಾ ಮರದಿಂದ ನೀರು, ಲವಣಾಂಶಗಳು ಇದರ ಬುಡದಲ್ಲಿ ಬಿಟ್ಟ ಮರಿಗೆ ಪೂರೈಕೆಯಾಗುವುದರಿದ ಆ ಮರಿಗೆ ಹೆಚ್ಚು ನೀರು ಕೊಡಬೇಕಾಗಿ ಬರುವುದಿಲ್ಲ. ಅದಕ್ಕೆ 15 ದಿನಕ್ಕೊಮ್ಮೆ ನೀರು ಪೂರೈಸಿದರೂ ಸಾಕು. ಆರೋಗ್ಯವಂತವಾಗಿರುತ್ತದೆ. ಈಗ ಗಿಡ 6 ತಿಂಗಳು ಬೆಳೆದು ಗೊನೆ ಕೊಡುತ್ತದೆ. ಈ ವೇಳೆಗೆ ಗೊನೆ ಕತ್ತರಿಸಿ ಬಿಟ್ಟ ಆ ಮೊದಲ ಗಿಡ ಕರಗಿ ಬುಡದಲ್ಲಿ ಗೂಡಿ ಬಿದ್ದಿರುತ್ತದೆ. ಈ ಭಾಗಕ್ಕೆ ಕಂಪೋಸ್ಟ್ ಗೊಬ್ಬರ ಪೂರೈಸುತ್ತೇವೆ. ಬೆಳೆಯುತ್ತಿರುವ ಎರಡನೇ ಗಿಡದಲ್ಲಿ ಹೂ ಬಂದಾಗ ಅದರ ಬುಡದಲ್ಲಿ ಹಿಂದೆ ಮಾಡಿದಂತೆಯೇ ಮರಿಯನ್ನು ಬಿಟ್ಟುಕೊಳ್ಳುತ್ತೇವೆ. ಈ ವೇಳೆಗೆ ನಾವು ಪೂರೈಸಿರುವ ಕಂಪೋಸ್ಟ್ ಗೊಬ್ಬರ ಈ ಮೂರನೇ ಬೆಳೆಗೆ ಉಪಯೋಗವಾಗುತ್ತದೆ. ಈ ಮೂರನೇ ಬೆಳೆಯನ್ನು ಬಿದಿರು ಕಂಬ ನೆಟ್ಟು ಕಟ್ಟಿದರೆ ಒಳ್ಳೆಯದು.

ಈ ಪ್ರಕಾರವಾಗಿ ನಾವು ಹೊಸ ಗೆಡ್ಡೆ ನಾಟಿ ಮಾಡದೆಯೇ ಮರಿಗಳನ್ನು ಬಿಟ್ಟುಕೊಳ್ಳುತ್ತಾ 10–12 ಗೊನೆಗಳವರೆಗೂ ಪಡೆಯಬಹುದು. ಇಲ್ಲಿ ಪ್ರತಿಸಲ ನಾಟಿಗೆ ಖರ್ಚು ಮಾಡಬೇಕಾಗಿಲ್ಲವಾಗಿ ಖರ್ಚು ಬಹಳ ಕಡಿಮೆ. ಮಣ್ಣಿನ ಆರೋಗ್ಯ ಕೂಡ ವೃದ್ಧಿಯಾಗುತ್ತದೆ.

ನನ್ನ ತೋಟದಲ್ಲಿ 25ನೇ ಗೊನೆ ಬಂದಿರುವ ಗಿಡ ಇದೆ. ಗೊನೆಗಳು ಸಣ್ಣಗೆ ಬರಲು ಶುರುವಾದಾಗ ಮತ್ತೆ ಹೊಸದಾಗಿ ನಾಟಿ ಮಾಡಬೇಕು. ಇಲ್ಲದಿದ್ದರೆ ಇಳುವರಿ ಕದಿಮೆಯಾಗುತ್ತದೆ. ಈ ವೇಳೆಗಾಗಲೇ ಬುಡದಲ್ಲಿ 2 ಅಡಿ ಸುತ್ತಳತೆಯಷ್ಟು ಭಾಗ ಸ್ಪಂಜಿನಂತಾಗಿ ತುಳಿದರೆ ಒಳಹೋಗುತ್ತಿರುತ್ತದೆ. ಆಗ ಎಲ್ಲ ಮರಿಗಳನ್ನು ಕಿತ್ತು ಒಂದು ಮರಿಯನ್ನು ಮಾತ್ರ ಮಲಗಿಸಿ ಕಾಲಿನಿಂದ ತುಳಿದರೆ ಅದು ಎರಡೂವರೆ ಮೂರು ಅಡಿ ಆಳದವರೆಗೂ ಹೋಗುತ್ತದೆ. ಈಗ ಈ ಮಣ್ಣಿನಲ್ಲಿ ಸೂಕ್ಷ್ಮಜೀವಿಗಳು, ಎರೆಹುಳುಗಳು ಯಥೇಚ್ಛವಾಗಿ ಇರುವುದರಿಂದ ಈ ಎರಡನೇ ಸಲ ನೆಟ್ಟ ಬಾಳೆ ಮರಿ ಒಳ್ಳೆ ಆರೋಗ್ಯವಂತವಾಗಿ ಬೆಳೆದು ಉತ್ತಮವಾದ ಫಲ ಕೊಡುತ್ತದೆ. ■

### ಬಹುಬೆಳೆ ಪದ್ಧತಿಯ ಲಾಭ

**1. ಇಡೀ ತೋಟವನ್ನು ಮತ್ತೆ ಮತ್ತೆ ನಾಟಿ ಮಾಡಬೇಕಾಗಿಲ್ಲ. ಅವಶ್ಯವಿದ್ದ ಗಿಡಗಳನ್ನು ಮಾತ್ರ ನಾಟಿ ಮಾಡುತ್ತಾ ಹೋಗುವುದರಿಂದ ಲೇಬರ್ ಸಮಸ್ಯೆ ಬಹುತೇಕ ತೀರಿತೆಂದೇ ಲೆಕ್ಕ.**

**2.ಈ ಪದ್ಧತಿಯಲ್ಲಿ ನೀರು ತುಂಬಾ ಉಳಿತಾಯವಾಗುತ್ತದೆ.**

**3. ಪೋಷಕಾಂಶದ ಅವಶ್ಯಕತೆ ಕಡಿಮೆಯಾಗುತ್ತದೆ.**

**4. ಖರ್ಚು ವಿಪರೀತ ಕಡಿಮೆಯಾಗುತ್ತದೆ.**

**5. ಆರರಿಂದ ಎಂಟು ತಿಂಗಳಿಗೇ ಒಂದು ಗೊನೆ ಸಿಗುತ್ತದೆ. ಹೊಸದಾಗಿ ನಾಟಿ ಮಾಡಿದಾಗ ಗೊನೆ ಬರಲು 12–14 ತಿಂಗಳು ಬೇಕಾಗುತ್ತದೆ.**



ಕಶಾಯ ತಯಾರಿಕೆ

# ಮಳೆ ಆಧರಿತ
# ಸಾವಯವ ಸಾಗುವಳಿ

● ಸೋಮನಾಥ ರೆಡ್ಡಿ ಪೂರ್ಮಾ

**ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕು ಕೋಡ್ಲ ಗ್ರಾಮದ ಸೋಮನಾಥರೆಡ್ಡಿ ಪೂರ್ಮಾ, ಕರ್ನಾಟಕದ ಒಣಭೂಮಿ ಸಾವಯವ ಕೃಷಿಕರಲ್ಲಿ ಪ್ರಮುಖರು. ಅವರ ಸಾವಯವ ಕೃಷಿಯ ಇತ್ತೀಚಿನ ವಿದ್ಯಮಾನಗಳು ಇಲ್ಲಿವೆ.**

ಮಳೆಯಾಶ್ರಿತ ಬೇಸಾಯದಲ್ಲಿ ಕಳೆದ ಹತ್ತು ವರ್ಷದಿಂದ ನಾನು ಸಾವಯವ ಕೃಷಿಯಲ್ಲಿ ಉದ್ದು, ಹೆಸರು, ತೊಗರಿ, ಜೋಳ, ನವಣೆ, ಕಡಲೆ ಮತ್ತು ಅನೇಕ ಮಿಶ್ರ ಬೆಳೆಗಳನ್ನು ಬೆಳೆಯುತ್ತಿದ್ದೇನೆ. ಈಗ ನಮ್ಮ ಭೂಮಿ ಕಾಲಿಟ್ಟರೆ ತುಂಬಾ ಮೆತ್ತಗಿದೆ. ಇದು ಪೂರ ಮಳೆಯಾಶ್ರಿತ ಬೇಸಾಯ. ನೀರಿನ ಯಾವ ಆಸರೆಯೂ ಇಲ್ಲ. ನಾನು ಉಪಯೋಗ ಮಾಡುತ್ತಿದ್ದ ಒಂದು ತೆರೆದ ಬಾವಿ ಈಗ ನನ್ನ ತಮ್ಮನಿಗೆ ಹೋಗಿದೆ.

ಈ ಬಾರಿ ನಮಗೆ ಹೆಸರು ಮತ್ತು ಉದ್ದಿನಲ್ಲಿ ದಾಖಲೆ ಇಳುವರಿ ಬಂದಿದೆ. ಕಳೆದ ಹತ್ತು ವರ್ಷಗಳಲ್ಲಿ ನಾವು ಕಂಡ ದಾಖಲೆ ಇಳುವರಿ ಇದು ಎಂದರೆ ತಪ್ಪಿಲ್ಲ. ಈ ವರ್ಷ ಇಷ್ಟು ಉತ್ತಮ ಇಳುವರಿ ಪಡೆಯಲು ಅನೇಕ ಅಂಶಗಳು ಪರಸ್ಪರ ಸಹಾಯಕವಾಗಿವೆ.

ಮೊದಲನೆಯದಾಗಿ ಮಳೆ. ಈ ವರ್ಷ ಬರದ ವರ್ಷವಾದರೂ ನಮಗೆ ಹೆಸರು, ಉದ್ದುಗಳಿಗೆ ಅಗತ್ಯವಾದ ಮಳೆಗಳು ಚನ್ನಾಗಿ ನಡೆಸಿದವು. ಜೂನ್ 16ಕ್ಕೆ ಒಣ ಮಣ್ಣಿಗೆ ಹೆಸರು ಬಿತ್ತನೆ ಮಾಡಿದೆವು. ಬಿತ್ತಿದ 4 ದಿವಸದಲ್ಲಿ ಮಳೆ ಪ್ರಾರಂಭವಾಯಿತು. ಮೃಗಶಿರ ಕೊನೆ ಪಾದ, ಆರಿದ್ರಾ, ಪುನರ್ವಸು ಮಳೆಗಳು ಚನ್ನಾಗಿ ನಡೆಸಿದವು. ಎರಡು ದಿನ ಬಿಡುವು ಕೊಟ್ಟು, ಕೊಟ್ಟು ನಿರಂತರವಾಗಿ ಮಳೆ ಬರುತ್ತಿತ್ತು. ಇದರಿಂದ ಬೆಳೆಗಳಿಗೆ ಅಗತ್ಯವಾದ ತೇವಾಂಶ ಸಿಕ್ಕಿತು. ಸ್ವಂತ ಜಮೀನು 5 ಎಕರೆ, ಗುತ್ತಿಗೆ ಜಮೀನು 5 ಎಕರೆ ಜಮೀನು(ಎರಡೂ ಬೇರೆ ಬೇರೆ ಕಡೆ ಇದೆ) ಒಟ್ಟು 10 ಎಕರೆಗೆ ಹೆಸರು ಹಾಕಿದೆವು. 5 ಎಕರೆ ಹೊಲದಲ್ಲಿ ಉದ್ದು, 5 ಎಕರೆಗೆ ತೊಗರಿ(ಸಾಲುಬೆಳೆಯಾಗಿ ನವಣೆ) ಮುಂಗಾರಿಗೆ ಹಾಕಿದೆವು. ಇನ್ನೊಂದು ಪ್ಲಾಟನಲ್ಲಿ ಎಳ್ಳು, ಉದ್ದು ಹಾಕಿದೆವು. ಹೆಸರು 64 ದಿನದ ಬೆಳೆ. ಉದ್ದು 76 ದಿನದ ಬೆಳೆ.

ಎರಡನೆಯದಾಗಿ ಚೌಕಿ ಮಡಿ. ಮೂರನೆಯದಾಗಿ ಉತ್ತಮ ಸಾವಯವ ಗೊಬ್ಬರ. ನಾಲ್ಕನೆಯದಾಗಿ, ಬೀಜ, ಬೀಜೋಪಚಾರ ಮತ್ತು ಸಾವಯವ ವಿಧಾನಗಳ ಪಾಲನೆ.

### ಚೌಕಿ ಮಡಿ

ಸಾವಯವ ರೈತನಾದ ನಾನು ಪೋಷಕಾಂಶ ನಿರ್ವಹಣೆಗೆ ಕೊಡುವಷ್ಟು ಮಹತ್ವವನ್ನೇ ನನ್ನ ಜಮೀನಿನ ಮಣ್ಣು ಮತ್ತು ನೀರು ನಿರ್ವಹಣೆಗೆ ಕೊಡುತ್ತೇನೆ. ಕಳೆದ ಅನೇಕ ವರ್ಷಗಳಿಂದ ನಾನು ತಪ್ಪದೆ ಚೌಕಿ ಮಡಿ ವಿಧಾನ ಮಾಡುತ್ತಿದ್ದು ಇದು ನನಗೆ ತುಂಬಾ ಒಳ್ಳೆ ಫಲಿತಾಂಶ ಕೊಟ್ಟಿದೆ. ಈ ವಿಧಾನದಿಂದ ನನ್ನ ಹೊಲದ ಮಣ್ಣಿನ ಕೊಚ್ಚಣೆ ಸಂಪೂರ್ಣ ತಡೆದಿದೆ. ಮತ್ತು ನನ್ನ ಹೊಲದಲ್ಲಿ ಬಿದ್ದ ನೀರು ಅಲ್ಲೇ ಇಂಗಲು ಸಾಧ್ಯವಾಗಿದೆ. ಹೀಗಾಗಿ ಹೊಲಕ್ಕೆ ಕೊಡುವ ಸಾವಯವ ಪೋಷಕಾಂಶಗಳು ಮತ್ತು ಹೊಲದಲ್ಲಿ ಉತ್ಪತ್ತಿಯಾದ ಸಾವಯವ ಜೈವಿಕ ಪದಾರ್ಥಗಳು ಹೊಲದಲ್ಲೇ ಉಳಿದು ಸಂಪೂರ್ಣ ಪ್ರಯೋಜನ ಪಡೆಯಲು ಸಾಧ್ಯವಾಗಿದೆ. ನನ್ನ ಅನುಭವದಲ್ಲಿ ಮಳೆಯಾಶ್ರಿತ ಬೇಸಾಯದಲ್ಲಿ ಮಣ್ಣು ಮತ್ತು ನೀರು ಸಂರಕ್ಷಣೆ ಚೌಕಿ ಮಡಿಗಿಂತ ಉತ್ತಮ ವಿಧಾನ ಕಂಡುಬಂದಿಲ್ಲ.

ನಾನು ಚೌಕಿ ಮಡಿ ಮಾಡುವುದರಿಂದ ನನಗೆ ಎಲ್ಲಾ ಬೆಳೆಗಳ ಇಳುವರಿಯಲ್ಲಿ ಗಮನಾರ್ಹ ಹೆಚ್ಚಳವಾಗಿದೆ. ಅಲ್ಲದೆ ನಮಗೆ ಒಂದು ತಿಂಗಳು ಮಳೆ ಹೋದಾಗಲೂ ಭೂಮಿಯಲ್ಲಿ ತೇವಾಂಶ ಇದ್ದು ಬೆಳೆ ನಾಶವಾಗುವುದಿಲ್ಲ.



ನಾನು ಮೊದಲಿಗೆ ಕೃಷಿ ಇಲಾಖೆಯಲ್ಲಿ ಸಬ್ಸಿಡಿಗೆ ಸಿಗುವ ಬಂಡ್ ಫಾರ್ಮರ್‌ನಿಂದ ಚೌಕಿ ಮಡಿ ಮಾಡುತ್ತಿದ್ದೆ. ಈಗ ಅದನ್ನೇ ಸುಧಾರಣೆ ಮಾಡಿ ನಮ್ಮದೇ ಬಂಡ್ ಫಾರ್ಮರ್ ಅಭಿವೃದ್ಧಿಪಡಿಸಿದ್ದೇವೆ. ಮೇಲೆ ಪಟ್ಟಿ ಹೊಡೆದು ಎತ್ತರ ಹೆಚ್ಚು ಮಾಡಿ ಬೋದು ದೊಡ್ಡದಾಗುವ ಹಾಗೆ ಸುಧಾರಣೆ ಮಾಡಿದ್ದೇವೆ. ಇದರಿಂದ ಬೋದು 7 ಇಂಚು ಬರುತ್ತದೆ. ಈ ಬಂಡ್ ಫಾರ್ಮರ್‌ನಿಂದ ನಾವು 10/10, 15/15 ಅಥವಾ 20/20 ಅಡಿ... ಹೀಗೆ ನಮಗೆ ಅನುಕೂಲವಿದ್ದಷ್ಟು ಅಗಲದ ಚೌಕಿ ಮಡಿಗಳನ್ನು ಮಾಡಿಕೊಳ್ಳುತ್ತೇವೆ. ಎರಡೂ ದಿಕ್ಕಿನಿಂದ ಸಾಲು ಹೊಡೆದು ಚೌಕಿಗಳನ್ನು ಮಾಡುತ್ತೇವೆ. ಇದರ ಮೇಲೆ ಬೇಕಾದರೆ ಒಬ್ಬರು ನಿಲ್ಲಬಹುದು. ಇಲ್ಲ ಒಂದು ಕಲ್ಲು ಹೇರಿದರೂ ಸಾಕು. ಇಲ್ಲದಿದ್ದರೆ ಅತ್ತ ಇತ್ತ ಹೋಗುತ್ತಾ ಇರುತ್ತದೆ. ಅಷ್ಟು ಜಾಗದಲ್ಲಿ ಹೋಗುವ ಮಣ್ಣು ಇಷ್ಟೇ ಜಾಗದಲ್ಲಿ ಹೋಗಿ ಮಣ್ಣೆಲ್ಲ ಒಂದು ಕಡೆ ಹಾಕುತ್ತದೆ. ಉತ್ತಮ ಬೋದು ನಿರ್ಮಾಣ ಆಗುತ್ತದೆ.

ಬಂಡ್ ಫಾರ್ಮರ್‌ನಿಂದ ಚೌಕಿಮಡಿ ರಚನೆ



ಚೌಕಿ ಮಾಡಿದ ನಂತರ ಎತ್ತಿನ ತುಳಿತದಿಂದ ಏನಾದರೂ ಮಣ್ಣು ಸರಿದಿದ್ದರೆ ಸನಿಕೆಯಿಂದ ಸರಿಪಡಿಸಿಕೊಳ್ಳಬಹುದು. 7 ಇಂಚು ಬೋದಿದ್ದಾಗ ಬಿದ್ದ ನೀರು ಅಷ್ಟೂ ಹೊಲದಲ್ಲೇ ನಿಂತು ಹೊಲ ಸಂಪೂರ್ಣ ತೊಯ್ದು ತೇವಾಂಶ ಉತ್ತಮವಾಗಿ ಸಿಗುತ್ತದೆ. (ಚಿತ್ರಗಳು)

### ಬೀಜ

ಈ ಸಲ ನಾವು ಹಾಕಿರುವುದು ಮಿಂಚು ಹೆಸರು. ಸುಧಾರಿತ ತಳಿ. ಬಹಳ ವರ್ಷದಿಂದ ನಮ್ಮದೇ ಬೀಜ ಇಟ್ಟುಕೊಂಡಿದ್ದೇವೆ. ನಮ್ಮ ಪ್ರದೇಶಕ್ಕೆ ಒಗ್ಗಿಸಿಬಿಟ್ಟಿದ್ದೇವೆ. ಬಹಳ ರುಚಿ ಬರುತ್ತದೆ. ಉದ್ದು ಕೂಡ ನಾವು ಅನೇಕ ವರ್ಷಗಳಿಂದ ಇಟ್ಟುಕೊಂಡುವ ಬೀಜವೇ. ಉದ್ದು, ಹೆಸರು ಎಕರೆಗೆ 2 1/2 – 3 ಕೆಜಿ ಬೀಜ ಬಿತ್ತಿದ್ದೇವೆ. ಥಿನ್ನಿಂಗ್ ಮಾಡಿರುವುದರಿಂದ ಪ್ರತಿ ಗಿಡದಲ್ಲೂ ಕಾಯಿ ಜಾಸ್ತಿ ಬರುತ್ತದೆ.

### ರೋಗ ಕೀಟ

ಈ ಸಲ ನಮಗೆ ಉದ್ದು, ಹೆಸರುಗಳಲ್ಲಿ ಯಾವ ಕೀಟ ರೋಗವೂ ಬಾಧಿಸಲಿಲ್ಲ. 4 ದಿವಸಕ್ಕೆ ಒಮ್ಮೆಯಾದರೂ ಮಳೆ ಬೀಳುತ್ತಿದ್ದರಿಂದ ಕೀಟ, ರೋಗಗಳು ಉಲ್ಬಣವಾಗುವ ಅವಕಾಶ ಆಗಲಿಲ್ಲ. ನಾವು ಸರಿಯಾದ ಸಮಯಕ್ಕೆ, ಅಂದರೆ, ಜೂನ್ ಮೊದಲ ವಾರಕ್ಕೆ ಬಿತ್ತನೆ ಮಾಡಿದ್ದರಿಂದ ನಿಸರ್ಗಕ್ಕೆ ಹೊಂದಿಕೊಂಡಿತು. ಅದೇ ಒಂದು ವಾರ, 10 ದಿನ ತಡವಾಗಿ ಬಿತ್ತನೆ ಮಾಡಿದ್ದವರಿಗೆ(ಆರಿದ್ರ ಮಳೆಗೆ) ರೋಗ ಕೀಟ ಬಾಧೆ ವಿಪರೀತವಾಗಿತ್ತು. ನಾವು ಮುಂಜಾಗ್ರತಾ ಕ್ರಮವಾಗಿ ಹೂವಿನ ಹಂತಕ್ಕೆ ಬಂದಾಗ ಬೇವಿನ ಎಣ್ಣೆಯನ್ನು ಸಿಂಪಡಣೆ ಮಾಡಿದ್ದೆವು. 200 ಲೀಟರ್ ನೀರಿಗೆ 2 ಲೀಟರ್ ಬೇವಿನೆಣ್ಣೆ ಬೆರೆಸಿ 2 ಎಕರೆಗೆ ಸಿಂಪಡಣೆ ಮಾಡುತ್ತೇವೆ. ಇದರಿಂದಲೂ ಕೀಟ ಬಾಧೆ ಇಲ್ಲದಂತಾಯಿತು. ಉದ್ದಿನಲ್ಲೂ ಇದೇ ಕ್ರಮ ಅನುಸರಿಸಿದ್ದೆವು.

ನನಗೆ ಈ ಸಲ ಹೆಸರು ಎಕರೆಗೆ 7 ಕ್ವಿಂಟಲ್ ಮತ್ತು ಉದ್ದು 8 ಕ್ವಿಂಟಲ್ ಸಿಕ್ಕಿತು. ನಾನೇನಾದರೂ ರಾಸಾಯನಿಕ ಕೃಷಿ ಮಾಡಿದ್ದರೆ ನನಗೆ ಈ ಥರದ ಇಳುವರಿ ಖಂಡಿತಾ ಬರುತ್ತಿರಲಿಲ್ಲ. ನನ್ನ ಬಾಜು ಹೊಲದವನು ಡಿಎಪಿ ಹಾಕಿದ್ದಾನೆ. ಎಷ್ಟು ಕಳೆ ಬಂದಿದೆ ಎಂದರೆ ತೆಗೆಯಲು ಆಗುತ್ತಿಲ್ಲ. ರಾಸಾಯನಿಕದಲ್ಲಿ ಮಾಡಿದ್ದಾಗ ಬೆಳೆ ಬೇರು ಆಳಕ್ಕೆ ಹೋಗುವುದಿಲ್ಲ. ಮೇಲು ಮೇಲೆ ಇರುತ್ತವೆ. ಸಹಜವಾಗಿ ಮಾಡಿದರೆ ಬೇರು ಚನ್ನಾಗಿ ಆಳಕ್ಕೆ ಹೋಗುತ್ತದೆ.

ಉದ್ದು ಕ್ವಿಂಟಲಿಗೆ 3–4 ಸಾವಿರ. ಹೆಸರು ಕ್ವಿಂಟಲಿಗೆ 5–6 ಸಾವಿರ. ಉದ್ದು, ಹೆಸರು ಗಿಡ ಒಂದೇ ಥರ ಕಾಣಲು ಕಂಡರೂ ಅವುಗಳ ಎಲೆ ಬೇರೆ, ಹೂ ಬೇರೆ. ಉದ್ದಿನ ಎಲೆ ಉದ್ದ. ಕಾಯಿ ಗಿಡ್ಡ. ನಮ್ಮದಂತೂ ಈ ಸಲ 8 ಗೊಂಚಲು ಕಾಯಿ.

### ಕಟಾವು

ಈಗ ಕಟಾವು ಮಾಡಲು ಮೆಷಿನ್ ಬಂದಿವೆ. ಮೇಲೆ ಕಾಯಿ ಕಟ್ ಮಾಡಿಕೊಂಡು ಉಳಿಕೆ ಬಾಕಿ ಮಣ್ಣಿನಲ್ಲಿ ಸೇರಿಸಿ ಬಿಡುತ್ತೆ. ಒಂದು ಕಡೆ ಕಾಳು ಒಂದು ಕಡೆ ಬೂಸ ಬಂದು ಬಿಡುತ್ತೆ. ಈಗಂತೂ ನಮ್ಮಿಂದ ಬಿಡಿಸಲು ಆಗುದಿಲ್ಲ. ಎಷ್ಟು ಆಳು ಮಾಡಿದರೂ ಸಾಕಾಗುವುದಿಲ್ಲ. ಒಂದು ಎಕರೆಗೆ 700–800 ಖರ್ಚಾಗುತ್ತೆ. ಕಾಯಿ ಬಿಡಿಸಲಿಕ್ಕೇ 5 ಸಾವಿರ ಖರ್ಚಾಗುತ್ತೆ. ಮೆಷಿನ್ ಒಂದು ಎಕರೆಯನ್ನು ಒಂದು ಗಂಟೆಯಲ್ಲಿ ಕಟಾವು ಮಾಡಿ ಬಿಡುತ್ತದೆ. ಈಗ ಎಲ್ಲಾ ಕಾರ್ಮಿಕರು ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗುವುದರಿಂದ ನಮಗೆ ಮೆಷಿನ್ನೇ ಆಧಾರ.

ಇಲ್ಲಿ ಉದ್ದು ತೆಗೆದ ಮೇಲೆ ಜೋಳ ಬರುತ್ತದೆ. ಹೆಸರು, ಉದ್ದು ತಕ್ಕೊಂಡ ಮೇಲೆ ಕಡಲೆ ಬಿತ್ತಬಹುದು. ಈ ಪ್ರದೇಶದಲ್ಲಿ ಕಡಲಿ ಜೊತೆ ಕುಸುಬಿ ಸಾಲು ಬೆಳೆ ಬಿತ್ತುತ್ತಾರೆ. 11 ಸಾಲು ಕಡಲೆಯಾದ ಮೇಲೆ 12ನೇ ಸಾಲಿಗೆ ಕುಸುಬಿ ಬಿತ್ತುತ್ತಾರೆ. ಕುಸುಬಿ ಎಳುವವರೆಗೆ ಕಡಲೆ ಬೆಳಕೊಂಡು ಬಿಡುತ್ತದೆ. ಕಡಲೆ ಕಟಾವಾದ ಮೇಲೆ ಕುಸುಬಿ ಮತ್ತೆ ಬೆಳೆಯುತ್ತದೆ.

### ತೊಗರಿ ಹೊಲ

ನಮ್ಮಲ್ಲಿ ತೊಗರಿ ಜೊತೆ ನವಣೆ ಸಾಲು ಬೆಳೆಯಾಗಿ ಬಿತ್ತನೆ ಮಾಡುವುದು ರೂಢಿ. ತೊಗರಿ ಜೊತೆ ನವಣೆ ಹಾಕುವುದರಿಂದ ತೊಗರಿಗೆ ಬರುವ ಹುಳುಗಳ ಹಾವಳಿ 70% ರಷ್ಟು ನಿರ್ವಹಣೆ ಆಗುತ್ತದೆ. ಅಷ್ಟು ಉಪಯುಕ್ತ ಇದರ ಸಾಲು ಬೆಳೆ. ನವಣೆ ಕಿರು ಧಾನ್ಯಗಳಲ್ಲೇ ಅತ್ಯುತ್ತಮ ಧಾನ್ಯ. ಬೇರೆ ಧಾನ್ಯಗಳಲ್ಲಿ ಇದರಂಥ ಔಷಧೀಯ ಗುಣ ಕೂಡ ಇದಕ್ಕಿದೆ.





ಮಲ್ಲಿಕಾರ್ಜುನ ರೆಡ್ಡಿ ಸಿದ್ಧಪಡಿಸಿದ ಕಳೆ ತೆಗೆಯುವ ಸರಳ ಯಂತ್ರ

ಈ ಸಲ ಮೂರು ತಾಳಿನ ಕೂರಿಗೆಯಲ್ಲಿ ಮಧ್ಯದ ತಾಳಿಗೆ ತೊಗರಿ, ಅಕ್ಕಪಕ್ಕದ ಎರಡು ತಾಳಿನಲ್ಲಿ ನವಣೆ ಬಿತ್ತನೆ ಮಾಡಿದ್ದೆವು. ನವಣೆ ಬೀಜ ಮಣ್ಣಿನಲ್ಲಿ ಕೆಳಗೆ ಹೋಗಬಾರದು. ಆ ರೀತಿ ಬಿತ್ತನೆ ಮಾಡಬೇಕು. ಬಿತ್ತಿದವನು ಹೊಸ ಕೆಲಸಗಾರ. ನವಣೆಯನ್ನು ಬಹಳ ಆಳ ಬಿತ್ತನೆ ಮಾಡಿಬಿಟ್ಟ. ಬೀಜ ಹುಟ್ಟೇ ಇಲ್ಲ. ಅಲ್ಲೊಂದು ಇಲ್ಲೊಂದು ಹುಟ್ಟಿದೆ.

ಹೆಸರು ಬಿತ್ತಿದ 8 ದಿವಸಕ್ಕೆ ಜುಲೈ ಒಂದಕ್ಕೆ ತೊಗರಿ ಬಿತ್ತನೆ ಮಾಡಿದ್ದು. ನಾಲ್ಕು ಅಡಿ ಸಾಲು ಅಂತರ ಕೊಟ್ಟಿದ್ದೇವೆ. ಪೂರ ಥಿನ್ನಿಂಗ್ ಮಾಡಿದ್ದೇವೆ. ನಡುವೆ ಎರಡು ಸಾಲು ಸಜ್ಜೆ ಅಥವಾ ನವಣೆ ಬರಬೇಕು ಎನ್ನುವ ಲೆಕ್ಕ ಇಟ್ಟುಕೊಂಡು ಹೀಗೆ ಮಾಡುತ್ತೇವೆ. ತೊಗರಿಯಲ್ಲಿ ಏನಾದರೂ ನಷ್ಟ ಆದರೆ ಇನ್ನೊಂದು ಬೆಳೆ ಕೈಗೆ ಬರುವಂತಿರಬೇಕು. ನವಣೆ, ಸಜ್ಜೆ, ಮೆಕ್ಕೆ ಜೋಳ ಇಂಥದ್ದು ಎನ್ನುವ ಲೆಕ್ಕಾಚಾರವೂ ನಮಗೆ ಇರುತ್ತದೆ. ಜೋಳವನ್ನು ಬಾರ್ಡರಿಗೆ ಜೋಳ ಹಾಕಲು ಕೊಟ್ಟು ಕಳಿಸಿದ್ದರೆ ಹೊಸ ಕೆಲಸಗಾರ ಒಂದು ಬದಿಗೆ ಹಾಕಿಬಿಟ್ಟಿದ್ದಾನೆ.

ತೊಗರಿ ಡಿಸೆಂಬರ್‌ಗೆ ಕಟಾವಾಗತ್ತೆ. ಎಕರೆಗೆ 8 ಕ್ವಿಂಟಲ್ ಬರುತ್ತದೆ. ಈ ಸದ್ಯ ಇದಕ್ಕೆ ಏನೂ ಕೀಟಗಳಿಲ್ಲ. ಮುಂಜಾಗ್ರತಾ ಕ್ರಮವಾಗಿ ಬೇವಿನೆಣ್ಣೆ ಸಿಂಪಡಣೆ ಮಾಡುತ್ತೇವೆ.

ಮೊಗ್ಗಿಗೆ ಬಂದಾಗ ಜೀವಾಮೃತ, ದಶಪರ್ಣಿ ಸಿಂಪಡಣೆ ಕೊಡುತ್ತೇವೆ. ಈ ಸಲ ತೊಗರಿಗೆ ಪಂಚಗವ್ಯ ಸಿಂಪಡಣೆ ಕೊಡಲೇ ಬೇಕೆಂದು ತೀರ್ಮಾನಿಸಿದ್ದೇನೆ, ಹೂವಿನ ಹಂತ ಮತ್ತು ಕಾಳಾಗುವ ಹಂತಗಳಲ್ಲಿ. ಈ ಪ್ರದೇಶದಲ್ಲಿ ಈಗ ಎಲ್ಲರೂ ತೊಗರಿಗೆ ಎನ್ಪಿವಿ ಸಿಂಪಡಣೆ ಮಾಡುತ್ತಾರೆ. ಕೃಷಿ ಇಲಾಖೆಯಲ್ಲಿ ಕೆಲ ವರ್ಷಗಳಿಂದ ಎನ್ಪಿವಿ ಹಂಚಿಕೆ ರೈತರಿಗೆ ಹಂಚಿಕೆ ಮಾಡುತ್ತಿದ್ದಾರೆ. ಅದರ ಫಲಿತಾಂಶ ಉತ್ತಮವಾಗಿದೆ. ಕಳೆದ ವರ್ಷ ಕೃಷಿ ಇಲಾಖೆಯಿಂದ ಸಿಗದಿದ್ದವರು ಮದ್ರಾಸಿನಿಂದ ತರಿಸಿದ್ದರು.

ಈ ಹೊಲದಲ್ಲಿ ಅನೇಕ ಸಸ್ಯಗಳು, ತರಕಾರಿ, ಸೊಪ್ಪುಗಳು ತಾನೇ ತಾನಾಗಿ ಬಂದಿವೆ. ಸೌತಿ ಕಾಯಿ ಯಾವಾಗಲೋ ಬೀಜ ಉದುರಿ ಈಗ ತಾನೇ ತಾನಾಗಿ ಬಂದಿದೆ. ಉದ್ದು, ತೊಗರಿ, ಹೆಸರು ಇವೆಲ್ಲಾ ಕಸ ಭಯಂಕರ ಆಗುತ್ತದೆ ಹೊಲಕ್ಕೆ. ಈ ಕಸವನ್ನು ಹೊಲದಲ್ಲೇ ಹರಡಿ ಮೇಲೆ ಜೀವಾಮೃತ ಸಿಂಪಡಣೆ ಮಾಡುತ್ತೇವೆ.

## ಕಳೆ ತೆಗೆಯುವ ಉಪಕರಣ

ನಮ್ಮಲ್ಲಿ ಕೆಲಸಗಾರರ ಕೊರತೆ ಹೆಚ್ಚಾಗಲು ತೊಡಗಿದಂತೆ ನಾವು ಕೃಷಿಯಲ್ಲಿ ಮಾನವ ಶ್ರಮ ಕಡಿಮೆ ಮಾಡುವ, ಹೆಚ್ಚು ದಕ್ಷವಾಗಿ ಕೆಲಸ ಮಾಡುವ ಉಪಕರಣಗಳ ಕಡೆ ಗಮನ ಕೊಡಲೇ ಬೇಕಾಗುತ್ತದೆ. ಈಗ ನಾವು ದುಡ್ಡು ಕೊಟ್ಟು ಕಳೆ ತೆಗೆಸಲು ಸಾಧ್ಯವಾಗದಂಥ ಸ್ಥಿತಿ ಇದೆ. ಇದಕ್ಕೆ ಏನಾದರೂ ದಾರಿ ಹುಡುಕಬೇಕೆಂದು ಯೋಚಿಸುತ್ತಿದ್ದಾಗ, ಕೃಷಿ ಇಂಜಿನಿಯರಿಂಗ್‌ನಲ್ಲಿ ಪಿಎಚ್‌ಡಿ ಮಾಡುತ್ತಿರುವ ನನ್ನ ಎರಡನೆ ಮಗ ಮಗ ಮಲ್ಲಿಕಾರ್ಜುನ ರೆಡ್ಡಿ ಒಂದು ಸುಲಭವಾಗಿ ಬಳಸಬಹುದಾದ ಕಳೆ ತೆಗೆಯುವ ಯಂತ್ರ ಸಿದ್ಧಪಡಿಸಿದ. ತುಂಬಾ ಹಗುರವಾದ, ಎತ್ತು ಕಟ್ಟದೆ ನಾವೇ ಚಲಿಸಬಹುದಾದ ರೀತಿಯಲ್ಲಿ ಇದನ್ನು ವಿನ್ಯಾಸ ಮಾಡಿದ್ದಾನೆ. ಎರಡು ಹಗುರವಾದ ಕಬ್ಬಿಣದ ಕೊಳವೆಗಳನ್ನು ತೆಗೆದುಕೊಂಡು ಚಿತ್ರದಲ್ಲಿ ತೋರಿಸಿರುವಂತೆ ವೆಲ್ಡಿಂಗ್ ಮಾಡಿ ಕೂಡಿಸಿದ್ದಾನೆ. ಕೆಳಗಡೆ ಒಂದು ತಗಡ ಒಂದು ಪಟ್ಟಿ ಕೂಡಿಸಿದ್ದಾನೆ. ಒಬ್ಬ ಹುಡುಗನನ್ನು ಕರೆದುಕೊಂಡು ನಾನೊಬ್ಬನೇ ಕಳೆ ತೆಗೆಯುವ ಕೆಲಸ ಪೂರೈಸುತ್ತೇನೆ. ■

## ಚಕ್ಕಡಿಯಲ್ಲಿ ನೀರು

**ಉದ್ದು, ಹೆಸರು, ತೊಗರಿಗಳಿಗೆ ಔಷಧ ಹೊಡೆಯಲು ಚಕ್ಕಡಿಯಲ್ಲಿ ಡ್ರಮ್ಮಿನಲ್ಲಿ ನೀರು, ಕ್ಯಾನಿನಲ್ಲಿ ವಿಷ, ಜೊತೆಗೆ ಸ್ಪ್ರೇಯರ್. ಇದು ಗುಲ್ಬರ್ಗದಲ್ಲಿ ಎಲ್ಲೆಂದರಲ್ಲಿ ಕಾಣಬರುವ ದೃಶ್ಯ. ಹುಳ ಇರಲಿ, ಇಲ್ಲದಿರಲಿ, ತಮ್ಮ ಎಚ್ಚರಿಕೆಯಲ್ಲಿ ತಾವಿರಬೇಕು ಎಂದು ಪ್ರತಿಯೊಬ್ಬರು ವಿಷ ಹೊಡೆದೇ ತೀರುತ್ತಾರೆ. ಹುಳಗಳು ಎಲ್ಲೋ ಒಳಗೆ ಇರುತ್ತವೆ. ಇವರು ಮೇಲೆ ಹೊಡೆಯುತ್ತಾರೆ. ಬೇವಿನೆಣ್ಣೆ ಸಾಲದು ಎಂದು ಅದರಲ್ಲಿ ರಾಸಾಯನಿಕ ವಿಷ ಬೆರೆಸಿ ಹೊಡೆಯುತ್ತಾರೆ. ಹಾಗೆ ನೋಡಿದರೆ ಈಗ ಹುಳ ಬಹಳ ಕಮ್ಮಿ ಆಗಿದೆ ಎಂದು ಹೇಳಬಹುದು. ಬೇವಿನೆಣ್ಣೆಯನ್ನ ಗಂಜಲದಲ್ಲಾದರೂ ಸೇರಿಸಿ ಹೊಡೆಯಿರಿ. ರಾಸಾಯನಿಕ ವಿಷ ಹಾಕಬೇಡಿ ಎಂದು ಕೇಳಿಕೊಂಡರೂ ಕಿವಿ ಕೊಡುವವರು ಯಾರೂ ಇಲ್ಲ. ಈಗ ಕೃಷಿ ಇಲಾಖೆಯಲ್ಲಿ ಎನ್ಪಿವಿ, ಬೇವಿನ ಎಣ್ಣೆ ವಿತರಣೆ ಮಾಡುತ್ತಾರೆ. ಆದರೆ ಇವರು ಅದರಲ್ಲೂ ವಿಷ ಬೆರೆಸಿ ಹೊಡೆಯುತ್ತಾರೆ.**





# ಯಾತಕ್ಕೆ ಮಳೆ ಹೋದವ್ರೋ...

**ಕಳೆದ ಸಂಚಿಕೆಯಲ್ಲಿ ಪರಿಚಯಿಸಿದ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಪುಸ್ತಕದ ಆಯ್ದ ಭಾಗದ ಮೊದಲ ಕಂತು. ಇಲ್ಲಿನ ವಿದ್ಯಮಾನಗಳು ನಡೆಯುವುದು ಒರಿಸ್ಸಾ, ಆಂಧ್ರಪ್ರದೇಶ, ಮಹಾರಾಷ್ಟ್ರ, ಬಿಹಾರ್, ತಮಿಳುನಾಡು, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಾದರೂ ಇಲ್ಲಿನ ಪ್ರತಿಯೊಂದು ಸಂಗತಿಯೂ ನಮ್ಮ ಸ್ಥಳೀಯ ಸನ್ನಿವೇಶಕ್ಕೆ ಯಥಾವತ್ತಾಗಿ ಅನ್ವಯ ಆಗುತ್ತದೆ. ಭಾರತೀಯ ಪತ್ರಿಕೋದ್ಯಮಕ್ಕೆ 'ಹೊಸ ಜಗತ್ತನ್ನು' ತೆರೆದು ತೋರಿಸಿದ ಪತ್ರಕರ್ತ ಪಿ. ಸಾಯಿನಾಥ್ ಅವರ 10 ವರ್ಷಗಳ ಬರಹಗಳ ಸಂಗ್ರಹ ಇದು.**

ದೇಶ ಎದುರಿಸುತ್ತಿರುವ ಅತಿ ಗಂಭೀರ, ಪ್ರಶ್ನಾತೀತ ಸಮಸ್ಯೆ ಎಂದರೆ ಬರ. ಬರ ಪರಿಹಾರ ಎನ್ನುವುದೂ ಸಹ ಅಷ್ಟೇ ಪ್ರಶ್ನಾತೀತವಾಗಿ ಗ್ರಾಮೀಣ ಭಾರತದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ 'ಉದ್ಯಮ'. ಎಷ್ಟೋ ಬಾರಿ ಬರ ಮತ್ತು ಬರ ಪರಿಹಾರ ಈ ಎರಡರ ನಡುವೆ ಇರುವ ಸಂಬಂಧ ಮಾತ್ರ ಅತ್ಯಲ್ಪ. ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಿಗೆ ಪರಿಹಾರ ಹೋಗಬಹುದು. ಕೊರತೆ ಇರುವ ಪ್ರದೇಶಗಳಿಗೆ ಹೋದ ಕಡೆಯೂ ಸಹ ಯಾರಿಗೆ ಅಗತ್ಯವಿದೆಯೋ ಅವರಿಗೆ ಇದರಿಂದ ಅನುಕೂಲ ಆಗಿರುವುದು ಕಡಿಮೆ. ಹಾಗಾಗಿಯೇ ಕೆಲವರು ಬರಪರಿಹಾರವನ್ನು 'ಮೂರನೆಯ ಬೆಳೆ' ಎಂದು ಕರೆಯುವುದು. ಇಲ್ಲಿ ವ್ಯತ್ಯಾಸವೆಂದರೆ ಈ ಮೂರನೆ ಬೆಳೆಯ ಲಾಭ ಪಡೆಯುವವರು ಬಿತ್ತಿದವರಲ್ಲ.

ಬರ 'ಪರಿಹಾರ'ದ ಬಹುಭಾಗ ಹೋಗುವುದು ಖಾಸಗಿಯವರ ಕೈಯಲ್ಲಿರುವ ಗುತ್ತಿಗೆಗೆ. ಇವು ರಸ್ತೆ ನಿರ್ಮಿಸಲು, ಬಾವಿ ತೋಡಲು, ನೀರಿನ ಟ್ಯಾಂಕರ್‌ಗಳನ್ನು ಕಳಿಸುವುದು, ಟ್ಯಾಂಕುಗಳ ರಿಪೇರಿಯಂತಹ ಕೆಲಸಗಳಿಗೆ. ಇದರ ವೆಚ್ಚ ಎಷ್ಟಾಗಬಹುದು ಎಂದು ಯೋಚಿಸಿ. ಒಂದು ವರ್ಷದಲ್ಲಿ ಈ ಉದ್ಯಮಕ್ಕೆ ಸೇರುವ ಹಣ ಬಿಹಾರದ ಪಶುಸಂಗೋಪನಾ ಇಲಾಖೆಯ ಹಣವನ್ನು ನಗಣ್ಯ ಎನ್ನುವಂತೆ ಮಾಡುತ್ತದೆ. ಈ ಬಿಹಾರ ಹಗರಣ ಒಂದೂವರೆ ದಶಕಗಳ ಕಾಲ ಇತ್ತು. ಈ ಹಗರಣದ ವಿಶೇಷವೆಂದರೆ ಇದು 'ಕಾನೂನುಬದ್ಧ'ವಾಗಿತ್ತು. ಅದಕ್ಕೆ ಜೀವವೂ ಇತ್ತು. ದುರಂತವೆಂದರೆ, ಇದು ಬರ ಹಾಗು ನೀರಿನ ಕೊರತೆಯಂತಹ ನೈಜ ಸಮಸ್ಯೆಯನ್ನು ನಿವಾರಿಸಲು ಯತ್ನಿಸಿದ್ದು ಅಪರೂಪವಾಗಿ.

1994–95ರ ಒಂದು ವರ್ಷದಲ್ಲಿಯೇ ಮಹಾರಾಷ್ಟ್ರ ಸರ್ಕಾರ ಬರ ಹಾಗು ನೀರಿನ ಕೊರತೆಯನ್ನು ಅತ್ಯಂತ ತುರ್ತಾಗಿ ಎದುರಿಸಲು 1,170 ಕೋಟಿ ರೂಗಳನ್ನು ಖರ್ಚು ಮಾಡಿತು.

ಇದು ಟೀ, ಕಾಫಿ, ಸಿಮೆಂಟ್, ಆಟೋ ಮೊಬೈಲ್ ಕ್ಷೇತ್ರಗಳಂತಹ ಸಂಘಟಿತ ವಲಯದ ಎಲ್ಲಾ ಪ್ರಮುಖ ಕಂಪನಿಗಳ ಹಿಂದಿನ ವರ್ಷದ ಒಟ್ಟು ಆದಾಯಕ್ಕಿಂತ ಮಿಗಿಲಾದದ್ದು. ಭಾರತದ ಆರ್ಥಿಕತೆ ವಿಚಕ್ಷಣಾ ಕೇಂದ್ರ (ಸಿಎಂಐಇ)ದ ವರದಿ ಪ್ರಕಾರ ತೆರಿಗೆ ಕಡಿತದ ನಂತರ ಈ ಕಂಪನಿಗಳ ಒಟ್ಟು ಆದಾಯ 1,149 ಕೋಟಿ.

1995ರ ಆಗಸ್ಟಿನಲ್ಲಿ ಪ್ರಧಾನಿ ನರಸಿಂಹರಾವ್ ಅವರು ಒರಿಸ್ಸಾದಲ್ಲಿ ಬರ ವಿರೋಧಿ ಯೋಜನೆಯೊಂದನ್ನು ಉದ್ಘಾಟಿಸಿದರು. ಈ ಯೋಜನೆ ವರ್ಷಕ್ಕೆ 750 ಕೋಟಿಯಂತೆ ಆರು ವರ್ಷಗಳಲ್ಲಿ 4557 ಕೋಟಿಗಳನ್ನು ಕಾಲಹಂಡಿ, ಬೊಲಂಗೀರ್, ಕೋರಪುಟ್‌ನಂತಹ ಕೆಲವೇ ಜಿಲ್ಲೆಗಳ ಮೇಲೆ ಖರ್ಚು ಮಾಡುವುದಿತ್ತು. ಕೊರತೆಯನ್ನು ಹೊಡೆದೋಡಿಸಿ ಉತ್ತಮ ಮೂಲ ಸೌಕರ್ಯಗಳನ್ನು ನಿರ್ಮಿಸುವುದಾಗಿದ್ದಲ್ಲಿ ಇದರ ಮೇಲೆ ವೆಚ್ಚ ಮಾಡುವ ಪ್ರತಿಯೊಂದು ಪೈಸೆಯೂ ಉಪಯುಕ್ತವಾಗುತ್ತಿತ್ತು. ಆದರೆ ಇದು ಆಗುವುದು ಬಹುತೇಕ ಸಾಧ್ಯವಿಲ್ಲ. ಏಕೆಂದರೆ ಈ ಪ್ರದೇಶಗಳು ಎದುರಿಸುತ್ತಿರುವ ಸಮಸ್ಯೆಯ ಮೂಲ ಕಾರಣಗಳು ಸಹಾ ಪರಿಹಾರ ಹುಡುಕಲು ಆರಂಭಿಸುವುದಕ್ಕೂ ಸಾಧ್ಯವಿಲ್ಲ.

ಬರಪೀಡಿತ ಬ್ಲಾಕುಗಳು ಕೇಂದ್ರದ ಬರಪೀಡಿತ ಪ್ರದೇಶ ಕಾರ್ಯಕ್ರಮ (ಡಿಪಿಎಪಿ) ಯೋಜನೆಯ ವ್ಯಾಪ್ತಿಗೆ ಬರುತ್ತವೆ. ಆದರೆ ಬ್ಲಾಕುಗಳನ್ನು ಡಿಪಿಎಪಿ ವ್ಯಾಪ್ತಿಗೆ ತರುವುದು ಸಂಪೂರ್ಣವಾಗಿ ರಾಜಕೀಯ ನಿರ್ಧಾರ. ಡಿಪಿಎಪಿಗೆ ಕೇಂದ್ರದ ಅನುದಾನ ಸಾಧಾರಣದ್ದಾಗಿರಬಹುದು. ಆದರೆ ಒಂದು ಬ್ಲಾಕ್ ಈ ಡಿಪಿಎಪಿ ಅಡಿ ಬಂದರೆ ದೊಡ್ಡದಾದ ರೀತಿಯಲ್ಲಿ ಹಣದ ಹೊಳೆ ಹರಿಸುವ ಹಲವಾರು ಯೋಜನೆಗಳ ಸರಮಾಲೆಯೇ ಬರುತ್ತದೆ. ಇದೇ ಬ್ಲಾಕುಗಳಿಗೆ ಉದ್ಯೋಗ ಖಾತರಿ ಯೋಜನೆ (ಇಎಎಸ್), ಮರುಭೂಮಿ ತಡೆ ಯೋಜನೆ, ಕುಡಿಯುವ ನೀರಿನ ಯೋಜನೆ ಹೀಗೆ ಹಲವಾರು ಕಾರ್ಯಕ್ರಮಗಳ ಹಣ ಬರುತ್ತದೆ. ಹೌದು, ಕೆಲವು ಮಂದಿಯಂತೂ ಖಂಡಿತಾ ಲಾಭ ಪಡೆಯುತ್ತಾರೆ.

ಹಲವಾರು ರಾಜ್ಯಗಳಲ್ಲಿ ಈ ಡಿಪಿಎಪಿ ಸಾಕಷ್ಟು ಕುತೂಹಲ ಸಂಗತಿಗಳನ್ನು ಎತ್ತಿ ತೋರಿಸಿದೆ. ಮಹಾರಾಷ್ಟ್ರದಲ್ಲಿ ಒಂದು ವರ್ಷದ ಹಿಂದೆ ಇದ್ದ ಡಿಪಿಎಪಿ ಬ್ಲಾಕುಗಳ ಸಂಖ್ಯೆ 96. 1996ರಲ್ಲಿ ಈ ಸಂಖ್ಯೆ 147. ಮಧ್ಯಪ್ರದೇಶದಲ್ಲಿ ಇದೇ ಅವಧಿಯಲ್ಲಿ ಡಿಪಿಎಪಿ ಬ್ಲಾಕುಗಳ ಸಂಖ್ಯೆ 60 ರಿಂದ 135 ಕ್ಕೆ ಬಹುತೇಕ ದುಪ್ಪಟ್ಟಾಗಿ ಹೋಯಿತು. ಬಿಹಾರದಲ್ಲಿ 80ರ ದಶಕದುದ್ದಕ್ಕೂ ಸುಮಾರು ಡಿಪಿಎಪಿ ಬ್ಲಾಕುಗಳಿದ್ದವು. 90ರ ದಶಕದ ಆರಂಭದಲ್ಲಿ ರಾಮೇಶ್ವರ ಠಾಕೂರ್ ಕೇಂದ್ರ ಸಚಿವರಾದಾಗ ಈ ಸಂಖ್ಯೆ 55 ಆಯಿತು. ಠಾಕೂರ್ ಅವರ ಸ್ವಕ್ಷೇತ್ರ ಈ ಯೋಜನೆಯಡಿ ಸೇರಿತು. ಈಗ ಈ ರಾಜ್ಯದಲ್ಲಿ 122 ಡಿಪಿಎಪಿ ಬ್ಲಾಕುಗಳಿವೆ.

ಈ ಎಲ್ಲವೂ ಆಗಿರುವುದು ಸತತ ಒಳ್ಳೆಯ ಮಳೆಗಾಲವಿದ್ದಾಗ. ಆದರೆ ಕೆಲವರಿಗೆ ಕೊರತೆಯೂ ಇತ್ತು. ಆದರೆ ಅದು ಇನ್ನೊಂದು ಬೇರೆಯದೇ ಕಥೆ. **(ಮುಂದುವರೆಯುವುದು)**

**ಬರ ಅಂದ್ರೆ ಎಲ್ಲರಿಗೂ ಇಷ್ಟ**
ಲೇಖಕರು: ಪಿ. ಸಾಯಿನಾಥ್
ಕನ್ನಡಕ್ಕೆ: ಜಿ. ಎನ್. ಮೋಹನ್



ಪುಟಗಳು: 504 ಬೆಲೆ: ರೂ. 350/–

**ಸಹಜ ಸಾಗುವಳಿಯ ಓದುಗರಿಗೆ 10% ರಿಯಾಯತಿ ಇರುತ್ತದೆ. ಪುಸ್ತಕ ಪಡೆಯಬಯಸುವವರು ರೂ. 315+ ರೂ. 50 ಅಂಚೆ ವೆಚ್ಚವನ್ನು ಪತ್ರಿಕೆಯ ವಿಳಾಸಕ್ಕೆ ಎಂ.ಒ ಮಾಡಿ ಪುಸ್ತಕ ಪಡೆಯಬಹುದು**

# ಕೃಷಿ ಅರಣ್ಯ

## ಕೆಲ ಪೂರ್ವಭಾವಿ ವಿಚಾರಗಳು

**ನವಂಬರ್ 23-26ರವರೆಗೆ ನಾಲ್ಕು ದಿನ ಬೆಂಗಳೂರಿನಲ್ಲಿ ಕೃಷಿ ಅರಣ್ಯ ಅಥವಾ ಅಗ್ರೋಫಾರೆಸ್ಟ್ರಿ ಕುರಿತ ಕಾರ್ಯಾಗಾರ ಇದೆ. ಇದರ ಮುಖ್ಯ ಸಂಪನ್ಮೂಲ ವ್ಯಕ್ತಿ ಪಿ. ಆರ್. ಶೇಷಗಿರಿರಾವ್. ಕಾರ್ಯಾಗಾರಕ್ಕೆ ಪೂರ್ವಭಾವಿಯಾಗಿ ಅವರು ಹಂಚಿಕೊಂಡಿರುವ ಕೆಲ ವಿಚಾರಗಳು ಇಲ್ಲಿವೆ.**



ನನ್ನ ಪ್ರಕಾರ ಕೃಷಿ ಅರಣ್ಯ ಅಥವ ಅಗ್ರೋಫಾರೆಸ್ಟ್ರಿ ಎನ್ನುವುದು ಸಾವಯವ ಕೃಷಿಯ ಮುಂದಿನ ಹೆಜ್ಜೆಯೇ ಹೊರತು ಹೊಸ ವಿಚಾರವೇನಲ್ಲ. ಹೊಲಗಳಲ್ಲಿ ಮರಗಿಡ ಜೋಡಣೆ ಮಾಡುವುದನ್ನು ಅನೇಕ ಕಡೆಗಳಲ್ಲಿ ರೈತರು ತಲೆತಲಾಂತರದಿಂದ ಮಾಡುತ್ತಾ ಬಂದಿದ್ದಾರೆ. ಉದಾಹರಣೆಗೆ, ಮಾಗಡಿಯಂಥ ಪ್ರದೇಶದಲ್ಲಿ ಹೊಲಗಳಲ್ಲಿ ಹೆಬ್ಬೇವು, ಆಲದ ಜೋಡಣೆ ಮಾಡದೆ ಇರುವ ರೈತರೇ ಇಲ್ಲ. ಸಿರಾ, ಹಿರಿಯೂರು ಪ್ರದೇಶದ ಕುರಿಕಾರರ ಹೊಲದಲ್ಲೂ ಕರಿಜಾಲಿ, ಬಿಳಿ ಜಾಲಿ, ಬೇವು ಮುಂತಾದ ಮರಗಳು ಸಾಮಾನ್ಯ. ಇದು ಅವರಿಗೆ ಸಹಜವಾಗಿ ಬಂದು ಬಿಟ್ಟಿದೆ. ಆದರೆ ಇಲ್ಲೆಲ್ಲಾ ಹೊಲದಲ್ಲಿ ಮರಗಿಡ ಜೋಡಣೆಗೆ ಇರುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಂಡಿಲ್ಲ. ಹಾಗಾದರೆ ಈ ಸಾಮರ್ಥ್ಯದ 'ಸಂಪೂರ್ಣ ಬಳಕೆ' ಎಂದರೆ ಏನು? ಅದನ್ನು ಅಂದಾಜಿಸುವುದು ಹೇಗೆ ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತದೆ.

ಉದಾಹರಣೆಗೆ, ಸಾವಯವ ಕೃಷಿಯಲ್ಲಿ ಮಿಶ್ರ ಬೆಳೆಗಳ ಉತ್ತಮ ಜೋಡಣೆಯ ಮೂಲಕ ಹೊಲದ ಉತ್ಪಾದಕತೆಯನ್ನು ಎರಡು ಪಟ್ಟು ಹೆಚ್ಚು ಮಾಡಲು ಸಾಧ್ಯವಾಗಿರುವುದನ್ನು ನೋಡುತ್ತೇವೆ. ಅದೇ ರೀತಿ ಸರಿಯಾದ ಕ್ರಮ ಪಾಲಿಸಿ ಹೊಲಗಳಲ್ಲಿ ಮರಗಿಡಗಳ ಜೋಡಣೆ ಮಾಡಿದಾಗ ಹೊಲದ ಉತ್ಪಾದಕತೆಯನ್ನು ಐದು ಪಟ್ಟುವರೆಗೂ ಹೆಚ್ಚು ಮಾಡಬಹುದು. ಒಂದು ವರ್ಷದಲ್ಲಿ ಒಂದು ಎಕರೆ ಹೊಲದಲ್ಲಿ ಮಿಶ್ರ ಬೆಳೆಗಳನ್ನೆಲ್ಲಾ ಸೇರಿಸಿದರೆ ದೊರೆಯುವ ಅತಿ ಹೆಚ್ಚು ಉತ್ಪಾದನೆ 70 ಕ್ವಿಂಟಲ್ ಒಣತೂಕ ಎಂದು ಎಂದು ಇಟ್ಟುಕೊಂಡರೆ ಅದೇ ಹೊಲದಲ್ಲಿ ಮರಗಿಡಗಳನ್ನು ಜೋಡಣೆ ಮಾಡಿದಾಗ ಉತ್ಪಾದನೆ ವರ್ಷದಲ್ಲಿ 400 ಕ್ವಿಂಟಲ್ ಒಣ ತೂಕ ತಲುಪುತ್ತದೆ. ಇದನ್ನು ಕೆಲವೆಡೆ ಮಾಡಿ ತೋರಿಸಿರುವ ಅನುಭವ ನಮ್ಮಲ್ಲಿದೆ. ಇದಕ್ಕೆ ಕಾರಣೀಕೃತವಾದ ವಿಜ್ಞಾನ ಮತ್ತು ಅವುಗಳನ್ನು ಪ್ರಮಾಣಿಸಲು ಮಾಡಿರುವ ಪ್ರಯೋಗಗಳ ಫಲಿತಾಂಶಗಳಿವೆ. ಸುಮಾರು 20 ವರ್ಷಗಳ ಕಾಲ ಅನೇಕ ಸಂಶೋಧನ ಕೇಂದ್ರಗಳೊಂದಿಗೆ, ಸಾಮಾಜಿಕ ಸಂಸ್ಥೆಗಳೊಂದಿಗೆ, ರೈತರೊಂದಿಗೆ ಹಾಗೂ ಕಂಪನಿಗಳೊಂದಿಗೆ ಮಾಡಿದ ಸಂಶೋಧನೆ ಮತ್ತು ಅನುಭವದ ಫಲ. ಇಲ್ಲಿ ನಾನು ತುಂಬಾ ಋಣಿಯಾಗಿರುವುದು ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು; ಭೈಫ್, ತಿಪಟೂರು; ಇಕ್ರಾ, ಬೆಂಗಳೂರು ಮತ್ತು ನ್ಯಾಚುರಲ್ ರೆಮಿಡಿಸ್, ಬೆಂಗಳೂರು ಇವರಿಗೆ. ಹೀಗಾಗಿ ಹೊಲದಲ್ಲಿ ಮರಗಿಡಗಳ ಜೋಡಣೆಯು ಅನುಭವ ಮತ್ತು ವಿಜ್ಞಾನ ಎರಡರಿಂದಲೂ ದೃಢಪಟ್ಟಿರುವ ಒಂದು ದಕ್ಷ ವಿಧಾನವಾಗಿದೆ ಎಂದರೆ ತಪ್ಪಿಲ್ಲ.

### ಹೇಗೆ ಮಾಡುವುದು?

ಸಾಮಾನ್ಯವಾಗಿ ನಮ್ಮ ಹೊಲಗಳಲ್ಲಿ ಅಲ್ಲಲ್ಲಿ ಒಂದೊಂದು ಮರಗಿಡಗಳು ಇರುತ್ತವೆ. ಉತ್ತರ ಕರ್ನಾಟಕದ ಹೊಲಗಳಲ್ಲಿ ಮರಗಳು ತುಂಬಾ ಅಪರೂಪ. ಬೋಳು ಹೊಲಗಳೇ ಹೆಚ್ಚು. ಇಂಥ ಹೊಲಗಳಲ್ಲಿ ಮರಗಿಡಗಳ ಜೋಡಣೆ ಹೇಗೆ ಮಾಡುವುದು? ಇದರ ಹಂತಗಳೇನು? ನೀತಿ ನಿಯಮಗಳು ಏನು? ಒಟ್ಟಾರೆ ಪ್ರಕ್ರಿಯೆ ಹೇಗೆ ನಡೆಯುತ್ತದೆ? ನೋಡೋಣ.

ಹೊಲದಲ್ಲಿ ಮರಗಿಡ ಜೋಡಣೆ ಮಾಡಬೇಕಾದರೆ ಮೊದಲು ಟ್ರೆಂಚ್ ಕಮ್ ಬಂಡ್ ನಿರ್ಮಾಣ(ಗುಣಿ ತೋಡಿ ಬದು ಹಾಕುವುದು) ಮಾಡಬೇಕು. ಇದನ್ನು ಬಹಳ ವ್ಯವಸ್ಥಿತವಾಗಿ ಮಾಡಬೇಕು. ಬೇಕಾಬಿಟ್ಟಿ ಮಾಡಬಾರದು. ಟ್ರೆಂಚ್ ಮಾಡಲು ತೆಗೆದ ಮಣ್ಣನ್ನು ಸ್ವಲ್ಪ ದೂರದಲ್ಲಿ ಹಾಕಬೇಕು. ಹೀಗೆ ಹಾಕಿದ ಮಣ್ಣಿನ ಗುಪ್ಪೆ ತುದಿ ಚೂಪಾಗಿರಬಾರದು. ಮಟ್ಟವಾಗಿ ಇರಬೇಕು. ಪ್ರತಿ ಟ್ರೆಂಚ್ ಎರಡು ಮೀಟರ್ ಉದ್ದವಷ್ಟೇ ಇರಬೇಕು. ಟ್ರೆಂಚಿನ ಆಳ ಹೊಲದ ಇಳಿಜಾರು, ಆ ಪ್ರದೇಶದ ಮಳೆ ಇತ್ಯಾದಿಗಳನ್ನು ಅವಲಂಬಿಸುತ್ತೆ. ಸಾಮಾನ್ಯವಾಗಿ ಒಂದು ಮೀಟರ್ ಆಳ ವಾಡಿಕೆ. ಒಟ್ಟಾರೆ ರಚನೆಯಲ್ಲಿ ನಾವು ವ್ಯತ್ಯಾಸ ಮಾಡಬಾರದು. ಟ್ರೆಂಚ್‌ಗಳನ್ನು ಅಂತರ ಕೊಟ್ಟಾದರೂ ಮಾಡಬಹುದು, ಪಕ್ಕಪಕ್ಕದಲ್ಲಿ ಬೇಕಾದರೂ ಮಾಡಬಹುದು. ಅದು ನಮ್ಮ ಅನುಕೂಲ. ಕೆಲವೊಂದು ಕಡೆ ಟ್ರೆಂಚಿನ ಉದ್ದ 2 ಮೀಟರಿಗಿಂತ ಜಾಸ್ತಿ ಮಾಡಿರುವುದು ಉಂಟು. ಅದಕ್ಕೆ ಕಾರಣ ಮುಂದೆ ಹೇಳುತ್ತೇನೆ. ಟ್ರೆಂಚ್‌ಗಳನ್ನು ತೆಗೆದಾದ ಮೇಲೆ ಅದರಲ್ಲಿ ಸೊಪ್ಪು ತುಂಬುತ್ತಾರೆ. ಸೊಪ್ಪು ಇಲ್ಲದಿದ್ದರೆ ಮುಳ್ಳು ಗಂಟೆ, ಲಂಟಾನ ಏನಾದರೂ ತುಂಬಬಹುದು. ಏನೂ ಸಿಗದೆ ಇದ್ದವರು ಹಾಗೆಯೇ ಬಿಟ್ಟು ಸೊಪ್ಪಿಗಾಗಿ ಮರಗಿಡಗಳನ್ನು ಬೆಳೆಸಿ, ಬೆಳೆದ ನಂತರ ಕಡಿದು ಟ್ರೆಂಚ್‌ಗಳಲ್ಲಿ ತುಂಬುತ್ತಾರೆ.



ಟ್ರೆಂಚ್ ತೆಗೆಯುವ ವಿಧಾನ

ಮಳೆ ಬಂದಾಗ ಈ ಟ್ರೆಂಚಿನಲ್ಲಿ ನೀರು ಶೇಖರಣೆ ಆಗುತ್ತದೆ. ಎರಡು ಮೀಟರ್ ಅಗಲ ಮತ್ತು ಒಂದು ಮೀಟರ್ ಆಳದ ಟ್ರೆಂಚಿನ ಘನ ಅಳತೆ ಎರಡು ಕ್ಯುಬಿಕ್ ಮೀಟರ್. ಅಂದರೆ ಅದರಲ್ಲಿ 2000 ಲೀಟರ್ ನೀರು ಶೇಖರಣೆ ಆಗುತ್ತದೆ. ವಾರ್ಷಿಕ ಮಳೆ 50 ಸೆಂ.ಮೀ ಇರುವ ಪ್ರದೇಶದಲ್ಲಿ ಟ್ರೆಂಚು 8–10 ಸಲ ತುಂಬಿದರೆ 18–20 ಸಾವಿರ ಲೀಟರ್ ನೀರು ಶೇಖರಣೆಯಾಗುತ್ತದೆ. ಆ ನೀರು ಭೂಮಿಗೆ ಸೇರುತ್ತದೆ. ಕನಿಷ್ಠ 15 ಸಾವಿರ ಲೀಟರ್ ನೀರು ಭೂಮಿಯೊಳಗೆ ಶೇಖರಣೆಯಾಗುತ್ತದೆ. ಇದು ಫಿಕ್ಸ್‌ಡ್ ಡಿಪಾಸಿಟ್ ಇದ್ದ ಹಾಗೆ. ಅದು ಒಂದು ಚೂರೂ ವ್ಯರ್ಥವಾಗುವುದಿಲ್ಲ. ನೀರು ಭೂಮಿಯ ಮೇಲುಗಡೆ ಇದ್ದಾಗ ಆವಿಯಾಗುತ್ತೆ. ಭೂಮಿಯ ಒಳಗಡೆ ಇದ್ದಾಗ ಆವಿಯಾಗುವುದಿಲ್ಲ. ಭೂಮಿ ನೀರು ಕುಡಿದು, ಕುಡಿದು ಸಾಕಾದಾಗ ಟ್ರೆಂಚಿನಲ್ಲಿ ನೀರು ನಿಂತಿರುತ್ತದೆ.

### ಗಿಡ ಹಚ್ಚುವುದು

ಮಳೆಯಾದ ತಕ್ಷಣ ಸಸಿಗಳನ್ನು ಹಚ್ಚುತ್ತೇವೆ. ಸಾಮಾನ್ಯವಾಗಿ ಸಸಿಗಳನ್ನು ನರ್ಸರಿಯಲ್ಲಿ ಬೆಳೆಸಿ ನೆಡುವುದು ವಾಡಿಕೆ. ಸಸಿ ಮಾಡಲು ಆಗದವರು ಬೀಜವನ್ನೇ ಹಾಕುತ್ತಾರೆ. ಗ್ಲಿರಿಸಿಡಿಯ ಕಡ್ಡಿಗಳನ್ನು ಕೂಡ ಹಚ್ಚುತ್ತಾರೆ. ಖಾಲಿ ಬಿಟ್ಟರೆ ಮಳೆ ಬಂದ ತಕ್ಷಣ ಹುಲ್ಲು ಬೆಳೆದು ಬಿಡುತ್ತದೆ. ಬದುವಿನಲ್ಲಿ ಉತ್ತಮವಾದ ಮಣ್ಣು, ತೇವಾಂಶ ಇರುವುದರಿಂದ ವಿಪರೀತ ಕಳೆ ಬರುತ್ತದೆ. ಮೊದಲನೆಯ ವರ್ಷ ಬದುವಿನಲ್ಲಿ ಹುಲ್ಲು ಹತ್ತಿ ಬಿಟ್ಟರೆ ಏನೂ ಮಾಡಲು ಆಗುವುದಿಲ್ಲ. ಇದು ಎಲ್ಲಾ ರೈತರಿಗೂ ಗೊತ್ತು. ಹೀಗಾಗಿ ಹುಲ್ಲು ಹತ್ತುವ ಮುಂಚೆ ಬೀಜ, ಸಸಿ, ಕಟಿಂಗ್ ಏನನ್ನಾದರೂ ಹಾಕಿಬಿಡಬೇಕು.

ಬದು ಮಾತ್ರ ಖಾಲಿ ಬಿಡಬಾರದು, ಹುಲ್ಲು ಹತ್ತಲು ಬಿಡಬಾರದು. ಕೆಲ ರೈತರು ಹಾಕಲು ಏನೂ ಸಿಗದಿದ್ದಾಗ ಬೆಂಡೆ ಬೀಜ ಹಾಕಿದ್ದೂ ಇದೆ. ಕೆಲವರು ಹೆಮೆಟ, ಸ್ಟೈಲೊ(ಮೇವಿನ ಬೆಳೆಗಳೂ) ಹಾಕಿದ್ದಾರೆ. ಈ ಸ್ಟೈಲೋ ಅನ್ನುವುದು ದ್ವಿದಳ ಜಾತಿಯ ಮೇವಿನ ಸಸ್ಯ. ಹಸುಗಳಿಗೆ ಉತ್ತಮ ಮೇವು. ಹಾಲು ಕೂಡ ಹೆಚ್ಚಾಗುತ್ತದೆ. ಅಗಸೆ ಮೇವು ಇದ್ದ ಹಾಗೆ. ಬೇಸಿಗೆಗೆ ಒಣಗಿದರೂ ಮಳೆ ಬಂದ ತಕ್ಷಣ ಹತ್ತಿಕೊಂಡು ಬಿಡುತ್ತದೆ.

ಸಸಿಗಳನ್ನು ಹೊರಗಿನಿಂದ ಕೊಂಡು ತರುವುದು ಸರ್ವಥಾ ಸರಿಯಲ್ಲ. ನಾವೇ ಸುಲಭವಾಗಿ ಮಾಡಿಕೊಂಡು ಮಳೆ ಬಂದ ತಕ್ಷಣ ಬದುಗಳಿಗೆ ಹಚ್ಚಿಬಿಡಬೇಕು.

## ನಿಯಮಗಳು– ಹೊಸತೇನು?

ನಾವು ಮಾಡಿದ ಒಂದು ಪ್ರಯತ್ನದಲ್ಲಿ ಮಳೆಯಾಶ್ರಿತದಲ್ಲಿ 2 ವರ್ಷದಲ್ಲಿ ಹೆಬ್ಬೇವಿನ ಮರಗಳು 20–30 ಅಡಿ ಬೆಳೆದಿವೆ. 2000 ಮರಗಳು. ಎಲ್ಲಾ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡಿದ್ದಾಗ ಎರಡು ವರ್ಷದಲ್ಲಿ ಎಷ್ಟು ಎತ್ತರದ ಮರ ಬೆಳೆಯಬಹುದು ಅನ್ನುವ ಚಿತ್ರಣ ಇಲ್ಲಿ ನಮಗೆ ಸಿಕ್ಕಿತು. ಸಾಮಾನ್ಯವಾಗಿ ಇಂಥ ಬೆಳವಣಿಗೆ ಬರುವುದಿಲ್ಲ. ಹಾಗಾದರೆ ಹೇಗೆ ಸಾಧ್ಯವಾಯಿತು ಈ ಮಟ್ಟದ ಬೆಳವಣಿಗೆ?

## ದಟ್ಟವಾಗಿ ಹಾಕುವುದು ಏಕೆ?

ಬದುಗಳಲ್ಲಿ ಮರಗಿಡ ಎಂದಾಗ ಎಕರೆಗೆ 20, 30 ಗಿಡ ಎಂದು ಯೋಚಿಸುವವರೇ ಹೆಚ್ಚು. ಅದರಿಂದ ಅಂಥ ಪ್ರಯೋಜನ ಇಲ್ಲ. ಮರಗಿಡ ದಟ್ಟವಾಗಿ ಗೋಡೆಯ ಹಾಗೆ ಇರಬೇಕು. ಎಕರೆಗೆ 500– 1000 ಲೆಕ್ಕದಲ್ಲಿ ನಾವು ಮರಗಿಡ ಹಚ್ಚಬೇಕು. ಕೃಷಿ ಅರಣ್ಯ ಮಾಡುವ ರೈತರು ಟ್ರೆಂಚ್ ಒಳಗೆ, ಬದುವಿನ ಮೇಲೆ ಎಲ್ಲಾ ಕಡೆ ಸಸಿ ಹಾಕಿ ತುಂಬಿ ಬಿಡುತ್ತಾರೆ. ಈ ಗಿಡಗಳ ಸೊಪ್ಪನ್ನೇ ಕಡಿದು ಗುಳಿಗಳಿಗೆ ಮಲ್ಚಿಂಗ್ ಮಾಡುತ್ತಾರೆ. ಗಿಡ ಬೆಳೆದಂತೆಲ್ಲಾ ರೈತರು ತಮಗೆ ಬೇಕಾದ ಗಿಡಗಳನ್ನು ಮಾತ್ರ ಎತ್ತರ ಬೆಳೆಸಿ ಉಳಿದದ್ದನ್ನ ಕಡಿದು ಟ್ರೆಂಚಿಗೆ ಹಾಕುತ್ತಾರೆ. ನಿಮಗೆ ಮರ ಒಳ್ಳೆ ಗಾತ್ರ ಬರಬೇಕಾದರೆ ಅಕ್ಕಪಕ್ಕ ಇರುವ ಮರಗಳನ್ನ ಸವರಿಬಿಟ್ಟರೆ ಸಾಕು. ಕಡಿಯಬೇಕಾಗಿಲ್ಲ. ನಿಮಗೆ ತುಂಬಾ ಸೊಪ್ಪು ಬೇಕಾದರೆ ಎಲ್ಲ ಗಿಡಗಳನ್ನು ಬಿಟ್ಟುಕೊಳ್ಳಬಹುದು.

ಇದಕ್ಕೆ ಕಷ್ಟ ಪಡಬೇಕಾದ್ದೇನೂ ಇಲ್ಲ. ಆದ್ದರಿಂದ ನಾವು ಎಕರೆಗೆ 20–30 ಎನ್ನುವುದನ್ನು ಮರೆತು 500– 1000 ಎಂದು ಯೋಚಿಸಬೇಕು. ಇದು ಮುಖ್ಯ.

## ಎಷ್ಟು ಸಮಯ?

ಶ್ರದ್ಧೆ ವಹಿಸಿ ನಿಯಮಗಳನ್ನು ಸರಿಯಾಗಿ ಪಾಲಿಸಿ ಮಾಡಿದರೆ 3–6 ವರ್ಷದಲ್ಲಿ ಮರಗಿಡಗಳ ದಟ್ಟ ಗೋಡೆ ನಿರ್ಮಾಣವಾಗುತ್ತದೆ. ಒಳ್ಳೆ ಮಳೆ ಇರುವ ಪ್ರದೇಶಗಳಲ್ಲಿ ಮೂರೇ ವರ್ಷ ಸಾಕು. ಸುಮಾರಾಗಿ ಮಳೆ ಇರುವ ಕಡೆ 4 ವರ್ಷ ಆಗಬಹುದು. ನಮ್ಮ ಪಾವಗಡದಂಥ ಕಡೆ 6 ವರ್ಷ ಬೇಕಾಗುತ್ತದೆ. ಈ ವೇಳೆಗೆ ಟ್ರಂಚ್ ಕಂ ಬಂಡ್ ಮುಚ್ಚಿ ಹೋಗಿ ಅದರ ತುಂಬ ಉತ್ತಮ ಗೊಬ್ಬರ ತಯಾರಾಗಿ ಲಕ್ಷಾಂತರ ಎರೆಹುಳುಗಳು ಮನೆಮಾಡುತ್ತವೆ.

## ಜಾನುವಾರು

ಮರ ಗಿಡಗಳಿದ್ದಾಗ ಹೊಲಕ್ಕೆ ಜಾನುವಾರು ಬಿಡಬಾರದು ಎಂದು ತಕರಾರು ಮಾಡುತ್ತಾರೆ. ಇದು ಸರಿಯಲ್ಲ. ಕೃಷಿ ಅರಣ್ಯ ಮಾಡಿರುವ ಜಮೀನಿನಲ್ಲಿ ದನ, ಮೇಕೆ, ಕುರಿ ಎಲ್ಲಾ ಮುಕ್ತವಾಗಿ ಓಡಾಡಿಕೊಂಡು ಇರುತ್ತವೆ. ಜಾನುವಾರಿಂದ ಮರಗಳಿಗೆ ತೊಂದರೆ ಇಲ್ಲ. ಸಾವಿರಗಟ್ಟಲೆ ಮರಗಳಿದ್ದಾಗ ಒಂದೈದು ಮರಗಳು ಜಾನುವಾರು ತಿಂದು ಹೋದರೆ ಅಂಥಾ ನಷ್ಟವೇನಾಯಿತು? ಒಂದು ಮರದ ಸಸಿಗೆ 20 ನಯಾಪೈಸೆಯಷ್ಟೆ ಬೆಲೆ. ಐದು ಸಸಿ ಹೋದರೆ ಒಂದು ರೂಪಾಯಿ! ಹೋದರೆ ಹೋಗಲಿ. ಹತ್ತು ಮರ ಹೋದರೆ ಇನ್ನೂ ಹತ್ತು ಹಾಕಿದರಾಯಿತು. ಒಂದು ವರ್ಷ ಹೋದರೂ ಮುಂದಿನ ವರ್ಷ ಸಿಗುತ್ತದೆ. ಮೇಕೆ ಕೂಡ ಚಿಗುರು ಮಾತ್ರ ಕಡಿಯುತ್ತದೆ. ಗಿಡವನ್ನೆಲ್ಲಾ ನಾಶ ಮಾಡುವುದಿಲ್ಲ. ನಾವು ಮೇಕೆ ಕುರಿ ಕಾವಲು ಕಾಯಲು ಆಗುವುದಿಲ್ಲ.



ಬಹು ಮಹಡಿ ಮಾದರಿ



ಕುರಿಗಳಿಂದ ಮರಗಿಡಗಳಿಗೆ ಭಯವಿಲ್ಲ



ಅರಣ್ಯ ಕೃಷಿ ಮಾಡುವ ರೈತರು ತಮಗೆ ಅನುಕೂಲ ಮತ್ತು ಅಗತ್ಯವಾದ ಎಲ್ಲ ಮರಗಿಡಗಳನ್ನು ಬೆಳೆಸಿದ್ದಾರೆ. ಸುಬಾಬುಲ್ ಗಿಡ ಹಾಕಿದಾಗ ಬೀಜ ಬಿದ್ದು ಹೊಲದ ತುಂಬಾ ಸಸಿಗಳು ಬೆಳೆದು ಬಿಡುತ್ತದೆ ಎಂದು ಕೆಲವರು ಹೇಳುವುದನ್ನು ಕೇಳಿದ್ದೇನೆ. ಇದೇನು ದೊಡ್ಡ ವಿಷಯವಲ್ಲ. ನಮ್ಮಲ್ಲಿ ಮರಗಳಿಗಿಂತ ಹೆಚ್ಚು ಕುರಿ ಮೇಕೆ ಇವೆ. ಹೊಲದಲ್ಲಿ ಸುಬಾಬುಲ್ ಮೊಳಕೆಯೊಡೆದಾಗ ಎರಡು ಸಲ ಕುರಿ ಮಂದೆ ನಿಲ್ಲಿಸಿಬಿಟ್ಟರೆ ಸಾಕು. ಒಂದು ಸಸಿಯೂ ಉಳಿಯುವುದಿಲ್ಲ.

ಧಾರವಾಡದ ಕಡೆ ಒಬ್ಬ ರೈತರು ಮಳೆ ಸಮಸ್ಯೆಯಿಂದ, ಕೂಲಿಯವರ ಸಮಸ್ಯೆಯಿಂದ ಬೇಸತ್ತು ಬೆಳೆಯೇ ಬೇಡ ಎಂದು ಹೊಲದಲ್ಲಿ ಬರೀ ಮೇವು ಬೆಳೆಸಿಕೊಂಡು ಕುರಿ ಸಾಕಿದ್ದಾರೆ. ಹೆಮಟ ಹುಲ್ಲು ಬೆಳೆದು 2000 ಕುರಿ ಮೇಯಿಸಿಕೊಂಡು ಸುಖವಾಗಿದ್ದಾರೆ. ಹೀಗೆ ಒಬ್ಬೊಬ್ಬ ರೈತರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳುವುದನ್ನು ನೋಡುತ್ತೇವೆ.

ಇಲ್ಲಿ ಕೆಲವು ತತ್ವಗಳಿವೆ. ಇವುಗಳನ್ನು ನಾವು ಮೊದಲು ಅರ್ಥ ಮಾಡಿಕೊಂಡು ನಂತರ ಹುಷಾರಾಗಿ ಅಳವಡಿಸಿಕೊಳ್ಳಬೇಕು. ಅಕ್ಷರಷಃ ಅಳವಡಿಸಲು ಪ್ರಯತ್ನಿಸಿದರೆ ಎಡವಟ್ಟಾಗುತ್ತದೆ.

## ಏನು ಆ ತತ್ವಗಳು?

ಮೊದಲನೆಯದು, ಹಿಂದೆಯೇ ಹೇಳಿದಂತೆ ಒಂದು ಎಕರೆಗೆ 600–2500 ಗಿಡಗಳು. ಆದರೆ ಎಲ್ಲ ಕಡೆ 2500 ಗಿಡಗಳನ್ನು ಹಾಕಲು ಸಾಧ್ಯವಿಲ್ಲ. ಆ ಹೊಲದಲ್ಲಿ ಎಷ್ಟು ಪ್ರಮಾಣದ ನೀರು ಸಿಗುತ್ತದೆ ಅನ್ನುವುದರ ಮೇಲೆ ಗಿಡಗಳ ಸಂಖ್ಯೆಯನ್ನು ನಿರ್ಧಾರ ಮಾಡಬೇಕು. ಕಡಿಮೆ ಎಂದರೆ 600 ಗಿಡಗಳು. ಹಾಗೆಯೇ ಎಕರೆಗೆ 2500ಕ್ಕಿಂತ ಹೆಚ್ಚು ಗಿಡಗಳ ಜೋಡಣೆ ಆಗುವುದಿಲ್ಲ. ಮೊದಲು ನೀರಿನ ಲಭ್ಯತೆಯನ್ನು ಲೆಕ್ಕಾಚಾರ ಹಾಕಬೇಕು. ಅದು ಗೊತ್ತಿಲ್ಲದೆ ಸುಮ್ಮನೆ ಮರಗಿಡ ಹಾಕುತ್ತಾ ಹೋದಾಗ ಮತ್ತೆ ಎಡವಟ್ಟು. ನೀರಿನ ಲಭ್ಯತೆಯನ್ನು ಲೆಕ್ಕಾಚಾರ ಹಾಕುವುದನ್ನು ನವಂಬರ್ ಕಾರ್ಯಾಗಾರದಲ್ಲಿ ಕಲಿಯೋಣ.

ಎರಡನೆಯದು, ಮರಗಿಡ ಜೋಡಣೆಯಲ್ಲಿ ಬಹು ಮಹಡಿ ವಿಧಾನ. ನೀವು ದಟ್ಟ ಕಾಡಿನ ಒಳಗೆ ಹೋಗಿ ನೋಡಿದರೆ, ಅಲ್ಲಿ 80–100 ಅಡಿ ಎತ್ತರದ ಬೃಹತ್ತಾದ ಮರಗಳು ಇರುತ್ತವೆ. ಅದರ ಕೆಳಗೆ 20– 30 ಅಡಿ ಎತ್ತರದ ಮರಗಳಿರುತ್ತವೆ. ಅಡಿಯಲ್ಲಿ 4–5 ಅಡಿ ಎತ್ತರದ ಎತ್ತರದ ಕುರುಚಲು ಗಂಟೆಗಳಿರುತ್ತವೆ. ಉತ್ತಮವಾದ ಯಾವುದೇ ಕಾಡಿನಲ್ಲಿ ಈ ಮೂರು ಹಂತದಲ್ಲಿ ಸಸ್ಯರಾಶಿ ಇದ್ದೇ ಇರುತ್ತದೆ. ಯಾಕೆ ಹೀಗೆ ಎಂದರೆ, ಮರಗಿಡ ಬೆಳೆಯುವುದು ಸೂರ್ಯನ ಬಿಸಿಲಿನಿಂದ. ಸೂರ್ಯನ ಬಿಸಿಲನ್ನು ಅತ್ಯಂತ ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕೆಂದರೆ ಈ ಥರ ಇರಬೇಕು. ನಮ್ಮ ಹೊಲದಲ್ಲೂ ಅಷ್ಟೆ. ಎತ್ತರವಾದ ಮರಗಳು. ಅದರ ಕೆಳಗೆ 5–6 ಎತ್ತರದ ಮರಗಳು ಮತ್ತು ಕೆಳಗೆ ಬೆಳೆಗಳು ಹೀಗೆ ಕನಿಷ್ಟ ಮೂರು ಹಂತದಲ್ಲಿ ಇರಬೇಕು. ಎತ್ತರವಾದ ಮರಗಳು ಮರಮಟ್ಟಿಗೆ ಬಂದರೆ, 5–6 ಅಡಿ ಎತ್ತರದ ಗಿಡಗಳು ಕಟ್ಟಿಗೆಗೆ, ಸೊಪ್ಪಿಗೆ ಬರುತ್ತವೆ. ಅದರಡಿ ಆಹಾರದ ಬೆಳೆಗಳು. ಬೆಳೆ–ಮರ ಜೋಡಣೆಯಲ್ಲಿ ಈ ನಿಯಮ ಮುಖ್ಯ. ಇದನ್ನ ನಾವು ಅನುಸರಿಸಬೇಕು. ಶೇಕಡ ಎಷ್ಟು ಭಾಗ ಎತ್ತರದ ಮರಗಳು, ಶೇಕಡ ಎಷ್ಟು ಭಾಗ 5–6 ಅಡಿ ಮರಗಳು, ಶೇಕಡ ಎಷ್ಟು ಭಾಗ ಬೆಳೆ ಇರಬೇಕು ಅನ್ನುವುದನ್ನ ನಾವು ಲೆಕ್ಕ ಹಾಕಬೇಕು. ಈ ಲೆಕ್ಕಚಾರವನ್ನು ನವಂಬರ್ ಕಾರ್ಯಗಾರದಲ್ಲಿ ಅಭ್ಯಾಸ ಮಾಡೋಣ.

ಹೊಲದಲ್ಲಿ ಸುಬಾಬುಲ್ ಮೊಳಕೆಯೊಡೆದಾಗ ಎರಡು ಸಲ ಕುರಿ ಮಂದೆ ನಿಲ್ಲಿಸಿಬಿಟ್ಟರೆ ಸಾಕು. ಒಂದು ಸಸಿಯೂ ಉಳಿಯುವುದಿಲ್ಲ.

ಮೂರನೆಯದು, ಪ್ರಕೃತಿಯ ಶಕ್ತಿಯ ಲಾಭ ಪಡೆಯುವುದು. ಇಷ್ಟೊಂದು ಮರ ಬೆಳೆಯುವುದು ನಮಗೆ ಹೇಗೆ ಸಾಧ್ಯವಾಗುತ್ತದೆಂದರೆ, ಪ್ರಕೃತಿಯಲ್ಲಿ ಅನೇಕ ಶಕ್ತಿಗಳಿರುತ್ತವೆ, ಲಭ್ಯತೆಗಳಿರುತ್ತವೆ. ಅವುಗಳನ್ನ ಉಪಯೋಗ ಮಾಡಿಕೊಂಡು ನಾವು ಮರ ಬೆಳೆಸುತ್ತಿರುತ್ತೇವೆ. ಮರಗಳು ಕೇವಲ ನಾವು ಕೊಡುವ ನೀರು ಗೊಬ್ಬರದಿಂದ ಬೆಳೆಯುವುದಿಲ್ಲ. ನಾವು 2 ಯೂನಿಟ್ ಹಾಕಿದರೆ ಪ್ರಕೃತಿ 10 ಯೂನಿಟ್ ತುಂಬಿ ಕೊಡುತ್ತದೆ. ನಾವು ಪ್ರಾರಂಭದ ಒತ್ತಾಸೆಯನ್ನು ಮಾತ್ರ ಕೊಡುತ್ತಾ ಇದ್ದೇವೆ. ಗಿಡ ಬೆಳೆಯಲು ಬೇಕಾದ ಎಲ್ಲವನ್ನು ನಾವು ಕೊಡುತ್ತಿಲ್ಲ. ಅದು ಮಣ್ಣಿನಲ್ಲಿ, ಗಾಳಿಯಲ್ಲಿ, ಜೀವಾಣುಗಳಲ್ಲಿ ಇರುವುದನ್ನು ಸಮರ್ಪಕವಾಗಿ ಬಳಸಿಕೊಂಡು ಬೆಳೆಯುತ್ತಿರುತ್ತದೆ. ಇದು ಪರಿಸರ ಕೃಷಿಯ ಮೂಲ ತತ್ವ.

ನಾವು 75% ಮರಗಳನ್ನು ಸೊಪ್ಪಿಗಾಗಿ ಇಟ್ಟುಕೊಂಡು 25% ಮರಗಳನ್ನು ಮಾತ್ರ ಮರಮಟ್ಟಿಗೆ ಬೆಳೆಸುತ್ತೇವೆ. ಯಾಕೆಂದರೆ, 75% ಮರಗಳ ಸೊಪ್ಪು ಬೀಳದೆ ಇದ್ದರೆ ಇನ್ನು 25% ಮರಗಳಿಗೆ ಒತ್ತಾಸೆ ಸಿಗುವುದಿಲ್ಲ. ಆ ಸೊಪ್ಪಿನಿಂದ ಗೊಬ್ಬರ ಮಾಡಿದಾಗ ಮಾತ್ರ ಮರಗಳು, ಬೆಳೆಗಳು ಚನ್ನಾಗಿ ಬರುವುದು. ಫಲವತ್ತು ಕೊಡುವುದು. ಸೊಪ್ಪು ಸಿಕ್ಕಿದ ತಕ್ಷಣ ಮಣ್ಣಿನಲ್ಲಿ ಇರುವ ಜೀವಾಣುಗಳು ವೇಗವಾಗಿ ವೃದ್ಧಿಸುತ್ತವೆ. ಅವು ಮಣ್ಣಿನಲ್ಲಿ ಬೀಗ ಹಾಕಿಕೊಂಡು ಕುಳಿತಿರುವ ರಂಜಕ ಮುಂತಾದ ಲವಣಾಂಶಗಳನ್ನು ಬಿಡುಗಡೆ ಮಾಡಿ ಬೆಳೆಗಳಿಗೆ ಕೊಡುತ್ತವೆ. ಗಾಳಿಯಿಂದ ಸಾರಜನಕವನ್ನು ತೆಗೆದುಕೊಳ್ಳುತ್ತವೆ. ಎಲ್ಲ ಪೋಷಕಾಂಶಗಳು ಮಣ್ಣಿನಲ್ಲೇ ಇರುತ್ತವೆ. ಆದರೆ ಸಸ್ಯಗಳು ತೆಗೆದುಕೊಳ್ಳುವ ರೂಪದಲ್ಲಿ ಇರುವುದಿಲ್ಲ. ಅವುಗಳನ್ನು ಈ ಸೂಕ್ಷ್ಮಾಣುಜೀವಿಗಳು ಬಿಡಿಸುತ್ತಾ ಸಸ್ಯಗಳಿಗೆ ಲಭ್ಯವಾಗಿಸುತ್ತಾ ಹೋಗುತ್ತವೆ. ನಾವಿದನ್ನ ಅಳತೆ ಮಾಡಿ ನೋಡಿದ್ದೀವಿ. ನಾವು 10 ಕೆಜಿ ಪೋಷಕಾಂಶ ಹಾಕಿದರೆ 2–3 ವರ್ಷದಲ್ಲಿ ನಿಮಗೆ 200 ಕೆಜಿ ಪೋಷಕಾಂಶ ಸಿಗುತ್ತದೆ. ಇದು ಈ ಒಂದು ವೃದ್ಧಿಸುವ ಪ್ರಕ್ರಿಯೆಯಿಂದ ಸಾಧ್ಯ. ಹೀಗಾಗುವುದರಿಂದ ಮಣ್ಣಿನ ಫಲವತ್ತತೆ ಅಧಿಕಗೊಳ್ಳುತ್ತದೆ. ಗುಣಿನಲ್ಲಿ ಎರೆಹುಳುಗಳು ಅಧಿಕ ಸಂಖ್ಯೆಯಲ್ಲಿರುತ್ತವೆ. ನೀರು ಸೊಪ್ಪು ಇದ್ದರೆ ಎರೆಹುಳು ಹುಡುಕಿಕೊಂಡು ಬರುತ್ತವೆ(ಸ್ಥಳೀಯ ಎರೆಹುಳು). ಪ್ರಕೃತಿ ತುಂಬಿ ಕೊಡುತ್ತದೆ ಅನ್ನುವುದು ಇದನ್ನೇ. ಇದೇ ಪ್ರಕೃತಿಯಲ್ಲಿರುವ ಶಕ್ತಿ.

ನಾಲ್ಕನೆಯದನ್ನು 'ತತ್ವ' ಅನ್ನುವುದಕ್ಕಿಂತ ಬುದ್ಧಿವಂತಿಕೆ ಎನ್ನಬಹುದು.

ನಮ್ಮ ದೊಡ್ಡ ತೊಂದರೆ ಮಳೆಯ ಅನಿಶ್ಚಿತತೆ. ಮಳೆ ಬಂದರೆ ನೀರು, ನೀರಿನ ಶೇಖರಣೆ ಎಲ್ಲ. ಮಳೆಯೇ ಇರದಿದ್ದರೆ ನೀರಿನ ಶೇಖರಣೆಯೂ ಇಲ್ಲ. ಮರಗಿಡ ಬೆಳೆಸುವುದೂ ಸಾಧ್ಯವಿಲ್ಲ. ಕೆಲ ಸಮಯ ಅತಿಯಾದ ಮಳೆಯೂ ತೊಂದರೆಯೂ. ಒಂದೇ ಸಲಕ್ಕೆ 100 ಸೆಂ.ಮೀ ಮಳೆ ಬಂದು ಬಿಟ್ಟರೆ ನಾವು ಮಾಡಿರುವ ಟ್ರೆಂಚ್‌ಗಳು ನೀರಿನ ಶೇಖರಣೆಗೆ ಸಾಲದೆ ಹೋಗುತ್ತದೆ. ನೀರಿದ್ದೂ ತುಂಬಲು ಗುಣಿಗಳಿಲ್ಲದಂತೆ ಆಗುತ್ತದೆ. ಟ್ರೆಂಚ್ ಮಾಡಿ ಮಳೆ ಬರದಿದ್ದರೆ ತೊಂದರೆ. ಮಾಡಿದ್ದಕ್ಕಿಂತ ಹೆಚ್ಚು ಮಳೆ ಬಂದರೂ ತೊಂದರೆ. ಈ ಎರಡು ತೊಂದರೆಗಳೂ ಇರಬಾರದು. ಇಂಥ ಏರುಪೇರಿನ ಸಮಯದಲ್ಲಿ ಒಂದು ಎಕರೆಗೆ ಎಷ್ಟು ಗುಣಿ ಹಾಕಬೇಕು? ಹೇಗೆ ಹಾಕಬೇಕು? ಇದಕ್ಕೆ ಒಂದು ಲೆಕ್ಕಾಚಾರ ಇದೆ. ಗುಣಿ ತೋಡುವಾಗ ಇಳಿಜಾರು, ಮಳೆ ಇತ್ಯಾದಿಗಳನ್ನು ಲೆಕ್ಕ ಹಾಕಿಕೊಂಡು ಮಾಡಬೇಕು. ಇದನ್ನು ನವಂಬರ್ ಕಾರ್ಯಾಗಾರದಲ್ಲಿ ಕಲಿಯೋಣ.

ಐದನೆಯ ತತ್ವ ಎಂದರೆ, ಮಳೆ ಏರುಪೇರಿರುವ ಪ್ರದೇಶದಲ್ಲಿ ನಾವು ಆದಷ್ಟೂ ಗಿಡದ ಕಾಯಿ/ಹಣ್ಣು/ಕಾಳುಗಳಿಂದ ಉತ್ಪನ್ನ ನೋಡುವ ಬದಲು ಗಿಡದ ಕಾಂಡ ಮತ್ತು ಸೊಪ್ಪುನಿಂದ ಉತ್ಪನ್ನ ತೆಗೆಯುವುದನ್ನು ನೋಡಬೇಕು. ನೀವು ಯಾವುದೇ ಬೆಳೆ ತೆಗೆದುಕೊಂಡರೂ ಹೂ ಕಚ್ಚುವಾಗ, ಕಾಯಿ ಕಚ್ಚುವಾಗ, ಕಾಳು ಹಾಲು ತುಂಬುವಾಗ, ಕಾಳು ಗಟ್ಟಿ ಆಗುವಾಗ ಮಳೆ ಬೇಕೆ ಬೇಕು. ಈ ಹಂತಗಳಲ್ಲಿ ಮಳೆ ಹೋದರೆ

ಬೆಳೆ ಹೋದಂತೆ. ಹೀಗಾಗಿ ನಾವು ಇಲ್ಲಿ ನಮ್ಮ ಉತ್ಪನ್ನವನ್ನು ಹಣ್ಣು, ಕಾಯಿ, ಕಾಳು ಇಂಥದನ್ನ ಬಿಟ್ಟು ಸೊಪ್ಪಿನಲ್ಲಿ ತೆಗೆದುಕೊಳ್ಳಲು ನೋಡಬೇಕು. ಉದಾಹರಣೆಗೆ, ಹಿಪ್ಪು ನೇರಳೆ. ಇದರಲ್ಲಿ ಸೊಪ್ಪೇ ಉತ್ಪನ್ನ. ನಾವು ಸೊಪ್ಪಿನ ಮೇಲೆ ಅವಲಂಬನೆ ಆಗಿದ್ದಾಗ, ಅದು ಮಳೆ ಬಂದರೆ ಬೆಳೆಯುತ್ತೆ, ಇಲ್ಲದಿದ್ದಾಗ ಬೆಳೆಯದೆ ಸುಮ್ಮನಿರುತ್ತೆ. ನಷ್ಟ ಏನೂ ಇಲ್ಲ. ಧಾನ್ಯಗಳಾದರೆ ಹಾಲು ತುಂಬುವಾಗ 15–20 ದಿವಸ ಮಳೆ ಹೋದರೆ ಬೆಳೆ ಹೋದಂತೆ. ಸೊಪ್ಪಿನ ಮೇಲೆ ಅವಲಂಬನೆ ಆದಾಗ ಏರು ಪೇರಿನ ಹೊಡೆತ ಕಮ್ಮಿಯಾಗುತ್ತೆ. ಕಾಳಿನ ಮೇಲೆ ಅವಲಂಬನೆ ಇದ್ದಾಗ ಏರು ಪೇರಿನ ಹೊಡೆತ ಹೆಚ್ಚಾಗುತ್ತದೆ ಎಂಬ ತತ್ವ ನಮ್ಮ ನೆನಪಿನಲ್ಲಿರಲಿ.

ಆರನೆಯ ತತ್ವ, ಕೊಚ್ಚಿ ಹೋಗುವ, ಆವಿಯಾಗುವ ನೀರಿನ ಪ್ರಮಾಣವನ್ನು ಸೊನ್ನೆ ಮಾಡುವುದು.

ಯಾವುದೇ ಒಂದು ಮಳೆಯಾಶ್ರಿತ ಪ್ರದೇಶದಲ್ಲಿ ಬೀಳುವ ಮಳೆಯಲ್ಲಿ 10–30% ನೀರು ಭೂಮಿಯೊಳಗೆ ಹೋಗುತ್ತದೆ. ಗಿಡಗಳು 15% ಉಪಯೋಗ ಮಾಡಿಕೊಳುತ್ತವೆ. 15–30% ಆವಿಯಾಗುತ್ತದೆ. 10–25% ಕೊಚ್ಚಿ ಹರಿದು ಹೋಗುತ್ತೆ. ನೀರು ಕೊಚ್ಚಿ ಹರಿಯುವುದರಿಂದ, ಆವಿಯಾಗುವುದರಿಂದ ನಮಗೆ ಪ್ರಯೋಜನ ಇಲ್ಲ. ಇದನ್ನು ನಾವು ಸೊನ್ನೆ ಮಾಡಿಬಿಡಬೇಕು. ನಮ್ಮ ಹೊಲದಿಂದ ಬಿದ್ದ ಯಾವ ನೀರೂ ಕೊಚ್ಚಿ ಹೋಗಬಾರದು, ಆವಿಯಾಗಬಾರದು. ಗಿಡಗಳ ಬೇರಿಗೆ ಹೋಗಬೇಕು, ಇಲ್ಲ ಮಣ್ಣಿನಡಿಗೆ ಹೋಗಬೇಕು. ಇದನ್ನ 100% ಮಾಡಬೇಕು. ಹೀಗೆ ಮಾಡಲು ಸಾಧ್ಯ ಇದೆ. ಎಷ್ಟು ಉತ್ತಮವಾಗಿ ಮಾಡಿದರೆ ಅಷ್ಟು ಉತ್ಪಾದನೆ ಜಾಸ್ತಿಯಾಗುತ್ತೆ. ಇದನ್ನು ಕೂಡ ನವಂಬರ್ ಕಾರ್ಯಾಗಾರದಲ್ಲಿ ಚರ್ಚಿಸೋಣ.

### ಯಾಕೆ ಬೇಕು ಮರಗಳು?

ನಮ್ಮ ಹೊಲಗಳಲ್ಲಿ ಕೆಳಗೆ ಗಟ್ಟಿ ಬಂಡೆವರೆಗೆ ಮಣ್ಣು ಇರುತ್ತದೆ. ಸರಿಸುಮಾರು 12 ಅಡಿ ಅಂದುಕೊಳ್ಳೋಣ. ಅಷ್ಟು ಆಳಕ್ಕೆ ಹೋದರೆ ನಾವು ನೀರು ತಲುಪುತ್ತೇವೆ. ಆದರೆ ನಮ್ಮ ಯಾವುದಾದರೂ ಬೆಳೆಯ ಬೇರು 12 ಅಡಿ ಆಳಕ್ಕೆ ಹೋಗುತ್ತಾ? ಇಲ್ಲ. ನಾವು ಟ್ರೆಂಚ್ ಮಾಡಿ, ನೀರು ಶೇಖರಿಸಿ ಅದನ್ನು ಮಣ್ಣಿನಡಿಗೆ ಕಳಿಸಿದ್ದಾಯಿತು. ಆದರೆ ಅದನ್ನು ತೆಗೆದುಕೊಳ್ಳುವುದು ಹೇಗೆ? ಮರಗಳ ಬೇರಿನಿಂದ ಮಾತ್ರ ಇದನ್ನು ತೆಗೆದುಕೊಳ್ಳುವುದು ಸಾಧ್ಯ. ಮರದ ಪಾತ್ರ ನೆಲದಡಿಯ ನೀರಿನ ಡೆಪಾಸಿಟ್‌ನ್ನು ಹೊರತೆಗೆಯುವುದು. ಬೆಳೆಗೆ ಸಿಗುವ ಮೂರು ಪಟ್ಟು ಹೆಚ್ಚು ನೀರು ಮರಕ್ಕೆ ಸಿಗುತ್ತದೆ. ಹೊಲದಲ್ಲಿ ಇರುವ ನೀರನ್ನು ಸೆಳೆಯಲು ಬೇರುಗಳು ಬೇಕು. ಆದರೆ 20–30 ಮರಗಳಲ್ಲ. ಎಕರೆಗೆ ಸಾವಿರಗಟ್ಟಲೆ ಮರಗಳು ಬೇಕು. ಇನ್ನೂ ಹೇಳಬೇಕೆಂದರೆ, ನಮಗೆ ಮರದ ತಲೆಗಿಂತ ಮರದ ಬುಡ ಬೇಕು. ಬೇರು ಇಲ್ಲದಿದ್ದರೆ ಇಷ್ಟು ಆಳದ ಮಣ್ಣಿನಲ್ಲಿ ಇರುವ ನೀರನ್ನು ಹೊರ ತೆಗೆದು ಬಳಸಲು ಆಗುವುದಿಲ್ಲ. ಆಗ ನಾವು ಆಪತ್ಕಾಲಕ್ಕೆ ಹಣ ಕೂಡಿಟ್ಟಿದ್ದು ಅದನ್ನು ಸದುಪಯೋಅಗ್ ಪಡಿಸಿಕೊಳ್ಳಲು ಸಾಧನವಿಲ್ಲದ ಮೂರ್ಖರಂತೆ ಆಗಿಬಿಡುತ್ತೇವೆ. ಮರ ಜಾಸ್ತಿ ಹಾಕಬೇಕು ಎನ್ನುವುದು ಈ ಕಾರಣಕ್ಕೆ. ಇದು ಅರಣ್ಯ ಇಲಾಖೆಯವರು ಮತ್ತು ಅರಣ್ಯ ವಿಜ್ಞಾನಿಗಳು ಹೇಳುವುದಕ್ಕಿಂತ ತುಂಬಾ ಭಿನ್ನವಾಗಿದೆ. ಮರಕ್ಕೆ ಬೆಳೆಗಿಂತ ಹೆಚ್ಚು ನೀರು ಸಿಕ್ಕುತ್ತದೆ. ಜಾಸ್ತಿ ಬಿಸಿಲು ಸಿಗುತ್ತದೆ. ಜಾಸ್ತಿ ದುಡ್ಡೂ ಸಿಗುತ್ತದೆ. ಹಾಗಾದರೆ ಮರ ಬೆಳೆಯಲು ಹಿಂಜರಿಕೆ ಯಾಕೆ?



ಮರಗಿಡ ಜೋಡಣೆ ಮಾಡಿದಾಗ ಹೊಲ ಹೀಗೆ ಕಾಣುತ್ತದೆ.

ನಾವು ಒಂದು ಪ್ರಯೋಗದಲ್ಲಿ 6000 ಮರಮಟ್ಟು ಕೊಡುವ ಮರಗಳನ್ನು ಅಳತೆ ಮಾಡುತ್ತಾ ಇದ್ದೇವೆ. ಲೆಕ್ಕಾಚಾರ ಮಾಡುತ್ತಿದ್ದೇವೆ. ಮಣ್ಣಿನ ತೇವಾಂಶ ಎಷ್ಟಿದೆ? ಪೋಷಕಾಂಶಗಳು ಎಷ್ಟಿದೆ? ಬೆಳವಣಿಗೆ ಎಷ್ಟಿದೆ? ಇನ್ನೂ ಮುಂತಾದ ವಿವರಗಳನ್ನು ಪ್ರತಿ 6 ತಿಂಗಳಿಗೆ ಅಳತೆ ಮಾಡಿದ ಬೇಕಾದಷ್ಟು ಮಾಹಿತಿ ನಮ್ಮ ಬಳಿ ಇದೆ. ಇದನ್ನೆಲ್ಲಾ ನವಂಬರ್ ಕಾರ್ಯಾಗಾರದಲ್ಲಿ ನೋಡೋಣ.

### ಪ್ರಯೋಗಪರಿವಾರಗಳ ಜತೆ ಸಂವಾದ

ಒಮ್ಮೆ ಪ್ರಯೋಗ ಮಾಡಲು ತೊಡಗಿದ ರೈತರಲ್ಲಿ ಅನೇಕ ಪ್ರಶ್ನೆಗಳು ಮೂಡತೊಡಗುತ್ತವೆ. ಅದನ್ನು ಅವರು ತಮ್ಮಂತೆಯೇ ಪ್ರಯೋಗ ಮಾಡುತ್ತಿರುವ ರೈತರ ಗುಂಪಿನಲ್ಲಿ ಹಂಚಿಕೊಳ್ಳುತ್ತಾರೆ. ಉತ್ತರಗಳನ್ನು ಹುಡುಕುತ್ತಾರೆ. ಇನ್ನೂ ಹೆಚ್ಚಿನ ಸ್ಪಷ್ಟತೆ/ಮಾಹಿತಿ ಬೇಕಿದ್ದಾಗ ಪ್ರಯೋಗ ಪರಿವಾರ ನಮ್ಮಂಥ ವಿಜ್ಞಾನಿಗಳ ಜೊತೆ ಚರ್ಚಿಸುತ್ತದೆ. ಉದಾಹರಣೆಗೆ, ಇಕ್ರಾ ಮಾರ್ಗದರ್ಶನದ ಕೊಟ್ಟೂರು(ಬಳ್ಳಾರಿ) ಪ್ರದೇಶದ ಸಾವಯವ ರೈತರ ಪ್ರಯೋಗ ಪರಿವಾರ ಮತ್ತು ನನ್ನ ನಡುವೆ, ನಮ್ಮ ಮಳೆಗಳನ್ನು ಅರ್ಥ ಮಾಡಿಕೊಳ್ಳುವ ವಿಚಾರದಲ್ಲಿ ತುಂಬಾ ಅರ್ಥ ಪೂರ್ಣ ವಿಚಾರ ವಿನಿಮಯ ನಡೆಯಿತು.

ಪ್ರಶ್ನೆಗಳು ಮತ್ತು ಉತ್ತರಗಳು ಇಂತಹ ಅರ್ಥಪೂರ್ಣ ಪ್ರಕ್ರಿಯೆಯಿಂದ ಹೊರಹೊಮ್ಮಬೇಕು. ಪ್ರಯೋಗ ಪರಿವಾರದ ಪ್ರಶ್ನೆಗೆ ಉತ್ತರ ಕೊಡಬೇಕಾದರೆ ನಮಗೆ ಮಾಹಿತಿ ಬೇಕು. ಎಲ್ಲಾ ಸಂದರ್ಭಗಳಲ್ಲೂ ನಾವು ಮುಖಾಮುಖಿಯಾಗಿ ಸಂವಾದ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಈಗ ಮಾಹಿತಿ ವಿನಿಮಯ ಮೊಬೈಲ್ ಫೋನ್ ಮುಖಾಂತರ ಸಾಧ್ಯವಾಗುವಂತೆ ಮಾಡಿದ್ದೇವೆ. ಈ ಪ್ಯಾಕೇಜನ್ನು ಎಲ್ಲಾ ಮೊಬೈಲ್‌ಗಳಿಗೂ ಹಾಕಬಹುದು. ಪ್ರಯೋಗ ಪರಿವಾರ ತಮಗೆ ಬೇಕಾದ ಎಲ್ಲಾ ಪ್ರಶ್ನೆಗಳನ್ನು ಮೊಬೈಲ್‌ನಲ್ಲಿ ಹಾಕಬಹುದು. ನಾವು ಅದಕ್ಕೆ ಉತ್ತರ ಕಳಿಸುವ ಜೊತೆಗೆ ಇಂಥ ಪ್ರಯೋಗ ಮಾಡಿರುವ 10 ಜನ ರೈತರ ವಿಡಿಯೋ, ಫೋಟೋ, ಅವರ ಫೋನ್ ನಂಬರ್‌ಗಳನ್ನು ಕೊಡುತ್ತೇವೆ. ಅವರನ್ನು ಸಂಪರ್ಕ ಮಾಡಬಹುದು. ಇಂಥ ವ್ಯವಸ್ಥೆಯನ್ನು ನಮ್ಮ ಊರಿನಲ್ಲಿ ಮಾಡಿದ್ದೇವೆ. ಎಲ್ಲಾ ಕಡೆಗೂ ಮಾಡಬೇಕಾದರೆ ಸಮಯ ಬೇಕು. ಆದರೆ ಮಾಡಬಹುದು. ಅಗ್ರೋಫಾರೆಸ್ಟ್ರಿ ಕುರಿತು ಕೆಲಸ ಮಾಡುವ ಪ್ರಯೋಗ ಪರಿವಾರಗಳು ಇನ್ನು ಮುಂದೆ ಕ್ರಿಯಾಶೀಲವಾಗಬೇಕು ಎಂಬುದು ನಮ್ಮ ಆಶಯ.

ಇವೆಲ್ಲವನ್ನೂ ನವಂಬರ್ ಕಾರ್ಯಾಗಾರದಲ್ಲಿ ಚರ್ಚಿಸೋಣ. ■

# ನಮ್ಮ ಮಕ್ಕಳಿಗೆಷ್ಟು ವಿಷ ತಿನ್ನಿಸುತ್ತಿದ್ದೇವೆ?



**ಕರ್ನಾಟಕ ಬೀಜ ರಕ್ಷಕರ ಸಮಾವೇಶದಲ್ಲಿ ಮಂಡಿಸಿದ ವಿಚಾರಗಳ 3ನೇ ಕಂತು**

● **ಡಾ। ಗೌರಿ ಸೋಮಯಾಜಿ**

ನಾನು ಮಕ್ಕಳ ಡಾಕ್ಟರ್. ಬೆಂಗಳೂರಿನಲ್ಲಿ ಕೆಲಸ ಮಾಡುತ್ತೇನೆ. ನಾನು ಹೇಳುತ್ತಿರುವುದು ಇಲ್ಲಿನ ಅನುಭವ. ಆದರೆ ನಾನು ಇಲ್ಲಿ ನೋಡುತ್ತಿರುವ ಸಮಸ್ಯೆಗಳು, ಈ ತೊಂದರೆಗಳು ಈಗ ಸಣ್ಣ ಪಟ್ಟಣಗಳಲ್ಲೂ ಕಾಣಿಸುತ್ತಿವೆ. ನಮ್ಮ ಹಳ್ಳಿಗಳಿಗೆ ಬರುವ ಕಾಲ ದೂರವಿಲ್ಲ. ಈಗಾಗಲೇ ಬಂದಿದ್ದರೂ ಆಶ್ಚರ್ಯವಿಲ್ಲ. ಇದು ಚಿಂತೆಗೀಡುಮಾಡುವ ವಿಚಾರ. ಇದನ್ನು ಕುರಿತು ಸ್ವಲ್ಪ ಹೇಳುತ್ತೇನೆ.

ಮಕ್ಕಳಲ್ಲಿ ಹೆಚ್ಚಾಗಿ ಕೆಮ್ಮು, ನೆಗಡಿ, ವಾಂತಿ–ಬೇಧಿ ಸರ್ವೇಸಾಮಾನ್ಯ. ಆದರೆ ಈಗ ನಮ್ಮಲ್ಲಿಗೆ ಕರೆತರುವ 50 ಮಕ್ಕಳಲ್ಲಿ 10 ಮಕ್ಕಳ ತಂದೆತಾಯಿಯರ ಸಮಸ್ಯೆ ಎಂದರೆ, 'ನನ್ನ ಮಗು ಬೆಳಿತಾ ಇಲ್ಲ, ತೂಕ ಬರ್ತಾ ಇಲ್ಲ, ಎತ್ತರ ಆಗ್ತಾ ಇಲ್ಲ, ಸ್ಕೂಲಲ್ಲಿ ಚನ್ನಾಗಿ ಮಾಡ್ತಾ ಇಲ್ಲ'. ಇದು ತಂದೆ ತಾಯಿಯರಿಗೆ ದೊಡ್ಡ ಚಿಂತೆಯಾಗಿದೆ.

ಎರಡನೆಯದಾಗಿ, ತಂದೆತಾಯಿಗಳು ಕೇಳುವುದೆಂದರೆ, 'ನನ್ನ ಮಗುಗೆ ತಿಂಗಳಿಗೆ 2, 3 ಸಲವಾದರೂ ಕೆಮ್ಮು ನೆಗಡಿ ಬರ್ತಾನೆ ಇರುತ್ತಲ್ಲ ಯಾಕೆ ಡಾಕ್ಟ್ರೇ? ಹೊರಗೆ ಹೋದ ಕೂಡಲೆ ಬೇಧಿ ಬರುತ್ತಲ್ಲ ಡಾಕ್ಟ್ರೇ, ಏನು ಮಾಡದು ಇದಕ್ಕೆ?' ಅಂದರೆ ಇದರರ್ಥ ಆ ಮಕ್ಕಳಿಗೆ ರೋಗಗಳನ್ನ ತಡೆದುಕೊಳ್ಳುವ ಶಕ್ತಿ ಇಲ್ಲ. ಪದೇ ಪದೇ ಹುಷಾರು ತಪ್ಪುತ್ತೆ. ಎಲ್ಲದಕ್ಕೂ ಪದೇ ಪದೇ ಮಾತ್ರೆ ಕೊಡುತ್ತಿರಬೇಕು.

ಮೂರನೆಯದ್ದು, ಸಣ್ಣ ಮಕ್ಕಳಲ್ಲಿ ತೂಕ ಹೆಚ್ಚಾಗುತ್ತಿರುವುದು. ನಾಲ್ಕು ತಿಂಗಳ ಮಗು ಎಂಟು–ಎಂಟೂವರೆ ಕೆಜಿ! ಅಜ್ಜಿಗಂತೂ ಖುಷಿ. ಮುದ್ದಾಗಿದೆ ಮಗು, ತುಂಬಾ ಗುಂಡು ಗುಂಡಾಗಿದೆ ಅಂತ. ಒಂದು ವರ್ಷದ ಒಳಗೆ ಮಗು ತೂಕ ಜಾಸ್ತಿ ಆದರೆ ಮುಂದೆ 15 ವರ್ಷಕ್ಕೇ ಬಿಪಿ ಕಾಯಿಲೆ, ಕೊಲೆಸ್ಟ್ರಾಲ್ ಕಾಯಿಲೆ, ಸಕ್ಕರೆ ಕಾಯಿಲೆ ಮುಂತಾದ ದೊಡ್ಡವರಿಗೆ ಬರುವ ಕಾಯಿಲೆಯೆಲ್ಲ ಬರುತ್ತದೆ ಎನ್ನುವುದು ಅವರಿಗೆ ಅರ್ಥ ಆಗುವುದಿಲ್ಲ. ಈಗೆಲ್ಲಾ 25 ವರ್ಷಕ್ಕೇ ಬಿಪಿ ಮಾತ್ರೆ ತೆಗೆದುಕೊಳ್ಳುತ್ತಾರೆ. 30–35 ವರ್ಷದವರಿಗೆ ಹಾರ್ಟ್ ಅಟಾಕ್ ಆಗುವುದನ್ನು ನೋಡ್ತಾ ಇದ್ದೇವೆ. ಇದಕ್ಕೆಲ್ಲ ಕಾರಣ ಸಣ್ಣ ಮಗುವಿನಲ್ಲಿ ಅವರಿಗೆ ಕೊಟ್ಟು ಬೆಳೆಸಿದ ಆಹಾರ. ಮುಂದೆ ಏನಾಗುತ್ತೋ ಆಮೇಲೆ ನೋಡಿಕೊಳ್ಳೋಣ, ಈಗ ಮಗು ಗುಂಡು ಗುಂಡಾಗಿರಬೇಕು ಅನ್ನುವ ಆಸೆ. ನಾವೇ ನಮ್ಮ ಕೈಯಾರೆ ಮಕ್ಕಳಿಗೆ ಕಾಯಿಲೆ ತಂದುಕೊಡುತ್ತಿರುತ್ತೇವೆ ಅನ್ನುವುದನ್ನು ಅವರು ಅರ್ಥ ಮಾಡಿಕೊಳ್ಳುವುದಿಲ್ಲ.

### ಗರ್ಭದಿಂದಲೆ ಪ್ರಾರಂಭ

ಮಕ್ಕಳ ಆಹಾರ ಅನ್ನುವುದು ಗರ್ಭದಿಂದಲೇ ಪ್ರಾರಂಭವಾಗುತ್ತೆ. ಗರ್ಭಿಣಿಯರಿಗೆ ಬೇಳೆ, ತರಕಾರಿ, ಹಾಲು ಎಲ್ಲ ಇರುವಂಥ ಒಳ್ಳೆ ಆಹಾರ ಕೊಡಬೇಕು ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ಮಗು ಹುಟ್ಟಿದ ಕೂಡಲೇ ಬಾಣಂತಿಗೆ ಪಥ್ಯ ಪ್ರಾರಂಭವಾಗುತ್ತದೆ. ಅವಳಿಗೆ ಬ್ರೆಡ್ಡು ಕಾಫಿ ಸಾಕು. ಅವಳಿಗೆ ಬೇಳೆ ಕೊಟ್ಟರೆ ಗ್ಯಾಸಾಗುತ್ತೆ, ಹಣ್ಣು ಕೊಟ್ಟರೆ ನೆಗಡಿಯಾಗುತ್ತೆ, ತರಕಾರಿ ಕೊಟ್ಟರೆ ನಂಜಾಗುತ್ತೆ, ಕೊಡೋದು ಬೇಡ ಎನ್ನುತ್ತಾರೆ. ಹಾಗಾದರೆ ಮಗುವಿಗೆ ಹಾಲು ಎಲ್ಲಿಂದ ಬರಬೇಕು? ಅದರ ಬಗ್ಗೆ ಯೋಚನೆಯಿಲ್ಲ. ಏಕೆಂದರೆ ಮಗುವಿಗೆ ತಾಯಿ ಹಾಲೇ ಆಗಬೇಕು ಅನ್ನುವುದು ಇಲ್ಲ ಇವರಿಗೆ. ಪ್ಯಾಕೆಟ್ ಹಾಲು, ಪೌಡರ್ ಹಾಲು, ಬಾಟಲ್ ಹಾಲು, ಅದಿಲ್ಲದಿದ್ದರೆ ಹಸುವಿನ ಹಾಲು ಯಾವುದಾದರೂ ನಡೆಯುತ್ತೆ. ನಿಜ ಏನೆಂದರೆ, ಮೊದಲ 6 ತಿಂಗಳು ಮಗುವಿಗೆ ತಾಯಿ ಹಾಲು ಮಾತ್ರ ಬೇಕು. ಅದಕ್ಕಿಂತ ಹೆಚ್ಚಿಗೆ ಏನೂ ಬೇಡ. ಅದರಲ್ಲೇ ಎಲ್ಲಾ ಸತ್ವ ಇರುತ್ತದೆ.

ಆರು ತಿಂಗಳಾದ ಮೇಲೆ ಸ್ವಲ್ಪ ಗಟ್ಟಿ ಆಹಾರ ಶುರು ಮಾಡಬೇಕು, ರಾಗಿ ಸರಿ(ಗಂಜಿ) ಶುರು ಮಾಡಿ ಎಂದು ನಾವು ಹೇಳುತ್ತೇವೆ. ಬೆಂಗಳೂರಿನಲ್ಲಿ ತುಂಬಾ ಜನ ಹೆಂಗಸರಿಗೆ ರಾಗಿ ಸರಿ ಅಂದರೆ ಏನು, ಅದನ್ನು ಹೇಗೆ ಮಾಡಬೇಕು ಎಂದು ಗೊತ್ತಿಲ್ಲ. ನಾವು ಅವರಿಗೆ ರಾಗಿಯನ್ನು ನೆನೆಸಬೇಕು, ಮೊಳಕೆ ಬರಿಸಬೇಕು, ಬಿಸಿಲಲ್ಲಿ ಒಣಗಿಸಬೇಕು, ಪುಡಿ ಮಾಡಿಸಬೇಕು ಅಂತೆಲ್ಲಾ ವಿವರಿಸುತ್ತೇವೆ. ಎಲ್ಲಾ ಕೇಳಿ ಕೊನೆಗೆ, ಅದೆಲ್ಲ ಕಷ್ಟ ಏಕೆ ಬೇಕು ಎಂದು ಡಬ್ಬದಲ್ಲಿ ಸೆರೆಲಾಕ್, ಫೆರೆಕ್ಸ್, ನೆಸ್ಟಂ ಎಲ್ಲಾ ಸಿಗುತ್ತಲ್ಲ, ತಂದು ತಿನ್ನಿಸುತ್ತಾರೆ. ಮನೆಲಿರುವ ಹೆಂಗಸರಿಗೂ, ಹೊರಗಡೆ ಕೆಲಸ ಮಾಡುವವರಿಗೂ ಪುಡಿಗೆ ಹಾಲು ಸೇರಿಸಿ ಮಕ್ಕಳಿಗೆ ಕೊಡುವುದು ಸುಲಭ. ಮಕ್ಕಳು ಜಾಸ್ತಿ ತೂಕ ಬೆಳೆಯುತ್ತಾರೆ ಅಂದರೆ ಅವರಿಗೆ ಖುಷಿ. ಅದರಲ್ಲಿರುವ ರಾಸಾಯನಿಕ ಪದಾರ್ಥದಿಂದ ಮಕ್ಕಳ ತೂಕ ಹೆಚ್ಚಾಗುತ್ತಿದೆಯೇ ಹೊರತು ಸತ್ವದಿಂದಲ್ಲ ಎನ್ನುವುದು ಅರ್ಥ ಆಗುವುದಿಲ್ಲ. ತಾಜಾ ಆಗಿ ಮನೆಯಲ್ಲಿ ಮಾಡಿದ್ದರಲ್ಲಿ ಸತ್ವ ಇರುತ್ತದೆಯೇ ಹೊರತು ರಾಸಾಯನಿಕ ಪದಾರ್ಥ ಬೆರೆಸಿದ ಪುಡಿಯಲ್ಲಿ ಅಲ್ಲ ಎನ್ನುವುದು ಅವರ ತಲೆಗೆ ಹೋಗುವುದಿಲ್ಲ. ಅದನ್ನು ಕೊಡುವುದರಿಂದ ನಾವೇ ನಮ್ಮ ಮಕ್ಕಳಿಗೆ ಬಾಯಲ್ಲಿ ವಿಷ ಹಾಕಿದ ಹಾಗೆ ಆಗುತ್ತೆ.

ಒಂದು ವರ್ಷ ಆಗುವ ವೇಳೆಗೆ ನೀವು ಮನೆಯಲ್ಲಿ ತಿನ್ನುವುದನ್ನೇ ಮಕ್ಕಳಿಗೆ ಅಭ್ಯಾಸ ಮಾಡಿಸಿ ಎಂದು ಹೇಳುತ್ತೇವೆ. ಬೆಳಿಗ್ಗೆ ತಿಂಡಿಗೆ ಇಡ್ಲಿ, ದೋಸೆ, ಉಪ್ಪಿಟ್ಟು, ಮಧ್ಯಾಹ್ನ ಊಟಕ್ಕೆ ಮುದ್ದೆ, ರೊಟ್ಟಿ, ಅನ್ನ ಮಾಡಿದ್ದರೆ ಅದನ್ನೇ ಸ್ವಲ್ಪ ಮಕ್ಕಳಿಗೆ ಕೊಡಿ ಎನ್ನುತ್ತೇವೆ. ಆದರೆ ಅವರಿಗೆ ಅದಾಗುವುದಿಲ್ಲ. ಎಲ್ಲದಕ್ಕೂ ಡಬ್ಬದ ಊಟ ಬೇಕು ಮಕ್ಕಳಿಗೆ. ಮನೆಯಲ್ಲಿ ತಿನ್ನುವುದನ್ನು ಎರಡು ವರ್ಷವಾದರೂ ಮಕ್ಕಳಿಗೆ ಅಭ್ಯಾಸ ಮಾಡಿಸುವುದೇ ಇಲ್ಲ. ಎರಡು ವರ್ಷದವರೆಗೆ ರಾಗಿ ಮುಟ್ಟೆ ಇಲ್ಲದ ಮಗು ಮುದ್ದೆ ಕೊಟ್ಟರೆ ಯಾಕೆ ತಿನ್ನುತ್ತೆ? ಎಳೆಯದಿದ್ದಾಗ ತರಕಾರಿ ಅಭ್ಯಾಸ ಮಾಡಿಲ್ಲ, ಹಣ್ಣು ಅಭ್ಯಾಸ ಮಾಡಿಲ್ಲ ಎಂದರೆ ಮುಂದೆ ಹೇಗೆ ತಿನ್ನುತ್ತೆ?

### ಟಿವಿಯಲ್ಲಿ ಬರುವುದೇ ಬೇಕು

ಈಗಿನ ಮಕ್ಕಳನ್ನ ಎಲ್ಲರೂ ಟಿವಿ ಮುಂದೆ ಕೂರಿಸುತ್ತಾರೆ. ಹಳ್ಳಿಯಲ್ಲಾಗಲಿ, ಸಿಟಿಯಲ್ಲಾಗಲಿ ಎಲ್ಲರ ಮನೆಯಲ್ಲೂ ಟಿವಿ ಇರುತ್ತದೆ. ಅದರ ಮುಂದೆ ಕೂರಿಸಿ ಬಿಟ್ಟರೆ ಸಾಕು. ಹಾಡು, ಕಥೆ ಒಂದೂ ಹೇಳಬೇಕಾದ ಕಷ್ಟ ಇಲ್ಲ. ಸುಲಭದ ಕೆಲಸ. ಟಿವಿಯಲ್ಲಿ ಮಕ್ಕಳು ಏನು ನೋಡುತ್ತಾರೆ? ಮ್ಯಾಗಿ ನ್ಯೂಡಲ್ಸ್, ಕುರ್ಕುರೆ, ಚಿಪ್ಸ್, ಕೊಕಾಕೊಲ ಇಂಥ ಜಾಹಿರಾತುಗಳನ್ನ. ಇದೇ ಬೇಕು ಅವರಿಗೆ ತಿನ್ನಲು. ತರಕಾರಿ, ಬೇಳೆ ಬೇಡ, ಹಣ್ಣು ಬೇಡ.

ಶಾಲೆಯಲ್ಲಿ ಒಂದು ಮಗು ಪ್ಯಾಕೆಟ್ಟಲ್ಲಿ ಚಿಪ್ಸ್ ತರ್ತಾನೆ. ಉಳಿದ ಅಷ್ಟು ಜನ ಹುಡುಗರಿಗರೂ ಅದೇ ಬೇಕು. ಮನೆಯಲ್ಲಿ ಅಪ್ಪ –ಅಮ್ಮ ಹತ್ತಿರ ಹಠ ಮಾಡುತ್ತಾರೆ. 'ಅವರ ಮನೇಲಿ ತೆಗೆಸಿಕೊಡ್ತಾರೆ, ನೀನು ಯಾಕೆ ತೆಗೆಸಿ ಕೊಡಲ್ಲ? ನಿನಗೆ ನನ್ನ ಮೇಲೆ ಪ್ರೀತಿ ಇಲ್ಲ'. ಅಜ್ಜ ಅಜ್ಜಿಗಂತೂ ಮಗುವಿನ ಕೈಗೆ ಏನೋ ಒಂದು ಚಾಕಲೇಟೊ, ಚಿಪ್ಸೋ ಹಾಕಿದರೇನೇ ಅದರ ಮೇಲೆ ಪ್ರೀತಿ ಇರೋದು ಅಂದು ಅರ್ಥ. ಹೀಗೆ ನಾವೇ ನಮ್ಮ ಮಕ್ಕಳ ಕೈಗೆ ವಿಷ ಹಾಕುತ್ತಾ ಇರುತ್ತೇವೆ.



ಬೆಂಗಳೂರಲ್ಲಿ ಸ್ಕೂಲಿಗೆ ಹೋಗುವ ಮಕ್ಕಳಿಗೆ ಡಬ್ಬದಲ್ಲಿ ಚಪಾತಿ ಹಾಕಿದರೆ ಅದರ ಜೊತೆ ತುಪ್ಪ, ಸಕ್ಕರೆ ಇಲ್ಲದಿದ್ದರೆ ಜಾಮ್, ಸಾಸ್ ಹಾಕಿ ಕಳಿಸುತ್ತಾರೆ. ಬೇಳೆ, ತರಕಾರಿ ಹೆಸರೇ ಇಲ್ಲ. ಬೆಳಿಗ್ಗೆ ಎದ್ದು ಹಾಲು ಕೊಟ್ಟರೆ ಕೊಡುತ್ತಾರೆ, ಇಲ್ಲದಿದ್ದರೆ ಡಬ್ಬದಲ್ಲಿ ಬರುವ ಕಾರ್ನ್ ಫ್ಲೇಕ್ಸ್‌ಗೆ ಹಾಲು ಹಾಕಿ ಕೊಡುತ್ತಾರೆ. ಈಗ ಯಾರೂ ಬೆಳಿಗ್ಗೆ ಎದ್ದು ಇಡ್ಲಿ, ದೋಸೆ, ಉಪ್ಪಿಟ್ಟು ಮಾಡಲು ಹೋಗುವುದಿಲ್ಲ. ಇನ್ನು ಈ ಮಕ್ಕಳಿಗೆ ಕಾಯಿಲೆ ಬರದೆ ಮತ್ತೇನಾಗುತ್ತೆ? ಮಕ್ಕಳು ಸಣ್ಣವರಿದ್ದಾಗ ಅಭ್ಯಾಸ ಮಾಡಿಸಿದರೆ ಬೆಳೆಯುವಾಗ ಆ ಅಭ್ಯಾಸವನ್ನು ಮುಂದುವರೆಸುತ್ತಾರೆ. ಈಗ ಮಗುವಿಗೆ ತರಕಾರಿ ತಿನ್ನಿಸದೆ ಮೂರು ವರ್ಷ ಆದಮೇಲೆ ತಿನ್ನು ಅಂದರೆ ಹೇಗೆ ತಿನ್ನುತ್ತೆ ಪಾಪ!

ಈ ಪ್ಯಾಕೆಟ್ ತಿಂಡಿಗಳು, ಮ್ಯಾಗಿ ನ್ಯೂಡಲ್ಸ್ ಎರಡು ನಿಮಿಷದಲ್ಲಿ ಸುಲಭವಾಗಿ ಮಾಡಿ ಕೊಡುತ್ತಾರೆ. ಬೇರೆ ತಿಂಡಿ ಮಾಡುವ ಅವಶ್ಯಕತೆನೆ ಇಲ್ಲ. ಅದರಲ್ಲಿ ಇರೋದು ಏನು ಸತ್ವ? ಮೈದಾ ಹಿಟ್ಟು, ಮಸಾಲೆ ಮತ್ತು ತುಂಬಾ ರಾಸಾಯನಿಕ ಪದಾರ್ಥಗಳು. ಯಾವ ಜೀವಸತ್ವವೂ ಇಲ್ಲ, ಖನಿಜಗಳು ಯಾವುದೂ ಸುದ್ದಿ ಇಲ್ಲ ಅದರಲ್ಲಿ. ಆದರೆ ಮಕ್ಕಳು ಇದನ್ನೇ ತಿನ್ನುವುದು.

**ರಾಗಿಯಲ್ಲಿ ಇರುವಷ್ಟು ಕ್ಯಾಲ್ಷಿಯಂ ನಿಮಗೆ ಹಾಲಿನಲ್ಲೂ ಸಿಗುವುದಿಲ್ಲ. ಬೆಲ್ಲದಲ್ಲಿ ಇರುವ ಕಬ್ಬಿಣಾಂಶ ನಿಮಗೆ ಯಾವ ಐರನ್ ಟಾನಿಕ್ಕಲ್ಲೂ ಸಿಗುವುದಿಲ್ಲ.**

ಮಕ್ಕಳು ಹಾಗಿರಲಿ, ದೊಡ್ಡವರು ತಿನ್ನುವ ಪದಾರ್ಥಗಳು – ಪಾಲಿಷ್ ಮಾಡಿ ಬಿಳಿ ಅಕ್ಕಿ, ಗೋದಿ ಹಿಟ್ಟಿನ ಬದಲು ಮೈದಾ ತಿನ್ನುತ್ತೇವೆ. ಎಲ್ಲಾ ಸತ್ವ ತೆಗೆದ ಮೇಲೆ ಅದರಲ್ಲಿ ಏನು ಉಳಿದಿರುತ್ತೆ? ಅದರ ಬದಲು ರಾಗಿ ತಿಂದರೆ, ಸಕ್ಕರೆ ಬದಲು ಬೆಲ್ಲ ತಿಂದರೆ ಯಾವ ಮಗುಗೂ ಕ್ಯಾಲ್ಷಿಯಂ ಟಾನಿಕ್, ಐರನ್ ಟಾನಿಕ್ ಕೊಡುವುದೇ ಬೇಡ. ರಾಗಿಯಲ್ಲಿ ಇರುವಷ್ಟು ಕ್ಯಾಲ್ಷಿಯಂ ನಿಮಗೆ ಹಾಲಿನಲ್ಲೂ ಸಿಗುವುದಿಲ್ಲ. ಬೆಲ್ಲದಲ್ಲಿ ಇರುವ ಕಬ್ಬಿಣಾಂಶ ನಿಮಗೆ ಯಾವ ಐರನ್ ಟಾನಿಕ್ಕಲ್ಲೂ ಸಿಗುವುದಿಲ್ಲ. ಸೊಪ್ಪು ತಿಂದರೆ ಅದರಲ್ಲಿ ಎಷ್ಟೊಂದು ಕಬ್ಬಿಣಾಂಶ ಸಿಗುತ್ತೆ! ಯಾಕೆ ಬೇಕು ಟಾನಿಕ್ಕು, ಮಾತ್ರೆ ಮಕ್ಕಳಿಗೆ?

ಇದನ್ನ ನಾವು ವೈದ್ಯರಾಗಿ ತಂದೆ ತಾಯಿಗಳಿಗೆ ಹೇಳಬೇಕು. ಮಕ್ಕಳಿಗೆ ಶಿಕ್ಷಕರು ಸ್ಕೂಲಿನಲ್ಲಿ ಇದನ್ನೆಲ್ಲ ಹೇಳಿ ಕೊಡಬೇಕು. ಒಳ್ಳೆ ಆಹಾರ ಎಂದರೆ ಏನು ಅನ್ನುವುದರ ಅರಿವು ಮಕ್ಕಳಿಗೂ, ದೊಡ್ಡವರಿಗೂ ಬೇಕು.

ಇನ್ನೊಂದು ಫ್ಯಾಷನ್ ಇದೆ ಬೆಂಗಳೂರಿನಲ್ಲಿ. ನಮ್ಮಲ್ಲಿ ಬೆಳೆಯುವ ತರಕಾರಿ, ಸೊಪ್ಪು ಕೊಳ್ಳುವ ಬದಲು ದೊಡ್ಡ ಅಂಗಡಿಗೆ ಹೋಗಿ ಫಾರಿನ್ ತರಕಾರಿ ತಗೊಂತಾರೆ. ಬ್ರಾಥನಿ, ಸುಕಿನಿ, ಬ್ರೊಕೊಲ ಅಂತ ತಲೆ ಬುಡ ಕಟ್ ಮಾಡಿ ಪ್ಲಾಸ್ಟಿಕ್ ಕವರಲ್ಲಿ ಹಾಕಿ ಕೆಜಿಗಟ್ಟಲೆ ಮಾರುತ್ತಾರೆ. ಮಾರ್ಕೆಟ್ಟಲ್ಲಿ ಸಿಗುವ ಒಂದು ಕೆಜಿ ತರಕಾರಿ ಬೆಲೆಗೆ ಅಲ್ಲಿ ಅಂಗಡಿಯಲ್ಲಿ 300 ಗ್ರಾಂ ಸಿಗುತ್ತದೆ. ಈ 300 ಗ್ರಾಂ ತರಕಾರಿ 6 ಜನರ ಕುಟುಂಬಕ್ಕೆ ಎಷ್ಟು ಸಾಕಾಗುತ್ತೆ? ಎಷ್ಟು ಸತ್ವ ಸಿಗುತ್ತದೆ? ಈ ಥರ ಫ್ಯಾಷನ್‌ಗಾಗಿ ತಿನ್ನುವ ಬದಲು ನಮ್ಮ ಪ್ರದೇಶದಲ್ಲಿ ಬೆಳೆಸಿರುವ ದವಸ ಧಾನ್ಯ, ತರಕಾರಿ ತಿಂದರೆ ಅಷ್ಟೇ ದುಡ್ಡಿನಲ್ಲಿ ಜಾಸ್ತಿ ಪದಾರ್ಥನೂ ಸಿಗುತ್ತೆ, ಜಾಸ್ತಿ ಪೌಷ್ಟಿಕವಾಗೂ ಇರುತ್ತದೆ. ವಿಷ ಸಿಂಪಡಣೆ ಮಾಡಿದ ಹಳೆ ತರಕಾರಿ 100 ಗ್ರಾಂ ಕೊಂಡು ಅತಿಶಯ ಅನ್ನುವಂತೆ ತಿನ್ನುವ ಅಗತ್ಯ ಇಲ್ಲ.

ಇದನ್ನ ಪದೇ ಪದೇ ಹೇಳಿದರೆನೆ ಜನರಿಗೆ ಅರ್ಥ ಆಗುವುದು. ಇದರ ಅಪಾಯದ ಬಗ್ಗೆ ನಾವು ಜನರಲ್ಲಿ ಜಾಗೃತಿ ಮೂಡಿಸಲೇ ಬೇಕು. 60 ಮೀರಿದವರಿಗೆ ಬರುವ ಕಾಯಿಲೆ 15 ವರ್ಷದ ಮಕ್ಕಳಿಗೆ ಬರುವುದನ್ನು ನೋಡುತ್ತಿದ್ದೇವೆ. ಬಿಪಿ ಕಾಯಿಲೆ, ಸಕ್ಕರೆ ಕಾಯಿಲೆಗಳು ಅಂದರೆ ತಮಾಷೆ ಅಲ್ಲ. 30 ವರ್ಷಕ್ಕೆ ಹಾರ್ಟ್ ಅಟ್ಯಾಕ್ ಆಗುವುದಂತೂ ತಮಾಷೆಯೇ ಅಲ್ಲ. ಇದೆಲ್ಲ ನೋಡಿಕೊಂಡು ನಾವು ಇನ್ನೂ ಸುಮ್ಮನಿರಬೇಕೇ?

**ವಿಳಾಸ: ಅರುಣ ಕ್ಲಿನಿಕ್, 30, 3ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ವಯ್ಯಾಲಿಕಾವಲ್, ಬೆಂಗಳೂರು– 560003, ಫೋನ್: 99713 33414, 080–23365841**

# ಜೋಳದ ರೊಟ್ಟಿ ಹೆಮ್ಮೆಯೋ, ಅವಮಾನವೋ?

● ಡಾ। ಸಾಲೋಮ್ ಏಸುದಾಸ್

ನಾನು ಮೂರು (ಮುಖ್ಯ) ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಕ್ಕೆ ಇಷ್ಟ ಪಡುತ್ತೇನೆ. ನಾವೆಲ್ಲ ರೈತರು. ನಮ್ಮ ಪರಂಪರೆಯಿಂದ ಬಂದ ಬೆಳೆಗಳನ್ನು ನಾವು ಬೆಳೆಯುತ್ತಿದ್ದೇವೆ. ಎಲ್ಲೋ ಮಧ್ಯದಲ್ಲಿ ಸ್ವಲ್ಪ ಬದಲಾವಣೆ ಮಾಡಿರಬಹುದು. ಆದರೆ ಬೆಳೆಯುವುದನ್ನು ಮಾತ್ರ ಬಿಟ್ಟಿಲ್ಲ.

ಭಾರತೀಯ ಕೃಷಿ ಪದ್ಧತಿ ಅತ್ಯುತ್ತಮವಾದದ್ದು. ಏಕೆಂದರೆ ನಮ್ಮ ದೇಹಕ್ಕೆ ಏನೆಲ್ಲ ಸತ್ವಗಳು ಬೇಕೋ ಅದೆಲ್ಲವನ್ನೂ ಒಂದೇ ಸಮಯದಲ್ಲಿ ಒಂದೇ ಜಾಗದಲ್ಲಿ ಉತ್ಪತ್ತಿ ಮಾಡುವ ಅಸಾಧಾರಣ ಸಾಮರ್ಥ್ಯದ ಕೃಷಿ ನಮ್ಮ ಕೃಷಿ. ಉದಾಹರಣೆಗೆ, ನಮ್ಮ ಮುಂಗಾರು ಜೂನ್‌ನಿಂದ ಅಕ್ಟೋಬರ್‌ವರೆಗೆ ಎಂದಿಟ್ಟುಕೊಂಡರೆ, ಒಂದೇ ಹಂಗಾಮಿನಲ್ಲಿ ಒಂದೇ ಹೊಲದಲ್ಲಿ ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳನ್ನು ನಾವು ಬೆಳೆಯುತ್ತೇವೆ. ಒಂದಾದ ನಂತರ ಒಂದು ಬೆಳೆಗಳನ್ನ ಇಡೀ ವರ್ಷದಲ್ಲಿ ಕಟಾವು ಮಾಡ್ತಾ ಹೋಗುತ್ತೇವೆ. ಮುಂಗಾರಿನ ನಂತರ ಹಿಂಗಾರಿನಲ್ಲಿ ಈ ಚಕ್ರ ಮುಂದುವರೆಯುತ್ತದೆ.

**ನಾನು ಮಾಡುವ ರೊಟ್ಟಿಯ ಜೋಳವನ್ನು ನಮ್ಮ ತಾತ ಮುತ್ತಾತಂದಿರು ದುಡಿದ ಸ್ವಂತ ಜಮೀನಿನಲ್ಲಿ ಬೆಳೆದದ್ದು**



ನಮ್ಮ ಹೊಲಗಳು ಜೀವಂತ ಹೊಲಗಳು. ನಾವು ನಮ್ಮ ಜಮೀನಿನಲ್ಲಿ ಎಲ್ಲರನ್ನು ಬದುಕಲು ಬಿಡುತ್ತೇವೆ. ಅಲ್ಲಿ ಪ್ರಾಣಿ ಪಕ್ಷಿಗಳು, ಹುಳ ಹುಪ್ಪಟೆಗಳು ಇವೆ. ನಾವು ಮನುಷ್ಯರು ಕೂಡ ಈ ಜೀವಂತ ಹೊಲಗಳನ್ನು ಆಧರಿಸಿ ಬದುಕುತ್ತಿದ್ದೇವೆ. ಒಂದು ಹಂಗಾಮಿನ ಬೆಳೆ ಹಾಕಿದರೆ ಅದು ನಮಗೆ ಆಹಾರ ಕೊಡುತ್ತೆ, ಮೇವನ್ನು ಕೊಡುತ್ತೆ, ಫಲವತ್ತತೆ ಕೊಡುತ್ತೆ. ಪ್ರತಿಯೊಂದನ್ನೂ ಒದಗಿಸುತ್ತದೆ.

ನಮ್ಮ ಕೃಷಿಯ ಇನ್ನೊಂದು ಅದ್ಭುತ ಎಂದರೆ ಮಿಶ್ರ ಬೆಳೆಗಳ ಜೊತೆ ಬರುವ ಕಳೆಗಳು. ಒಂದು ಹಂಗಾಮಿನ ಬೆಳೆಯ ಜೊತೆ ನೂರಾರು ಥರದ ಕಳೆಗಳು ಬರುತ್ತವೆ. ಕಿತ್ತ ಕಳೆಗಳಲ್ಲಿ ಸುಮಾರನ್ನು ಬೆರಕೆ ಸೊಪ್ಪಿನ ರೂಪದಲ್ಲಿ ಅಡುಗೆಗೆ ಬಳಸುತ್ತೇವೆ. ರಾಸಾಯನಿಕ ಕೃಷಿ ಮತ್ತು ಕೀಟನಾಶಕಗಳು ಬರುವ ಮುನ್ನ ಈ ಕಳೆಗಳು ನಮಗೆ ಆಹಾರಕ್ಕೆ, ಜಾನುವಾರುಗಳ ಮೇವಿಗೆ, ನಮ್ಮ ಮತ್ತು ಜಾನುವಾರಿನ ಔಷಧಿಗೆ ಬರುತ್ತಿದ್ದವು. ಮಣ್ಣಿಗೆ ಪೋಷಕಾಂಶ ಒದಗಿಸುತ್ತಿದ್ದವು. ಹೀಗಾಗಿ ನಮ್ಮ ಕೃಷಿ ಜೀವಂತವಾದ ಕೃಷಿ ಆಗಿತ್ತೇ ವಿನಃ ಅದು ಸತ್ವ ಹೀನ ಕೃಷಿಯಾಗಿರಲಿಲ್ಲ, ಕೊಲ್ಲುವ ಕೃಷಿಯಾಗಿರಲಿಲ್ಲ. ಈಗ ಕೃಷಿಯಲ್ಲಿ ಬಳಸುವ ವಿಷಗಳನ್ನು ನೋಡಿದರೆ ಪೆಸ್ಟಿಸೈಡ್, ಫಂಜಿಸೈಡ್, ಹರ್ಬಿಸೈಡ್, ವೀಡಿಸೈಡ್ ...ಹೀಗೆ ಪಟ್ಟಿ ಹನುಮಂತನ ಬಾಲದಂತೆ ಹೋಗಿ ಕೊನೆಗೆ ರೈತರ ಸೂಸೈಡ್‌ನಲ್ಲಿ ಕೊನೆಯಾಗುತ್ತದೆ.

ಆದರೆ ನಮ್ಮ ಕೃಷಿಯಲ್ಲಿ ನಾವು ಯಾವ ಜೀವಿಯನ್ನೂ ಕೊಲ್ಲುವುದಿಲ್ಲ. ಅವುಗಳನ್ನು ಕೊಲ್ಲದೆ ಬೇರೆ ಯಾವುದರ ಮೇಲಾದರೂ ಬೆಳೆಯಲು ಬಿಡುತ್ತೇವೆ. ಇಲ್ಲಿ ನೆರೆದಿರುವ ನೀವುಗಳೆಲ್ಲಾ ಸಾವಯವ, ಸುಸ್ಥಿರ ಕೃಷಿ ಮಾಡುತ್ತಿರುವವರು. ತಾವು ಸಾವಯವ ಕೃಷಿಯ ಇಂಥ ಅದ್ಭುತ ಸಂದೇಶವನ್ನು ನಿಮ್ಮ ಸುತ್ತಮುತ್ತಲ ಎಲ್ಲ ರೈತರಿಗೂ ತಲುಪುವಂತೆ ಮಾಡಬೇಕು ಎಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

## ನಮ್ಮ ಹಣ್ಣು ಕೀಳೆ?

ಎರಡನೆಯದಾಗಿ, ಹಣ್ಣುಗಳ ಬಗ್ಗೆ ಹೇಳಲು ಇಷ್ಟ ಪಡುತ್ತೇನೆ. ನಾನು ಶಾಲೆ ಕಾಲೇಜುಗಳಿಗೆ ಮಕ್ಕಳೊಂದಿಗೆ ಆಹಾರದ ವಿಚಾರದ ಬಗ್ಗೆ ಮಾತುಕತೆ ಮಾಡಲು ಹೋದಾಗ ಮಕ್ಕಳಿಗೆ ಅವರಿಗೆ ಗೊತ್ತಿರುವ ಹಣ್ಣುಗಳ ಹೆಸರು ಹೇಳಲು ಕೇಳುತ್ತೇನೆ. ಪಟ್ಟಣದ ಶಾಲೆಗಳ ಯಾವುದೇ ಮಕ್ಕಳನ್ನು ಕೇಳಿದರೂ ಲೋಕ್ವ, ಲಿಚ್ಚಿ, ಆಪಲ್, ಬೆರ್‍ರಿ, ಚೆರ್‍ರಿ... ಇನ್ನೂ ಏನೇನೋ ಪಟ್ಟಿ ಮಾಡುತ್ತಾರೆ. ಪುಸ್ತಕಗಳಲ್ಲೂ ಇದನ್ನೇ ಓದುತ್ತಾರೆ. ನಮ್ಮ ಸ್ಥಳೀಯ ಹಣ್ಣುಗಳ– ಹಲಸು, ನೇರಳೆ, ಸೀಬೆ, ಸೀತಾಫಲ, ಪರಂಗಿ, ಅನಾನಸ್, ಮೂಸಂಬಿ ಯಾವುದನ್ನೂ ಅವರು ಹೇಳುವುದಿಲ್ಲ. ಗೊತ್ತಿದ್ದರೂ, ತಿಂದರೂ ಹೇಳುವುದಿಲ್ಲ. ಹೇಳಿದರೆ ಅವಮಾನ ಎಂದು ತಿಳಿದುಕೊಳ್ಳುತ್ತಾರೆ. ಏಕೆಂದರೆ ಇವುಗಳ ಮಹತ್ವವನ್ನು ಅವರಿಗೆ ಯಾರೂ ಹೇಳಿರುವುದಿಲ್ಲ. ನಮ್ಮ ನೆಲದ ಅಪಾರ ಜೀವ ವೈವಿಧ್ಯತೆಯ ಅಗಾಧ ಜ್ಞಾನವನ್ನು ನಮ್ಮ ಮಕ್ಕಳಿಗೆ ರವಾನಿಸುವುದು ತಂದೆ ತಾಯಿಗಳಾದ, ಹಿರಿಯರಾದ ನಮ್ಮ ಜವಾಬ್ದಾರಿಯಲ್ಲವೇ? ಇಲ್ಲದಿದ್ದರೆ ನಮ್ಮ ಹಣ್ಣುಗಳು, ತರಕಾರಿಗಳು ಸೊಪ್ಪುಗಳು ಎಲ್ಲಾ ಚರಿತ್ರೆಯಾಗಿ ಉಳಿಯುತ್ತವೆ, ಮ್ಯೂಸಿಯಂನಲ್ಲಿ ಸೇರಿಹೋಗುತ್ತವೆ.

ಈ ದುರಂತ ನೋಡಿ. ಮಕ್ಕಳು ಮಾವಿನ ಹಣ್ಣನ್ನು ಕಚ್ಚಿ ರಸ ಹೀರಿ ಖುಷಿಯಾಗಿ ತಿನ್ನುತ್ತಿದ್ದರೆ, ಕಬ್ಬನ್ನು ಜಗಿದು ಖುಷಿಯಿಂದ ರಸ ಹೀರುತ್ತಿದ್ದರೆ ತಾಯಂದಿರು, 'ಅಯ್ಯೋ ಬಟ್ಟೆಯೆಲ್ಲಾ ಗಲೀಜು ಮಾಡಿಕೊಳ್ಳಬೇಡ, ಏಸಿ ಅದನ್ನ, ಹಣ್ಣನ್ನ ನೀಟಾಗಿ ಕತ್ತರಿಸಿ ಸಣ್ಣ ಸಣ್ಣ ಹೋಳು ಮಾಡಿಕೊಂಡು ತಿನ್ನು, ಇಲ್ಲದಿದ್ದರೆ ತಿನ್ನಲೇ ಬೇಡ..' ಹೀಗೆಲ್ಲಾ ಅನ್ನುವುದನ್ನು ಕೇಳಿದ್ದೇನೆ. ಬಟ್ಟೆಗಳು ಮಕ್ಕಳ ಖುಷಿಗಿಂತ, ಆರೋಗ್ಯಕ್ಕಿಂತ ಹೆಚ್ಚೇ? ಇದೆಂಥ ಜೀವನಶೈಲಿಯನ್ನು ನಾವು ಅಳವಡಿಸಿಕೊಳ್ಳುತ್ತಿದ್ದೇವೆ?

## ಜೋಳದ ರೊಟ್ಟಿ ಅವಮಾನವೇ?

ನನ್ನ ಮಗಳಿಗೆ ಶಾಲೆಗೆ ಜೋಳದ ರೊಟ್ಟಿ ಬುತ್ತಿ ಕಟ್ಟಿಕೊಟ್ಟರೆ ಅವಳು ಅದನ್ನು ತೆಗೆದುಕೊಂಡು ಹೋಗಲು ನಿರಾಕರಿಸುತ್ತಿದ್ದಳು. ಬೇಡ ಎಂದು ಹಠ ಹಿಡಿಯುತ್ತಿದ್ದಳು. 'ಅಮ್ಮ, ನಾನು ಒಣ ಜೋಳದ ರೊಟ್ಟಿ ತರ್ತೀನಿ ಅಂತ ಎಲ್ಲ ನನ್ನನ್ನ ಹಾಸ್ಯ ಮಾಡ್ತಾರೆ, ನನಗೆ ಅವಮಾನ ಆಗುತ್ತೆ. ನನಗೆ ಜೋಳದ ರೊಟ್ಟಿ ಬೇಡ. ನನಗೆ ಜೋಳದ ರೊಟ್ಟಿ ಕಟ್ಟಿ ಕೊಡಬೇಡ' ಎಂದು ಅಳುತ್ತಿದ್ದಳು. ಆಗ ನಾನು ನನ್ನ ಮಗಳಿಗೆ ಹೇಳುತ್ತಿದ್ದೆ, 'ನಿನ್ನ ತರಗತಿಯಲ್ಲಿ ಬ್ರೆಡ್, ಜಾಮ್, ಬೆಣ್ಣೆ ತರುತ್ತಾರಲ್ಲ ನಿನ್ನ ಸ್ನೇಹಿತರು, ಅದನ್ನ ಯಾರು ಮಾಡಿಕೊಟ್ಟಿದ್ದು ಅಂತ ಅವರನ್ನ ಕೇಳು. ಮತ್ತೆ ಆ ಬ್ರೆಡ್ ಮತ್ತು ಜಾಮನ್ನ ಯಾವ ಯಾವ ಪದಾರ್ಥ ಹಾಕಿ ಮಾಡಿದ್ದಾರೆ ಅಂತ ಕೇಳು'.

ಆಗ ಅವಳು ಸಿಟ್ಟಾಗಿ, 'ಈ ಥರ ಮೂರ್ಖ ಪ್ರಶ್ನೆಗಳನ್ನ ಕೇಳು ಅಂತ ಯಾಕೆ ಹೇಳ್ತೀಯಾ ಅಮ್ಮ, ಅವರು ಅದನ್ನ ಅಂಗಡಿಯಿಂದ ತರುದು, ಅವರಿಗೆ ಏನು ಗೊತ್ತು ಅದನ್ನ ಯಾರು ಮಾಡಿದ್ದು ಅಂತ, ಅದಕ್ಕೆ ಏನು ಹಾಕಿ ಮಾಡಿದ್ದಾರೆ ಅಂತ?'.

ಆಗ ನಾನು ಅವಳಿಗೆ ಹೇಳಿಕೊಟ್ಟೆ, 'ಇನ್ನು ಮೇಲೆ ನೀನು ಅವರಿಗೆ ಹೇಳು, ನಾನು ತರುವ ರೊಟ್ಟಿಯ ಜೋಳವನ್ನು ನಮ್ಮ ತಾತ, ಮುತ್ತಾತಂದಿರು ದುಡಿದ ನಮ್ಮ ಸ್ವಂತ ಜಮೀನಿನಲ್ಲಿ ಬೆಳೆದದ್ದು. ಈ ಜೋಳದ ರೊಟ್ಟಿಯನ್ನ ನನ್ನ ಅಮ್ಮ ತನ್ನ ಕೈಯಿಂದ ನನಗಾಗಿ ಮಾಡಿಕೊಟ್ಟಿರುವುದು, ಇಂಥ ಜೋಳದ ರೊಟ್ಟಿ ತಿನ್ನುವ ನನಗೆ ಅವಮಾನವಾಗಬೇಕೋ, ಅಂಗಡಿಯಿಂದ ಕೊಂಡು ತಂದು ತಿನ್ನುವ ನಿಮಗೆ ಅವಮಾನವಾಗಬೇಕೋ ಅಂತ'.

ಬೇಕರಿ ಪದಾರ್ಥಗಳನ್ನು ಮಕ್ಕಳಿಗೆ ಎಗ್ಗಿಲ್ಲದೆ ತಿನ್ನಿಸುವ ಮೊದಲು ತಂದೆ ತಾಯಿಗಳು ಸ್ವಲ್ಪ ಕಣ್ಣು ತೆರೆಯಬೇಕಾಗಿದೆ. ಹೈದರಾಬಾದ್‌ನಲ್ಲಿ ನಾನು ಕಣ್ಣಾರೆ ಕಂಡಿದ್ದೇನೆ. ಸತ್ತ ಪ್ರಾಣಿಗಳನ್ನು ಸಂಗ್ರಹಿಸಿ ಗುಡ್ಡೆ ಹಾಕಿ ಅವುಗಳ ಕೊಬ್ಬನ್ನು ಹೊರತೆಗೆಯುತ್ತಾರೆ. ಈ ಕೊಬ್ಬನ್ನು ಡಾಲ್ಡ ಎಂದು ಬೇಕರಿಗಳಿಗೆ ಪೂರೈಕೆ ಮಾಡುತ್ತಾರೆ. ಬೇಕರಿ ಪದಾರ್ಥಗಳನ್ನು ಕೊಳ್ಳುವ ಮುನ್ನ, ಡಾಲ್ಡದಿಂದ ಕರಿದ ಯಾವುದೇ ಪದಾರ್ಥವನ್ನು ಕೊಳ್ಳುವ ಮುನ್ನ ಕೊಂಚ ನಿಲ್ಲಿ, ಯೋಚಿಸಿ.

ಮಕ್ಕಳಿಗೆ ಇಂಥ ಶಿಕ್ಷಣ ಕೊಡುವುದು ನಮ್ಮ ಜವಾಬ್ದಾರಿ. ಅವರನ್ನು ಈ ಭೂಮಿಗೆ ತಂದವರು ನಾವು. ನಮ್ಮ ಸಂಸ್ಕೃತಿಯನ್ನ ಕಾಪಾಡಬೇಕೆಂದರೆ ನಮ್ಮ ಕೃಷಿಯನ್ನ ಕಾಪಾಡಬೇಕು. ನಮ್ಮ ಕೃಷಿಯನ್ನು ಕಾಪಾಡಬೇಕೆಂದರೆ ನಮ್ಮ ಬಹು ಬೆಳೆ ಪದ್ಧತಿಗಳನ್ನ, ಬಹು ಆಹಾರ ಪದ್ಧತಿಗಳನ್ನ ನಾವು ಉಳಿಸಬೇಕು.

**ಲೇಖಕಿ ಆಹಾರ ತಜ್ಞೆ ಮತ್ತು ಸುರಕ್ಷಿತ ಆಹಾರ ಕಾರ್ಯಕರ್ತೆ, ಹೈದ್ರಾಬಾದ್**

● ಕೆ ಸಿ ರಘು

# ಆಹಾರ ಹಾಗೂ ಪೌಷ್ಟಿಕತೆಯಲ್ಲಿ ಬೀಜದ ಪಾತ್ರ

ಕೃಷಿ ಎನ್ನುವುದು ಅನ್ನ ಕೊಡುವ ಕಾಯಕ ಎಂದು ಹೇಳಲಾಗಿದೆ. ಆಹಾರ ಉತ್ಪಾದನೆಯ ಜೊತೆ ಜಾನುವಾರು ಸಾಕಣೆಯನ್ನೂ ತೂಗಿಸಿಕೊಂಡು ಬಂದಿರುವ ಹತ್ತು ಸಾವಿರ ವರ್ಷಗಳ ಕೃಷಿ ಪರಂಪರೆಯಲ್ಲಿ ಮನುಷ್ಯ ಮತ್ತು ಪ್ರಕೃತಿಯ ನಡುವೆ ಸುಂದರವಾದ ಸಹಬಾಳ್ವೆಯ ಸಂಬಂಧ ಬೆಳೆದುಬಂದಿದೆ. ವೈವಿಧ್ಯತೆ ಎನ್ನುವುದು ಎಲ್ಲಾ ಕಾಲದಲ್ಲೂ ನಮ್ಮ ಆಹಾರ ಪದ್ಧತಿಯ ತಳಹದಿಯಾಗಿರುವಂಥದ್ದು. ಹಸಿರು ಕ್ರಾಂತಿಯ ಮುಂಚಿನ ದಿನಗಳ ಮಿಶ್ರ ಬೆಳೆ ಪದ್ಧತಿಯಲ್ಲಿ ಮಣ್ಣಿಗೆ ಪೋಷಕಾಂಶ ಮತ್ತು ಮನುಷ್ಯರಿಗೆ ಪೌಷ್ಟಿಕ ಆಹಾರ ಒದಗಿಸುವ ಗುಣಗಳೆರಡೂ ಇದ್ದುವು. ಉದಾಹರಣೆಗೆ, ದ್ವಿದಳ ಧಾನ್ಯಗಳು, ಏಕದಳ ಧಾನ್ಯಗಳು ಮತ್ತು ಎಣ್ಣೆ ಕಾಳುಗಳ ಮಿಶ್ರ ಬೆಳೆ ಪದ್ಧತಿಯಲ್ಲಿ ಒಂದಕ್ಕೆ ಮತ್ತೊಂದು ಪೋಷಕಾಂಶಗಳ ಪೂರೈಕೆ ಮಾಡುತ್ತಿತ್ತು. ಹೀಗಾಗಿ ಇಲ್ಲಿ ಬೆಳೆದ ಆಹಾರ ಪದಾರ್ಥಗಳು ಪ್ರೊಟೀನು, ಶರ್ಕರಪಿಷ್ಟ(ಕಾರ್ಬೋಹೈಡ್ರೇಟು), ಕೊಬ್ಬು, ವಿಟಮಿನ್ನುಗಳು, ಖನಿಜಗಳೆಲ್ಲದರ ಸಮಾಗಮವಾಗಿರುತ್ತಿತ್ತು. ಎಲ್ಲವನ್ನೂ ಒಮ್ಮೆಗೇ ಒದಗಿಸುತ್ತಿತ್ತು.

ಆಹಾರ ಬೆಳೆಗಳು ಮತ್ತು ಜಾನುವಾರು ತಳಿ ವೈವಿಧ್ಯತೆಯ ನಾಶ ಆಧುನಿಕ ಕೃಷಿ ಉಂಟುಮಾಡಿದ ದೊಡ್ಡ ದುರಂತ. ಏಕೆಂದರೆ ಪರಿಸರ ವ್ಯವಸ್ಥೆ ಮತ್ತು ಆರೋಗ್ಯದ ಮೇಲೆ ಜೀವ ವೈವಿಧ್ಯತೆಯಿಂದ ಕಣ್ಣಿಗೆ ಕಾಣುವ ಅಥವಾ ಅಳತೆ ಮಾಡಲು ಸಾಧ್ಯವಾದ ಲಾಭ ಎಷ್ಟಿದೆಯೋ ಅಷ್ಟೇ ಕಣ್ಣಿಗೆ ಕಾಣದ ಅಥವಾ ಅಳೆಯಲು ಸಾಧ್ಯವಿಲ್ಲದ ಲಾಭಗಳಿವೆ. ಪ್ರತಿಯೊಂದು ಜಾತಿಯ ಬೆಳೆಯಲ್ಲೂ ನೂರಾರು ತಳಿಗಳಿರುವುದನ್ನು ಮತ್ತು ಪ್ರತಿಯೊಂದು

ತಳಿಗೂ ತನ್ನದೇ ಆದ ವಿಶಿಷ್ಟ ಮೌಲ್ಯ ಇರುವುದನ್ನು USFDA(ಅಮೆರಿಕದ ಆಹಾರ ಮತ್ತು ಕೃಷಿ ಇಲಾಖೆ) ಅಥವಾ ICMR(ಭಾರತೀಯ ವೈದ್ಯಕೀಯ ಅನುಸಂಧಾನ ಪರಿಷತ್ತು)ನಂಥ ಯಾವುದೇ ಆಧುನಿಕ ವ್ಯವಸ್ಥೆಗಳಿಗೆ ಹಿಡಿದಿಡಲು ಸಾಧ್ಯವಿಲ್ಲ. ಇದು ಆಧುನಿಕತೆಯ ನಿಜವಾದ ದೌರ್ಬಲ್ಯ. ಈ ಕಾರಣಕ್ಕಾಗಿಯೇ ಪೌಷ್ಟಿಕ ಆಹಾರದ ದೃಷ್ಟಿಯಿಂದಲಾದರೂ ವೈವಿಧ್ಯಮಯ ಬೆಳೆ ಬೆಳೆಯಬೇಕು, ತಿನ್ನಬೇಕು ಎನ್ನುವ ಕನಿಷ್ಟ ಪರಿಜ್ಞಾನವನ್ನು ಕಳೆದುಕೊಂಡು ಬೆರಳೆಣಿಕೆಯಷ್ಟು ಬೆಳೆಗಳಿಗೆ ಬಂದು ನಿಂತಿದ್ದೇವೆ. ಇದರಿಂದ ನಾವು ಪೌಷ್ಟಿಕ ಆಹಾರಗಳಿಂದ ವಂಚಿತರಾಗಿದ್ದೇವೆ. ಹಾಗೆಯೇ ನಮ್ಮ ಕೃಷಿ ಪರಿಸರ ವ್ಯವಸ್ಥೆಯ ಅವನತಿಗೆ ಕಾರಣರಾಗಿದ್ದೇವೆ. ಈ ಇಡೀ ವಿನಾಶಕಾರಿ ಚಕ್ರ ಪ್ರಾರಂಭವಾದದ್ದು ಬೀಜದಲ್ಲಿ ಮಾರ್ಪಾಡು ಮಾಡಿದಾಗ. ಮೊದಲು ಹೈಬ್ರಿಡ್ ಬೀಜಗಳು, ನಂತರ ಅಣು ವಿಕಿರಣ ಬಳಸಿ ಬಲವಂತದಿಂದ ಮಾರ್ಪಾಡು ಮಾಡಿದ ಬೀಜಗಳು, ಕೊನೆಯದಾಗಿ ಇವತ್ತಿನ ಕುಲಾಂತರಿ ಬೀಜಗಳು.

## ಇಳುವರಿಯ ದಾವಂತದಲ್ಲಿ ಆಹಾರ ಬಡವಾಯ್ತು

ಸಾಮಾನ್ಯ ವಿವೇಕದಿಂದ ಹೇಳುವುದಾದರೆ, ಕೇವಲ ಇಳುವರಿಯನ್ನು ಮಾತ್ರ ಗುರಿಯಾಗಿಸಿ ಹೊರಗಿನ ಒಳಸುರಿಯ ಮೇಲೆ ಅವಲಂಬನೆ ಹೊಂದಿದ ಬೀಜ/ಬೆಳೆಯು ಕೀಟ ಮತ್ತು ರೋಗಗಳಿಗೆ ಬಲುಬೇಗ ತುತ್ತಾಗುತ್ತದೆ. ಅದನ್ನು ಹೆಚ್ಚು ಕಾಲ ದಾಸ್ತಾನಿಡಲು ಬರುವುದಿಲ್ಲ. ಸರಳವಾಗಿ ಹೇಳಬೇಕೆಂದರೆ, ಈ ಬೀಜ ದುರ್ಬಲವಾಗಿದ್ದು ಸಹಿಷ್ಣು ಶಕ್ತಿ ಇರುವುದಿಲ್ಲ. ಆದ್ದರಿಂದ ಈ ದುರ್ಬಲ ಬೀಜದ ಬೆಳೆಗೆ ಸಿಂಪಡಣೆಗಳನ್ನು ಮಾಡಬೇಕಾಗುತ್ತದೆ. ಕೀಟನಾಶಕ ಹೊಡೆದು ಸಸ್ಯವನ್ನು ಕಾಪಾಡುವುದೆಂದರೆ, ಆ ಸಸ್ಯಕ್ಕೆ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳುವ ಗುಣ ಅನುವಂಶಿಕವಾಗಿ ಇಲ್ಲ ಎಂದಾಯಿತು. ಅಂಥ ಗುಣದ ವಂಶವಾಹಿ ಈ ಸಸ್ಯದಲ್ಲಿ ಕ್ರಿಯಾಶೀಲವಾಗಿಲ್ಲ ಎಂದಾಯಿತು. ಸಸ್ಯವು ತನ್ನನ್ನು ರಕ್ಷಿಸಿಕೊಳ್ಳುವ ಆಲ್ಕಲಾಯಿಡ್ಸ್ ಎನ್ನುವ ರಾಸಾಯನಿಕಗಳನ್ನು ಸ್ರವಿಸುತ್ತದೆ. ಮನುಷ್ಯರ ದೇಹದಲ್ಲಿ ರೋಗಾಣುಗಳ ವಿರುದ್ಧ ಆಂಟಿ ಬಾಡೀಸ್ ಹೇಗೆ ಕ್ರಿಯಾಶೀಲವಾಗುತ್ತದೋ ಹಾಗೆಯೇ ಇದೂ ಕೂಡ. ಅಂತಹ ಸಸ್ಯದಿಂದ ಉತ್ಪನ್ನವಾಗುವ ಆಹಾರದಲ್ಲಿ ಕೂಡ ಆಲ್ಕಲಾಯಿಡ್ಸ್ ಅಥವಾ ಇಮ್ಯುನೊ ಕೆಮಿಕಲ್ಸ್ ಸಹಜವಾಗಿಯೇ ಸಂಮೃದ್ಧವಾಗಿರುತ್ತವೆ. ಈ ಇಮ್ಯುನೊ ಕೆಮಿಕಲ್ಸ್ ಅನ್ನು ಈಗ ವಿಶಾಲಾರ್ಥದಲ್ಲಿ ಫೈಟೊ ಕೆಮಿಕಲ್ಸ್ ಎಂದು ಕರೆಯಲಾಗುತ್ತಿದೆ. ಫೈಟೊಕೆಮಿಕಲ್ಸ್ ಅಂದಾಗ ಅದರಲ್ಲಿ ಆಂಟಿ ಆಕ್ಸಿಡೆಂಟ್‌ಗಳು, ಇಂಡೋಲ್‌ಗಳು, ಆಂಥೋಸಯನಿನ್‌ಗಳು ಮತ್ತು ಪಾಲಿ ಫಿನೋಲ್‌ಗಳು ಎಲ್ಲಾ ಒಳಗೊಂಡಿರುತ್ತವೆ. ಶಕ್ತಿಶಾಲಿ ಆಂಟಿ ಆಕ್ಸಿಡೆಂಟ್‌ಗಳಾದ ವಿಟಮಿನ್ ಇ, ಸಿ ಮತ್ತು ಎ ಗಳು ಕೂಡ ಸೇರುತ್ತವೆ. ಇವೆಲ್ಲಾ ರೋಗ ತಡೆಯುವುದರಲ್ಲಿ ಮತ್ತು ದೇಹವನ್ನು ಆರೋಗ್ಯವಂತವಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಇತ್ತೀಚಿನವರೆಗೂ ಆಹಾರ ಮತ್ತು ಪೌಷ್ಟಿಕತೆಯ ವಿಜ್ಞಾನವು, ನಮ್ಮ ಸಾಂಪ್ರದಾಯಕ ಆಹಾರದಲ್ಲಿ ಆರೋಗ್ಯ ಕಾಪಾಡುವ ಸ್ವಾಭಾವಿಕ ರಾಸಾಯನಿಕಗಳ ನಿಧಿಯೇ ಇರುವ ಬಗ್ಗೆ ಗಮನ ಹರಿಸುವ ಗೋಜಿಗೆ ಹೋಗಿರಲಿಲ್ಲ.

## ಆಧುನಿಕ ಆಹಾರ ಮತು ಪೌಷ್ಟಿಕತೆ

ಇವತ್ತಿನ ಆಧುನಿಕ ಯುಗದ ಪೌಷ್ಟಿಕ ಆಹಾರದ ಸೂತ್ರ ಹೇಗಿದೆಯೆಂದರೆ, ನಮಗೆ 2000 ಕ್ಯಾಲೊರಿ ಬೇಕಿದ್ದಾಗ, ಅದನ್ನು ಕೇವಲ ಮೂರೇ ಮೂರು ಪೋಷಕಾಂಶಗಳಿಂದ ಒದಗಿಸುತ್ತಾರೆ. ಅವೆಂದರೆ, ಕಾರ್ಬೋಹೈಡ್ರೇಟ್‌ಗಳು, ಪ್ರೋಟಿನ್‌ಗಳು ಮತ್ತು ಕೊಬ್ಬುಗಳು. ನಮ್ಮ ಶಕ್ತಿಯ 60% ಕಾರ್ಬೋಹೈಡ್ರೇಟ್‌ಗಳಿಂದ ಬರುತ್ತದೆ. ಉಳಿದದ್ದು ಕೊಬ್ಬು ಮತ್ತು ಪ್ರೊಟಿನ್‌ನಿಂದ ಬರುತ್ತದೆ. ಭಾರತದಲ್ಲಿ ಇದು ಬೇರೆಯೇ ಕಥೆ. ಬಹುತೇಕ ಬಡ ಜನರು ಕಾರ್ಬೋಹೈಡ್ರೇಟ್‌ನಿಂದಲೇ 80% ಶಕ್ತಿ ಪಡೆದುಕೊಳ್ಳುತ್ತಾರೆ, ಅದರಲ್ಲೂ ಅಕ್ಕಿ, ಗೋಧಿ ಮುಂತಾದ ಬೆರಳೆಣಿಕೆಯಷ್ಟು ಆಹಾರ ಧಾನ್ಯಗಳಿಂದ. ಮಾಟ್ ರಿಡ್ಲೆ ಎನ್ನುವ ಹೆಸರಾಂತ ಜೀವ ಶಾಸ್ತ್ರಜ್ಞರು ಅಧಿಕ ಇಳುವರಿ ಬೆಳೆಗಳ ಆಹಾರ ಸೇವನೆಯಿಂದ ನಮ್ಮ ಪೌಷ್ಟಿಕತೆಯಲ್ಲಿ ಆಗುವ ಬದಲಾವಣೆ ಮತ್ತು ಆರೋಗ್ಯದ ಮೇಲೆ ಆಗುವ ಪರಿಣಾಮದ ಬಗ್ಗೆ ತಮ್ಮ ಪುಸ್ತಕ 'ಆಪ್ಟಿಮಲ್ ರ್‍ಯಾಷನಲಿಸ್ಟ್' ನಲ್ಲಿ ವಿವರಿಸುತ್ತಾರೆ. ಅಧಿಕ ಒಳಸುರಿ ಕೊಟ್ಟು ಕಡಿಮೆ ಅವಧಿಯಲ್ಲಿ ಹೆಚ್ಚಿಗೆ ಇಳುವರಿ ಕೊಡುವ ಬೆಳೆಗಳ ಕಾರ್ಬೋಹೈಡ್ರೇಟ್/ಸ್ಟಾರ್ಚ್‌ನಲ್ಲಿ ಸಕ್ಕರೆ ಅಂಶ(ಅಮೈಲೊಪೆಕ್ಟಿನ್) ಜಾಸ್ತಿ ಇರುತ್ತದೆ. ಸ್ಟಾರ್ಚ್‌ಗಳಲ್ಲಿ ಸಕ್ಕರೆ ಅಂಶ ಹೆಚ್ಚಾದಾಗ ಅದು ವೇಗವಾಗಿ ನಮ್ಮ ರಕ್ತಕ್ಕೆ ಸೇರಿಕೊಳ್ಳುತ್ತದೆ.

ಇದರರ್ಥ, ನಾವು ತಿನ್ನುವ ಆಹಾರ ನಮ್ಮ ರಕ್ತದಲ್ಲಿ ಸಕ್ಕರೆಯ ಪ್ರವಾಹವನ್ನು ಹರಿಸುತ್ತದೆ. ಇದು ನಮ್ಮ ರಕ್ತದಲ್ಲಿನ ಸಕ್ಕರೆಯನ್ನು ನಿಯಂತ್ರಣ ಮಾಡುವ ಇನ್ಸುಲಿನ್ ಉತ್ಪಾದಿಸುವ ಅಂಗಗಳನ್ನು ನಿತ್ರಾಣಗೊಳಿಸುತ್ತದೆ. ನಮ್ಮ ದೇಹದಲ್ಲಿ ನಡೆಯುವ ಪಚನಕ್ರಿಯೆ/ಶಕ್ತಿ ಉತ್ಪಾದನಾ ಕ್ರಿಯೆಯನ್ನು ಕುಂಠಿತಗೊಳಿಸಿ ಸಕ್ಕರೆ ಕಾಯಿಲೆ ಮತ್ತು ಹೃದಯಾಘಾತಗಳಿಗೆ ದಾರಿ ಮಾಡಿ ಕೊಡುತ್ತದೆ.

## ತಟ್ಟೆಯಲ್ಲೇ ವಿಷ

ಇವತ್ತು ಭಾರತದಲ್ಲಿ ಅನೇಕಾನೇಕ ಕೀಟನಾಶಕಗಳನ್ನು ಬಳಸಲಾಗುತ್ತಿದೆ. ಅವುಗಳಲ್ಲಿ ಬಹುತೇಕವು ಬೇರೆ ದೇಶಗಳಲ್ಲಿ ನಿಷೇಧ ಮಾಡಿರತಕ್ಕಂಥವು. ಕೆಲವಂತೂ ನಮ್ಮ ದೇಶದಲ್ಲೇ ನಿಷೇಧಗೊಂಡಿವೆ. ಆದರೆ ಅವನ್ನೆಲ್ಲ ಈಗಲೂ ಬಳಕೆ ಮಾಡಲಾಗುತ್ತಿದೆ.

## ಜಾನುವಾರಿಗೆ ಔಷಧಿ

ಕೃಷಿಯಲ್ಲಿ ಕೀಟನಾಶಕ ಬಳಕೆಯ ಜೊತೆಗೆ ಪಶುಸಂಗೋಪನೆಯಲ್ಲಿ ಪ್ರಾಣಿಗಳಿಗೆ ಹಾರ್ಮೋನುಗಳು, ಆಂಟಿಬಯೋಟಿಕ್‌ಗಳೇ ಮುಂತಾದ ಔಷಧಿಗಳನ್ನು ಕೊಡಲಾಗುತ್ತದೆ. ಇದು ಆರೋಗ್ಯದ ಮೇಲೆ ಬೀರುತ್ತಿರುವ ಪರಿಣಾಮ ಅತ್ಯಂತ ಅಪಾಯಕಾರಿ. ಆಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಬೆಳೆಸಿಕೊಂಡ ರೋಗಾಣುಗಳ ಬೆಳವಣಿಗೆಯಾಗಿ ಮುಂದೆಂದೂ ಸರಿಪಡಿಸಲಾಗದ ಪರಿಣಾಮವಾಗುತ್ತದೆ. ವಾಸಿಮಾಡಲಾಗದ ಸೋಂಕುಗಳು ಇವತ್ತಿನ ದಿನಗಳಲ್ಲಿ ಸರ್ವೇಸಾಮಾನ್ಯವಾಗಿಬಿಟ್ಟಿವೆ. ತಿಗಣೆಗಳು ಪ್ರತಿದಿನದ ಆಹಾರ ಮತ್ತು ನೀರಿನ ಮುಖಾಂತರ ಕೊಡುವ ಆಂಟಿಬಯೋಟಿಕ್ಸ್‌ಗಳಿಗೆ ಒಗ್ಗಿಕೊಂಡು, ಉತ್ಪರಿವರ್ತನೆ ಹೊಂದಿ ನಮ್ಮ ಚಿಕಿತ್ಸೆಯ ಆರ್ಸೆನೆಲ್ ಆಂಟಿಬಯೋಟಿಕ್‌ಗಳಿಗೆ ಪ್ರತಿರೋಧ ಹೊಂದುತ್ತವೆ.

## ಮಣ್ಣಿನ ಫಲವತ್ತತೆ ನಾಶ/ ಬರಡು

ಪೋಷಕಾಂಶ ಲಭ್ಯತೆ ಮಣ್ಣಿನ ಫಲವತ್ತತೆಯನ್ನು ಅಧರಿಸಿರುತ್ತದೆ. ಹಸಿರುಕ್ರಾಂತಿ ನಂತರದ ಮಣ್ಣಿನ ಫಲವತ್ತತೆ ಒಂದು ಭಯಾನಕ ಕತೆ. ಪ್ರತಿ ವರ್ಷವೂ ಸೂಕ್ಷ್ಮ ಪೋಷಕಾಂಶಗಳ ಕೊರತೆ ನಿರಂತರವಾಗಿ ಹೆಚ್ಚಾಗುತ್ತಲೆ ಇದೆ. ಸಾಯಿಲ್ ಇನ್ಸ್ಟಿಟ್ಯೂಟ್‌ನ ಮಣ್ಣಿನ ಫಲವತ್ತತೆಯ ಭೂಪಟ ನೋಡಿದಾಗ, ಹಸಿರು ಕ್ರಾಂತಿಯ ಪರಿಣಾಮವಾಗಿ ಭಾರತೀಯ ಮಣ್ಣಿನಲ್ಲಿ ಪೋಷಕಾಂಶಗಳೆಲ್ಲಾ ನಾಶವಾಗಿರುವುದು ಕಂಡು ಬರುತ್ತದೆ. ಮಣ್ಣಿನಲ್ಲಿರುವ ಪ್ರತಿಯೊಂದು ಸೂಕ್ಷ್ಮ ಪೋಷಕಾಂಶವೂ ನಮ್ಮ ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇವುಗಳ ಕೊರತೆಯಿಂದ ರೋಗ ಬರುತ್ತದೆ. ಈ ಹೊತ್ತು ನಮ್ಮ ಇಡೀ ದೇಶದ 70% ಜನರಲ್ಲಿ ಕಬ್ಬಿಣದ ಕೊರತೆ ಇದೆ. ಇದನ್ನು 'ಅನಿಮಿಯಾ ಅನ್ನುತ್ತಾರೆ. ಅನೇಕ ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ಇಂದು 'ಹಿಡನ್ ಹಂಗರ್' ಅಂದರೆ ಕಣ್ಣಿಗೆ ಕಾಣದ ಹಸಿವು ಎಂದು ಕರೆಯುತ್ತಾರೆ. ನಮ್ಮ ದೇಶದ ಬಹುಪಾಲು ಜನತೆಗೆ ಈ ಹಿಡನ್ ಹಂಗರ್ ಇದೆ.

## ನೀರಲ್ಲೂ ವಿಷ

ನೀವು ಅಧಿಕ ನೀರು ಬಯಸುವ ಬೆಳೆಗಳಿಗಾಗಿ ಭೂಗರ್ಭದ ಆಳ ಆಳಕ್ಕೆ ನೀರನ್ನು ಮೊಗೆಯುತ್ತಾ ಹೋದಂತೆ ನೀರಿನಲ್ಲಿ ಬಾರ ಲೋಹಗಳ ವಿಷ ಮತ್ತು ನ್ಯೂಕ್ಲಿಯರ್ ವಸ್ತುಗಳು ಕೂಡ ಹೆಚ್ಚಾಗುತ್ತಾ ಹೋಗುತ್ತವೆ. ಭಾರತದ 70% ಕೃಷಿ ಭೂಜಲದ ಮೇಲೆ ಅವಲಂಬನೆಯಾಗಿದೆ. ಭೂಜಲವನ್ನು ಅತ್ಯಂತ ಅಪಾಯಕಾರಿ ಮಟ್ಟದವರೆಗೆ ಮೊಗೆದುಬಿಟ್ಟಿರುವ ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ. ಒಂದು ಕಡೆ ಅರಣ್ಯ ನಾಶ ಮತ್ತು ಅದಕ್ಕೆ ಪರಿಸರ ತೆತ್ತ ಬೆಲೆಯಾದರೆ, ಇನ್ನೊಂದು ಕಡೆ ಮಾನವ ಆರೋಗ್ಯ ಮತ್ತು ಸ್ವಾಸ್ಥ್ಯದ ವಿಚಾರದಲ್ಲಿ ದೊಡ್ಡ ರೀತಿಯ ಬೆಲೆ ತೆರಬೇಕಾಗಿದೆ.

## ಹಾಗಾದರೆ ನಮ್ಮ ಭವಿಷ್ಯತ್ತು ಎಲ್ಲಿದೆ?

ನಮ್ಮ ಭವಿಷ್ಯತ್ತು ಇರುವುದು ನಮ್ಮ ತಳಿ ವೈವಿಧ್ಯ ಕಾಪಾಡಿಕೊಳ್ಳುವಲ್ಲಿ, ರೈತರ ತಳಿ ಬೀಜಗಳನ್ನು ಕಾಪಾಡಿಕೊಳ್ಳುವಲ್ಲಿ, ಮಿಶ್ರ ಬೆಳೆ ಪದ್ಧತಿಯಲ್ಲಿ ಮತ್ತು ಹೊರಗಿನ ಒಳಸುರಿ ಇಲ್ಲದ ಕೃಷಿಯಲ್ಲಿ. ■



# ಧಾರವಾಡ ಕೃಷಿ ವಿವಿಯಿಂದ ಬೆಳೆಗಳ ಬೆಲೆ ಅಂದಾಜು

## ಮೆಕ್ಕೆ ಜೋಳ

**ನವೆಂಬರ 2012ವರೆಗೆ ಗೋವಿನ ಜೋಳ ಸಂಗ್ರಹಿಸಲು ರೈತರಿಗೆ ಕೃಷಿ ತಜ್ಞರ ಸಲಹೆ**

ಉತ್ತರ ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತಿದ ಗೋವಿನ ಜೋಳವು ಕ್ರಮೇಣವಾಗಿ ಮಾರುಕಟ್ಟೆಗೆ ಬರಲು ಪ್ರಾರಂಭವಾಗಿದೆ. ಬೆಲೆ ಅನಿಶ್ಚಿತತೆಯಿಂದ ಗೋವಿನ ಜೋಳವನ್ನು ಯಾವಾಗ ಮತ್ತು ಎಲ್ಲಿ ಮಾರಾಟ ಮಾಡಬೇಕೆಂಬುದನ್ನು ತಿಳಿಯದೇ ರೈತರು ಯೋಚಿಸುವಂತಾಗಿದೆ. ಇಂತಹ ಅಯೋಮಯ ಪರಿಸ್ಥಿತಿಯಲ್ಲಿ ಗೋವಿನ ಜೋಳದ ಮಾರಾಟದ ಕುರಿತಾಗಿ ಸರಿಯಾದ ನಿರ್ಣಯ ತೆಗೆದುಕೊಳ್ಳಲು ರೈತರಿಗೆ ಅನುಕೂಲವಾಗಲು, ಕೃಷಿ ವಿಶ್ವವಿದ್ಯಾಲಯ ಧಾರವಾಡದ ಕೃಷಿ ವ್ಯವಹಾರ ನಿರ್ವಹಣಾ ವಿಭಾಗದಲ್ಲಿ ಸ್ಥಾಪಿತವಾದ ದೇಶಿಯ ಹಾಗೂ ರಫ್ತು ಮಾರುಕಟ್ಟೆ ಮಾಹಿತಿ ಕೇಂದ್ರವು (DEMIC) ಉತ್ತರ ಕರ್ನಾಟಕದ ವಿವಿಧ ಮಾರುಕಟ್ಟೆಗಳಲ್ಲಿ ಮುಂಬರುವ ತಿಂಗಳುಗಳಲ್ಲಿ ಇರಲಿರುವ ಬೆಲೆಯನ್ನು ಅಂದಾಜಿಸಿ ಸಲಹೆ ನೀಡುತ್ತಲಿದೆ.

ಉತ್ತರ ಕರ್ನಾಟಕದಲ್ಲಿ ಗೋವಿನ ಜೋಳಕ್ಕೆ ಪ್ರಮುಖ ಮಾರುಕಟ್ಟೆಗಳಲ್ಲೊಂದಾದ ರಾಣೇಬೆನ್ನೂರು ನಿಯಂತ್ರಿತ ಮಾರುಕಟ್ಟೆಯಿಂದ ಕಳೆದ 15 ವರ್ಷಗಳಿಂದೀಚಿನ ತಿಂಗಳುವಾರು ಮಾದರಿ ಬೆಲೆಯನ್ನು ಸಂಗ್ರಹಿಸಿ ಸಂಖ್ಯಾಶಾಸ್ತ್ರದ ವಿವಿಧ ಕಾಲಸರಣಿ ವಿಶ್ಲೇಷಣಾ ವಿಧಾನಗಳ ಮೂಲಕ ಪರಿಶೀಲಿಸಿ 2012ರ ಸೆಪ್ಟೆಂಬರ, ಅಕ್ಟೋಬರ ಹಾಗೂ ನವೆಂಬರ್ ತಿಂಗಳುಗಳಲ್ಲಿ ರಾಣೇಬೆನ್ನೂರ ಮಾರುಕಟ್ಟೆಯಲ್ಲಿ ಇರಲಿರುವ ಮುನ್ನೋಟ ಬೆಲೆಯನ್ನು ಅಂದಾಜಿಸಲಾಗಿದೆ. ಅಲ್ಲದೇ ರಾಣೇಬೆನ್ನೂರ ಮಾರುಕಟ್ಟೆಯಲ್ಲಿ ಗೋವಿನ ಜೋಳದ ಮಾರಾಟದಲ್ಲಿ ಅನೇಕ ವರ್ಷಗಳಿಂದ ನಿರತರಾಗಿರುವ ಅನುಭವಿ ವ್ಯಾಪಾರಸ್ಥರು, ಕೃಷಿ ಮಾರಾಟ ವ್ಯವಹಾರ ಪರಿಣಿತ ವಿಜ್ಞಾನಿಗಳು, ಈ ಭಾಗಗಳ ಪ್ರಗತಿಪರ ರೈತರುಗಳೊಡನೆ ಬೆಲೆ ಕುರಿತಾಗಿ ಚರ್ಚಿಸಿ, ದೇಶದ ಇತರ ಮಾರುಕಟ್ಟೆಗಳಲ್ಲಿ ಗೋವಿನ ಜೋಳದ ಬೆಲೆಯ ಸ್ಥಿತಿಗತಿ, ಗೋವಿನ ಜೋಳದ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳು ಹಾಗೂ ರಾಷ್ಟ್ರೀಯ ಸರಕು ವಿನಿಮಯ ಕೇಂದ್ರ (NCDEX) ದ ಭವಿಷ್ಯತ್ ಬೆಲೆ ಸೂಚ್ಯಾಂಕದ ಆಧಾರಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮವಾಗಿ ಈ ಮುನ್ನೋಟ ಬೆಲೆಯನ್ನು ಪರಿಷ್ಕರಿಸಲಾಗಿದೆ.

ಈ ಮಾಹಿತಿ ಕೇಂದ್ರವು ಅಂದಾಜಿಸಿದ ಮುನ್ನೋಟ ಬೆಲೆಯ ಪ್ರಕಾರ ಹಾಗೂ ವ್ಯಾಪಾರಸ್ಥರ ಹಾಗೂ ಅನುಭವಿ ರೈತರ ಸಲಹೆ ಪ್ರಕಾರ, ರಾಣೇಬೆನ್ನೂರು ಮಾರುಕಟ್ಟೆಯಲ್ಲಿ ಬರುವ ಸೆಪ್ಟೆಂಬರ ಹಾಗೂ ಅಕ್ಟೋಬರ ತಿಂಗಳುಗಳಲ್ಲಿ ಪ್ರತಿ ಕ್ವಿಂಟಲ ಗೋವಿನ ಜೋಳದ ಮಾರಾಟದ ಬೆಲೆಯು ಸುಮಾರು ರೂ.1100–1200/– ಮತ್ತು ನವೆಂಬರ್ ತಿಂಗಳಿನಲ್ಲಿ ರೂ.1200–1300/– ಇರುವುದೆಂದು ಅಂದಾಜುಮಾಡಲಾಗಿದೆ. ಬರಗಾಲದ ಪರಿಸ್ಥಿತಿಯಿಂದಾಗಿ ಮುಂಬರುವ ತಿಂಗಳುಗಳಲ್ಲಿ ಬೆಲೆಯಲ್ಲಿ ಏರಿಕೆ ಆಗುವ ನಿರೀಕ್ಷೆ ಇರುವುದರಿಂದ ನವೆಂಬರ್‌ವರೆಗೆ ಸಂಗ್ರಹಿಸಿ ಮಾರುವುದು ಉತ್ತಮ ಎಂದು ತಿಳಿಸಲಾಗಿದೆ. ಗೊದಾಮುಗಳಲ್ಲಿ ಸಂಗ್ರಹಣಾ ವೆಚ್ಚ ಪ್ರತಿ ಕ್ವಿಂಟಲಿಗೆ ಪ್ರತಿ ತಿಂಗಳಿಗೆ ರೂ. 3.00 ಇದೆ. ಚೆನ್ನಾಗಿ ಒಣಗಿದ, ಕಲ್ಮಶರಹಿತ, ಉತ್ತಮ ಗುಣಮಟ್ಟದ ಕಾಳುಗಳು ಮಾರುಕಟ್ಟೆಯಲ್ಲಿ ಉತ್ತಮ ಬೆಲೆಗೆ ಮಾರಾಟವಾಗುವುದರಿಂದ ರೈತರು ಗೋವಿನ ಜೋಳದ ಕಾಳುಗಳನ್ನು ಮಾರುಕಟ್ಟೆಗೆ ತಯಾರುಮಾಡುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲು ಕೃಷಿ ತಜ್ಞರು ತಿಳಿಸಿರುವರು.

## ಸೂರ್ಯಕಾಂತಿ

**ನವೆಂಬರ್ 2012ರಲ್ಲಿ ಬಾಗಲಕೋಟೆ ಮಾರುಕಟ್ಟೆಯಲ್ಲಿ ಸೂರ್ಯಕಾಂತಿಗೆ ಉತ್ತಮ ಬೆಲೆ ನಿರೀಕ್ಷೆ – ಕೃಷಿ ತಜ್ಞರ ಅಭಿಮತ**

ಉತ್ತರ ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತಿದ ಸೂರ್ಯಕಾಂತಿ ಕ್ರಮೇಣವಾಗಿ ಮಾರುಕಟ್ಟೆಗೆ ಬರಲು ಪ್ರಾರಂಭವಾಗಿದೆ. ಉತ್ತರ ಕರ್ನಾಟಕದಲ್ಲಿ ಸೂರ್ಯಕಾಂತಿಗೆ ಪ್ರಮುಖ ಮಾರುಕಟ್ಟೆಗಳಲ್ಲೊಂದಾದ ಬಾಗಲಕೋಟೆ ಮಾರುಕಟ್ಟೆಯಿಂದ ಕಳೆದ 20 ವರ್ಷಗಳಿಂದೀಚಿನ ತಿಂಗಳುವಾರು ಮಾದರಿ ಬೆಲೆಯನ್ನು ಸಂಗ್ರಹಿಸಿ ಸಂಖ್ಯಾಶಾಸ್ತ್ರದ ವಿವಿಧ ಕಾಲಸರಣಿ ವಿಶ್ಲೇಷಣಾ ವಿಧಾನಗಳ ಮೂಲಕ ಪರಿಶೀಲಿಸಿ 2012ರ ಸೆಪ್ಟೆಂಬರ, ಅಕ್ಟೋಬರ ಹಾಗೂ ನವೆಂಬರ್ ತಿಂಗಳುಗಳಲ್ಲಿ ಈ ಮಾರುಕಟ್ಟೆಯಲ್ಲಿ ಇರಲಿರುವ ಮುನ್ನೋಟ ಬೆಲೆಯನ್ನು ಅಂದಾಜಿಸಲಾಗಿದೆ. ಅಲ್ಲದೇ ಬಾಗಲಕೋಟೆ ಮಾರುಕಟ್ಟೆಯಲ್ಲಿ ಸೂರ್ಯಕಾಂತಿ ಮಾರಾಟದಲ್ಲಿ ಅನೇಕ ವರ್ಷಗಳಿಂದ ನಿರತರಾಗಿರುವ ಅನುಭವಿ ವ್ಯಾಪಾರಸ್ಥರು, ಕೃಷಿ ಮಾರಾಟ ವ್ಯವಹಾರ ಪರಿಣಿತ ವಿಜ್ಞಾನಿಗಳು, ಈ ಭಾಗಗಳ ಪ್ರಗತಿಪರ ರೈತರುಗಳೊಡನೆ ಬೆಲೆ ಕುರಿತಾಗಿ ಚರ್ಚಿಸಿ, ದೇಶದ ಇತರ ಮಾರುಕಟ್ಟೆಗಳಲ್ಲಿ ಸೂರ್ಯಕಾಂತಿ ಬೆಲೆಯ ಸ್ಥಿತಿಗತಿ, ಸೂರ್ಯಕಾಂತಿ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳ ಆಧಾರಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮವಾಗಿ ಈ ಮುನ್ನೋಟ ಬೆಲೆಯನ್ನು ಪರಿಷ್ಕರಿಸಲಾಗಿದೆ.

ಪ್ರಸ್ತುತ ಆಗಸ್ಟ ತಿಂಗಳಿನಲ್ಲಿ ಬಾಗಲಕೋಟೆ ಮಾರುಕಟ್ಟೆಯಲ್ಲಿ ಸೂರ್ಯಕಾಂತಿಯ ಬೆಲೆಯು ರೂ. 3700 ಆಗಿದ್ದು, ಈ ಮಾಹಿತಿ ಕೇಂದ್ರವು ಅಂದಾಜಿಸಿದ ಮುನ್ನೋಟ ಬೆಲೆಯ ಪ್ರಕಾರ ಹಾಗೂ ವ್ಯಾಪಾರಸ್ಥರ ಹಾಗೂ ಅನುಭವಿ ರೈತರ ಸಲಹೆ ಪ್ರಕಾರ, ಬಾಗಲಕೋಟೆ ಮಾರುಕಟ್ಟೆಯಲ್ಲಿ ಬರುವ ಸೆಪ್ಟೆಂಬರ ತಿಂಗಳಲ್ಲಿ ಪ್ರತಿ ಕ್ವಿಂಟಲಿಗೆ ರೂ. 3300–3500/–, ಅಕ್ಟೋಬರನಲ್ಲಿ ರೂ. 3400–3700/– ಹಾಗೂ ನವೆಂಬರ್ ತಿಂಗಳಿನಲ್ಲಿ ರೂ.3500–3800/– ಇರುವುದೆಂದು ಅಂದಾಜು ಮಾಡಲಾಗಿದೆ.

ಬರಗಾಲದ ಪರಿಸ್ಥಿತಿಯಿಂದಾಗಿ ಮುಂಬರುವ ತಿಂಗಳುಗಳಲ್ಲಿ ಬೆಲೆಯಲ್ಲಿ ಇನ್ನೂ ಏರಿಕೆ ಕಾಣುವ ಸಾಧ್ಯತೆಗಳಿರುವದರಿಂದ ರೈತರು ನವೆಂಬರವರೆಗೆ ಸಂಗ್ರಹಿಸಿ ಮಾರುವುದರಿಂದ ಉತ್ತಮ ಬೆಲೆ ಪಡೆಯಬಹುದು ಎಂದು ಕೃಷಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಗೊದಾಮುಗಳಲ್ಲಿ ಸಂಗ್ರಹಣಾ ವೆಚ್ಚ ಪ್ರತಿ ಕ್ವಿಂಟಲಿಗೆ ಪ್ರತಿ ತಿಂಗಳಿಗೆ ರೂ. 3.00 ಇದೆ. ಉತ್ತಮ ಗುಣಮಟ್ಟದ, ಪೂರ್ತಿಯಾಗಿ ತುಂಬಿದ, ಚೆನ್ನಾಗಿ ಒಣಗಿದ, ಕಲ್ಮಶ ರಹಿತ ಕಾಳುಗಳಿಗೆ ಹೆಚ್ಚಿನ ಬೆಲೆ ಸಿಗಬಹುದಾಗಿರುವ ಕಾರಣ ರೈತರು ಈ ವಿಷಯಗಳ ಕಡೆಗೆ ಹೆಚ್ಚಿನ ಲಕ್ಷ ನೀಡಲು ಕೋರಲಾಗಿದೆ.

## ಧಾರವಾಡ ಕೃಷಿ ವಿ.ವಿಗೆ ಸಹಜ ಸಾಗುವಳಿ ಬರೆದ ಪತ್ರ

ಮಾನ್ಯರೇ,

ಇದನ್ನು ಕಳುಹಿಸಿದ್ದಕ್ಕೆ ಧನ್ಯವಾದಗಳು. ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ. ಆದರೆ ಮೆಕ್ಕೆ ಜೋಳ, ಸೂರ್ಯಕಾಂತಿ, ಸೋಯಾಬೀನ್ ಮಾತ್ರ ಏಕೆ? ಉತ್ತರ ಕರ್ನಾಟಕದಲ್ಲಿ ಊಟದ ಜೋಳ, ಸಜ್ಜೆ, ನವಣೆ, ಶೇಂಗಾ, ಮೆಣಸಿನಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಹೈಬ್ರಿಡ್ ಹತ್ತಿ, ಜಯಧರ್ ಹತ್ತಿ, ತೊಗರಿ, ಹೆಸರು, ಉದ್ದು, ಮಡಕಿ, ಅಲಸಂದಿ, ಕೊತ್ತಂಬರಿ, ಮೆಂಥ್ಯ, ಎಳ್ಳು, ಗುರೆಳ್ಳು, ಗೋಧಿ, ರಾಗಿ, ಕಡಲೆ, ಕುಸುಬಿ, ಔಡಲ, ಸಾಸಿವೆ ಸೇರಿದಂತೆ ಇನ್ನೂ ಅನೇಕಾನೇಕ ಬೆಳೆಗಳನ್ನು ಬೆಳೆದು ರೈತರು ಮಾರಾಟ ಮಾಡುತ್ತಾರಲ್ಲ, ಅವೆಲ್ಲ ನಿಮ್ಮ ಪಟ್ಟಿಯಲ್ಲಿ ಯಾಕೆ ಸೇರಿಲ್ಲ? ಮೆಕ್ಕೆ ಜೋಳ, ಸೋಯಾಬೀನ್‌ಗಳನ್ನು ನೀವು ಉತ್ತೇಜಿಸುತ್ತಿರುವುದು ಯಾರ ಹಿತಕ್ಕಾಗಿ?

ಮೊನ್ಸಾಂಟೊ ಕಂಪನಿ ಈಗ ರೌಂಡಪ್ ರೆಡಿ ಕುಲಾಂತರಿ ಮೆಕ್ಕೆ ಜೋಳ ಅಭಿವೃದ್ಧಿಪಡಿಸಿದ್ದು ಅದರ ಬಿಡುಗಡೆಗೆ ಜಿಇಎಸಿಯ ಅನುಮತಿ ಕೋರಿದೆ. ಅನುಮತಿ ದೊರೆತರೆ ಈಗ ರೈತರು ಬೆಳೆಯುತ್ತಿರುವ ಮೆಕ್ಕೆ ಜೋಳವನ್ನು ಕುಲಾಂತರಿ ರೌಂಡಪ್ ರೆಡಿ ಮೆಕ್ಕೆ ಜೋಳ ಒಂದೇ ಬೀಸಿನಲ್ಲಿ ತೊಡೆದು ಹಾಕುತ್ತದೆ(ಬಿಟಿ ಹತ್ತಿ ಮಾಡಿದ ಹಾಗೆ). ಧಾರವಾಡ ಕೃಷಿ ವಿ.ವಿ ಕಂಪನಿಯವರಿಗೆ ಒಳ್ಳೆ ತಳಪಾಯ ಸೃಷ್ಟಿ ಮಾಡುತ್ತಿರುವಂತೆ ಕಂಡು ಬರುತ್ತದೆ. ಈ ಸಧ್ಯ ಕರ್ನಾಟಕದಲ್ಲಿ **11,03,369** ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆ ಜೋಳ ಬೆಳೆಯಲಾಗುತ್ತಿದೆ. ನಿಮ್ಮ ಉತ್ತೇಜನದಿಂದ ಕಳೆದ 20 ವರ್ಷಗಳಲ್ಲಿ ಮೆಕ್ಕೆ ಜೋಳ 10 ಪಟ್ಟು ಹೆಚ್ಚಾಗಿದೆ. ಯಾರ ಲಾಭಕ್ಕಾಗಿ ಇದನ್ನು ನೀವು ಉತ್ತೇಜಿಸುತ್ತಿದ್ದೀರಿ? ಕಳೆದ 3–4 ವರ್ಷದಿಂದ ಮಳೆಯಾಶ್ರಿತ ರೈತರು ಮೆಕ್ಕೆ ಜೋಳದಲ್ಲಿ ಬಹುತೇಕ 100% ಬೆಳೆನಷ್ಟ ಅನುಭವಿಸುತ್ತಿರುವುದು ನಿಮಗೆ ತಿಳಿಯದೇ?

ಹಾಗೆಯೇ ಸೋಯಾಬೀನ್ ಕೂಡ. ನಮ್ಮಲ್ಲಿ ವೈವಿಧ್ಯಮಯ ದ್ವಿದಳಧಾನ್ಯಗಳು ಯತೇಚ್ಛವಾಗಿರುವಾಗ, ನಮ್ಮದಲ್ಲದ ಸೋಯಾಬೀನನ್ನು ಉತ್ತೇಜಿಸುವುದು ಯಾರ ಲಾಭಕ್ಕಾಗಿ? ಅಮೆರಿಕದಲ್ಲಿ ಬೆಳೆಯುವ 100% ಸೋಯಾಬೀನ್ ರೌಂಡಪ್ ರೆಡಿ ಕುಲಾಂತರಿ ಬೆಳೆಯಾಗಿದ್ದು ನಮ್ಮ ಪ್ರದೇಶಕ್ಕೆ ಅದನ್ನು ತರಲು ಕಂಪನಿ ನಡೆಸುತ್ತಿರುವ ಹುನ್ನಾರ ನಿಮಗೆ ತಿಳಿಯದೇನೂ ಇಲ್ಲ.

ಇನ್ನಾದರೂ ಕಂಪನಿಗಳ ಕುತಂತ್ರದ ಕೆಲಸಕ್ಕೆ ಒತ್ತಾಸೆ ಮಾಡುವುದನ್ನು ಬಿಟ್ಟು, ಧಾರವಾಡ ಕೃಷಿ ವಿ.ವಿ ರೈತರಿಗೆ ಲಾಭವಾಗುವಂಥ ಸಂಶೋಧನೆ/ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದೆಂದು ಆಶಿಸೋಣವೇ?

**ಸಹಜ ಸಾಗುವಳಿ**

## ವಿ.ವಿಯಿಂದ ಬಂದ ಉತ್ತರ

(ಇಂಗ್ಲಿಷ್ ಪತ್ರದ ಕನ್ನಡಾನುವಾದ)

ಮಾನ್ಯರೆ,

ನಿಮ್ಮ ತಕ್ಷಣದ ಉತ್ತರ ಮತ್ತು ನೀವು ರೈತ ಸಮುದಾಯದ ವಿಚಾರದಲ್ಲಿ ಹೊಂದಿರುವ ಕಾಳಜಿಗೆ ಧನ್ಯವಾದಗಳು. ನಮ್ಮ NAIP("Establishing and Networking of Agricultural Market Intelligence Centres in India") ಪ್ರಾಜೆಕ್ಟ್‌ನಲ್ಲಿ ಇಂಡಿಯಾದಲ್ಲಿ 11 ಕೇಂದ್ರಗಳಿವೆ. ಕರ್ನಾಟಕದಲ್ಲಿ ಧಾರವಾಡ ಕೃಷಿ ವಿ.ವಿ ಮತ್ತು ಬೆಂಗಳೂರು ಕೃಷಿ ವಿ.ವಿಗಳು ಉಪ ಕೇಂದ್ರಗಳಾಗಿವೆ. ಕೊಯಬತ್ತೂರಿನ ತಮಿಳುನಾಡು ಕೃಷಿ ವಿ.ವಿ ಮುಖ್ಯ ಕೇಂದ್ರವಾಗಿರುತ್ತದೆ. ನಮ್ಮ ವಿ.ವಿಗೆ 14 ಮುಖ್ಯ ಬೆಳೆಗಳನ್ನು ವಹಿಸಿಕೊಡಲಾಗಿದ್ದು, ಈ ಬೆಳೆಗಳ ಬೆಲೆ ಮುನ್ಸೂಚನೆಯನ್ನು ನಾವು ಕೊಡುತ್ತಿದ್ದೇವೆ. ಈ ಬೆಳೆಗಳೆಂದರೆ, ಮೆಕ್ಕೆ ಜೋಳ, ಸೂರ್ಯಕಾಂತಿ, ಸೋಯಾಬೀನ್, ಜೋಳ, ಶೇಂಗಾ, ಭತ್ತ, ತೊಗರಿ, ಕಡಲೆ, ಹೆಸರು, ಉದ್ದು, ಹತ್ತಿ, ಮೆಣಸಿನಕಾಯಿ, ಈರುಳ್ಳಿ ಮತ್ತು ಅಡಿಕೆ. ಇವು ಉತ್ತರ ಕರ್ನಾಟಕದ ಮುಖ್ಯ ಬೆಳೆಗಳಾಗಿವೆ. ಇದೇ ರೀತಿ ಬೆಂಗಳೂರು ಕೃಷಿ ವಿ.ವಿಯು ದಕ್ಷಿಣ ಕರ್ನಾಟಕದ ಪ್ರಮುಖ ಬೆಳೆಗಳ ಬೆಲೆ ಮುನ್ಸೂಚನೆ ನೀಡುತ್ತದೆ.

ಹೀಗಾಗಿ ನಾವು ಇಲ್ಲಿ 14 ಬೆಳೆಗಳಿಗೆ ನಮ್ಮನ್ನು ಸೀಮಿತಗೊಳಿಸಿಕೊಂಡಿದ್ದೇವೆ. ಈಗ ಸೂರ್ಯಕಾಂತಿ ಮತ್ತು ಮೆಕ್ಕೆ ಜೋಳ ಮಾರುಕಟ್ಟೆಗೆ ಬರುತ್ತಿರುವುದರಿಂದ ಅವುಗಳ ಬೆಳೆ ಮುನ್ಸೂಚನೆ ಕೊಟ್ಟಿದ್ದೇವೆ. ಇತರ ಬೆಳೆಗಳ ಕಟಾವು ಪ್ರಾರಂಭವಾದಂತೆ ಅವುಗಳ ಬೆಲೆ ಮುನ್ಸೂಚನೆಯನ್ನು ಕೂಡ ಬಿಡುಗಡೆ ಮಾಡುತ್ತೇವೆ ಮತ್ತು ನಿಮ್ಮ ಪತ್ರಿಕೆಗೆ ಕಳುಹಿಸಿಕೊಡುತ್ತೇವೆ ಎಂಬ ಮಾಹಿತಿಯನ್ನು ನಿಮಗೆ ಕೊಡಲು ಇಚ್ಚಿಸುತ್ತೇವೆ.

**DEMIC TEAM, DHARWAD**

## ಸೋಯಾ ಅವರೆ

**ಮುಂಗಾರು ಹಂಗಾಮಿನಲ್ಲಿ ಬೆಳೆದ ಹಳದಿ ಸೋಯಾ ಅವರೆಗೆ ಕೊಯ್ಲಿನ ವೇಳೆಗೆ ಬೈಲಹೊಂಗಲ ಮಾರುಕಟ್ಟೆಯಲ್ಲಿ ರೂ.4000–4500 ದರ ನಿರೀಕ್ಷೆ : ಕೃಷಿ ತಜ್ಞರ ಅಭಿಮತ**

ಉತ್ತರ ಕರ್ನಾಟಕದಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತಿದ ಹಳದಿ ಸೋಯಾ ಅವರೆ ಕ್ರಮೇಣವಾಗಿ ಮಾರುಕಟ್ಟೆಗೆ ಬರಲು ಪ್ರಾರಂಭವಾಗಿದೆ. ಉತ್ತರ ಕರ್ನಾಟಕದಲ್ಲಿ ಹಳದಿ ಸೋಯಾ ಅವರೆಗೆ ಪ್ರಮುಖ ಮಾರುಕಟ್ಟೆಗಳಲ್ಲೊಂದಾದ ಬೈಲಹೊಂಗಲ ನಿಯಂತ್ರಿತ ಮಾರುಕಟ್ಟೆಯಿಂದ ಕಳೆದ 10 ವರ್ಷಗಳಿಂದೀಚೆಗಿನ ತಿಂಗಳುವಾರು ಮಾದರಿ ಬೆಲೆಯನ್ನು ಸಂಗ್ರಹಿಸಿ ಸಂಖ್ಯಾಶಾಸ್ತ್ರದ ವಿವಿಧ ಕಾಲಸರಣಿ ವಿಶ್ಲೇಷಣೆ ವಿಧಾನಗಳ ಮೂಲಕ ಪರಿಶೀಲಿಸಿ 2012 ರ ಸೆಪ್ಟೆಂಬರ, ಅಕ್ಟೋಬರ ಹಾಗೂ ನವೆಂಬರ್ ತಿಂಗಳಿನಲ್ಲಿ ಈ ಮಾರುಕಟ್ಟೆಯಲ್ಲಿ ಇರಲಿರುವ ಮುನ್ನೋಟ ಬೆಲೆಯನ್ನು ಅಂದಾಜಿಸಲಾಗಿದೆ. ಅಲ್ಲದೇ ಈ ಮಾರುಕಟ್ಟೆಯಲ್ಲಿ ಸೋಯಾ ಅವರೆ ಮಾರಾಟದಲ್ಲಿ ಅನೇಕ ವರ್ಷಗಳಿಂದ ನಿರತರಾಗಿರುವ ಅನುಭವಿ ವ್ಯಾಪಾರಸ್ಥರು, ಕೃಷಿ ಮಾರಾಟ ವ್ಯವಹಾರ ಪರಿಣಿತ ವಿಜ್ಞಾನಿಗಳು, ಈ ಭಾಗಗಳ ಪ್ರಗತಿಪರ ರೈತರುಗಳೊಡನೆ ಬೆಲೆ ಕುರಿತಾಗಿ ಚರ್ಚಿಸಿ, ದೇಶದ ಇತರ ಮಾರುಕಟ್ಟೆಗಳಲ್ಲಿ ಸೋಯಾ ಅವರೆಯ ಬೆಲೆಯ ಸ್ಥಿತಿಗತಿ, ಸೋಯಾ ಅವರೆ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳು ಹಾಗೂ ರಾಷ್ಟ್ರೀಯ ಸರಕು ವಿನಿಮಯ ಕೇಂದ್ರ (NCDEX)ದ ಭವಿಷ್ಯತ್ ಬೆಲೆ ಸೂಚ್ಯಾಂಕದ ಆಧಾರಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮವಾಗಿ ಈ ಮುನ್ನೋಟ ಬೆಲೆಯನ್ನು ಪರಿಷ್ಕರಿಸಲಾಗಿದೆ. ಈ ವರ್ಷ ಮುಂಗಾರು ಉತ್ತಮವಾಗಿಲ್ಲದಿರುವ ಕಾರಣ ಆವಕವು ಕಡಿಮೆ ಆಗುವ ಸಾಧ್ಯತೆ ಇರುವುದರಿಂದ ಹಿಂದಿನ ವರ್ಷಕ್ಕಿಂತಲೂ ಈ ವರ್ಷ ಬೆಲೆಯಲ್ಲಿ ಏರಿಕೆ ಕಾಣಬಹುದಾಗಿದೆ. ಈ ಮಾಹಿತಿ ಕೇಂದ್ರವು ಅಂದಾಜಿಸಿದ ಮುನ್ನೋಟ ಬೆಲೆಯ ಪ್ರಕಾರ ಹಾಗೂ ವ್ಯಾಪಾರಸ್ಥರ ಹಾಗೂ ಅನುಭವಿ ರೈತರ ಸಲಹೆ ಪ್ರಕಾರ, ಬೈಲಹೊಂಗಲ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ ಮಾರಾಟದ ಬೆಲೆಯು 2012ರ ಸೆಪ್ಟೆಂಬರ್ ಅಕ್ಟೋಬರ್ ಹಾಗೂ ನವೆಂಬರ್ ತಿಂಗಳುಗಳಲ್ಲಿ ರೂ.4000–4500 ಇರುವುದೆಂದು ಅಂದಾಜು ಮಾಡಲಾಗಿದೆ. ಅಲ್ಲದೆ ಮುಂಬರುವ ತಿಂಗಳುಗಳಲ್ಲಿ ಬೆಲೆ ಏರಿಕೆ ಆಗುವ ಸಾಧ್ಯತೆಗಳಿಲ್ಲದಿರುವುದರಿಂದ ಹಾಗೂ ಸಂಗ್ರಹಿಸಿಡುವುದರಿಂದ ಸೋಯಾ ಗುಣಮಟ್ಟ ಕಡಿಮೆಯಾಗುವುದಲ್ಲದೇ ಅನವಶ್ಯಕ ಸಂಗ್ರಹಣೆ ಖರ್ಚು ಆಗುವುದರಿಂದ ಕೊಯ್ಲಿನ ನಂತರ ತಕ್ಷಣ ಮಾರುವುದು ಉತ್ತಮ ಎಂದು ತಿಳಿಸಲಾಗಿದೆ. ಚೆನ್ನಾಗಿ ಒಣಗಿದ, ದುಂಡನೆಯ, ಕಲ್ಮಶರಹಿತ, ಉತ್ತಮ ಗುಣಮಟ್ಟದ ಕಾಳುಗಳು ಮಾರುಕಟ್ಟೆಯಲ್ಲಿ ಉತ್ತಮ ಬೆಲೆಗೆ ಮಾರಾಟವಾಗುವುದರಿಂದ ರೈತರು ಸೋಯಾ ಅವರೆ ಕಾಳುಗಳನ್ನು ಮಾರುಕಟ್ಟೆಗೆ ತಯಾರುಮಾಡುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲು ತಿಳಿಸಲಾಗಿದೆ.

**ಮುಂಗಾರು ಹಂಗಾಮಿನಲ್ಲಿ ಬೆಳೆದ ಕಡಲೆ ಕಾಳನ್ನು ತಕ್ಷಣ ಮಾರುವುದು ಉತ್ತಮ –ಕೃಷಿ ತಜ್ಞರ ಸಲಹೆ**

ಉತ್ತರ ಕರ್ನಾಟಕದ ಹಲವಾರು ಕಡೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಬಿತ್ತಿದ ಕಡಲೆ ಕಾಳು ಮಾರುಕಟ್ಟೆಗೆ ಬರಲು ಪ್ರಾರಂಭವಾಗಿದೆ. ಉತ್ತರ ಕರ್ನಾಟಕದಲ್ಲಿ ಕಡಲೆ ಕಾಳಿನ ಪ್ರಮುಖ ಮಾರುಕಟ್ಟೆಯಾದ ಬೀದರ ಮಾರುಕಟ್ಟೆಯಿಂದ ಕಳೆದ 20 ವರ್ಷಗಳಿಂದೀಚಿನ ತಿಂಗಳುವಾರು ಮಾದರಿ ಬೆಲೆಯನ್ನು ಸಂಗ್ರಹಿಸಿ ಸಂಖ್ಯಾಶಾಸ್ತ್ರದ ವಿವಿಧ ಕಾಲಸರಣಿ ವಿಶ್ಲೇಷಣ ವಿಧಾನಗಳ ಮೂಲಕ ಪರಿಶೀಲಿಸಿ 2012 ರ ಸೆಪ್ಟೆಂಬರ, ಅಕ್ಟೋಬರ ಹಾಗೂ ನವೆಂಬರ್ ತಿಂಗಳಿನಲ್ಲಿ ಈ ಮಾರುಕಟ್ಟೆಯಲ್ಲಿ ಇರಲಿರುವ ಮುನ್ನೋಟ ಬೆಲೆಯನ್ನು ಅಂದಾಜಿಸಲಾಗಿದೆ. ಅಲ್ಲದೇ ಈ ಮಾರುಕಟ್ಟೆಯಲ್ಲಿ ಕಡಲೆ ಕಾಳು ಮಾರಾಟದಲ್ಲಿ ಅನೇಕ ವರ್ಷಗಳಿಂದ ನಿರತರಾಗಿರುವ ಅನುಭವಿ ವ್ಯಾಪಾರಸ್ಥರು, ಕೃಷಿ ಮಾರಾಟ ವ್ಯವಹಾರ ಪರಿಣಿತ ವಿಜ್ಞಾನಿಗಳು, ಈ ಭಾಗಗಳ ಪ್ರಗತಿಪರ ರೈತರುಗಳೊಡನೆ ಬೆಲೆ ಕುರಿತಾಗಿ ಚರ್ಚಿಸಿ, ದೇಶದ ಇತರ ಮಾರುಕಟ್ಟೆಗಳಲ್ಲಿ ಕಡಲೆ ಕಾಳು ಬೆಲೆಯ ಸ್ಥಿತಿಗತಿ, ಕಡಲೆ ಕಾಳು ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯಮಗಳು ಹಾಗೂ ರಾಷ್ಟ್ರೀಯ ಸರಕು ವಿನಿಮಯ ಕೇಂದ್ರ (ಓಅಆಇಫ)ದ ಭವಿಷ್ಯತ್ ಬೆಲೆ ಸೂಚ್ಯಾಂಕದ ಆಧಾರಗಳನ್ನು ಗಣನೆಗೆ ತೆಗೆದುಕೊಂಡು ಅಂತಿಮವಾಗಿ ಈ ಮುನ್ನೋಟ ಬೆಲೆಯನ್ನು ಪರಿಷ್ಕರಿಸಲಾಗಿದೆ.

ಈ ಮಾಹಿತಿ ಕೇಂದ್ರವು ಅಂದಾಜಿಸಿದ ಮುನ್ನೋಟ ಬೆಲೆಯ ಪ್ರಕಾರ ಹಾಗೂ ವ್ಯಾಪಾರಸ್ಥರ ಹಾಗೂ ಅನುಭವಿ ರೈತರ ಸಲಹೆ ಪ್ರಕಾರ, ಬೀದರ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ ಮಾರಾಟದ ಬೆಲೆಯು 2012 ರ ಸೆಪ್ಟೆಂಬರ ತಿಂಗಳಿನಲ್ಲಿ ರೂ.4000–4500, ಅಕ್ಟೋಬರ ಹಾಗೂ ನವೆಂಬರ್ ತಿಂಗಳುಗಳಲ್ಲಿ ರೂ.4200–4600 ಇರುವುದೆಂದು ಅಂದಾಜು ಮಾಡಲಾಗಿದೆ. ಈ ವರ್ಷದ ಮುಂಗಾರು ಚೆನ್ನಾಗಿಲ್ಲದಿರುವ ಕಾರಣ, ಹೆಚ್ಚಿನ ಆವಕದ ಅಭಾವವಾಗುವದರಿಂದ ಹಿಂದಿನ ವರ್ಷಕ್ಕಿಂತಲೂ ಈ ವರ್ಷ ಬೆಲೆಯಲ್ಲಿ ಏರಿಕೆ ಕಾಣಬಹುದಾಗಿದೆ ಹಾಗೂ ಮುಂಬರುವ ತಿಂಗಳುಗಳಲ್ಲಿ ಬೆಲೆ ಏರಿಕೆಯಲ್ಲಿ ಯಾವ ತರಹದ ಏರಿಕೆ ಕಾಣುವ ಸಾಧ್ಯತೆಗಳು ಇಲ್ಲದಿರುವುದರಿಂದ ರೈತರು ಸಂಗ್ರಹಿಸಿಡುವ ಬದಲು ತಕ್ಷಣ ಮಾರುವುದು ಉತ್ತಮ ಎಂದು ಕೃಷಿ ಮಾರಾಟ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಚೆನ್ನಾಗಿ ಬಲಿತ, ಒಣಗಿದ ಹಾಗೂ ಕಸ ಕಡ್ಡಿ ರಹಿತ ಕಾಳುಗಳಿಗೆ ಉತ್ತಮ ಬೆಲೆ ಸಿಗುವ ಕಾರಣ ರೈತರು ತಮ್ಮ ಉತ್ಪನ್ನವನ್ನು ಮಾರುಕಟ್ಟೆಗೆ ತಯಾರು ಮಾಡುವಾಗ ಈ ಅಂಶಗಳನ್ನು ಗಮನದಲ್ಲಿಡಲು ಸೂಚಿಸಲಾಗಿದೆ. ■

# ಚಿಲ್ಲರೆ ವಿಷಯ ಅಲ್ಲ!

(3ನೇ ಪುಟದಿಂದ...)

ಭಾರತದಲ್ಲಿ ಕೂಡ ಇದೇ ಸ್ಥಿತಿ ಇದೆ. ನಬಾರ್ಡ್ ಅಧ್ಯಯನವೊಂದರ ಪ್ರಕಾರ ರಿಲೈಯೆನ್ಸ್ ಫ್ರೆಷ್ ಮತ್ತು ಇತರ ನೇರ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳು 15–20% ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿವೆ. ಎಂಥ ಹಣದುಬ್ಬರದ ಸಮಯದಲ್ಲೂ ಈ ಕಂಪನಿಗಳು ಬೆಲೆ ಇಳಿಸಲಿಲ್ಲ. ಹಾಗಾದರೆ ಗ್ರಾಹಕರಿಗೆ ಲಾಭವಾದದ್ದು ಎಲ್ಲಿ?

ಅಮೆರಿಕದಲ್ಲಿ 1950ಕ್ಕೆ ಮೊದಲು ರೈತರು ತಮ್ಮ ಉತ್ಪನ್ನವನ್ನು ಒಂದು ಡಾಲರಿಗೆ ಮಾರುತ್ತಿದ್ದಾಗ, ಅವರ ಆದಾಯ 70% ಇತ್ತು. 2005ರಲ್ಲಿ ಅದು 4%ಗೆ ಇಳಿದಿತ್ತು. ವಾಲ್‌ಮಾರ್ಟ್‌ಗಳೆಲ್ಲಾ ಬಂದು, ದಲಾಲಿಗಳನ್ನೆಲ್ಲಾ ತೊಡೆದು ಹಾಕಿದ ಮೇಲೆ ರೈತರ ಆದಾಯ ಹೆಚ್ಚಾಗಬೇಕಿತ್ತಲ್ಲವೇ? ಬದಲಾಗಿ ಹೊಸ ಮಧ್ಯವರ್ತಿಗಳು ಹುಟ್ಟಿಕೊಂಡಿದ್ದರು– ಕ್ವಾಲಿಟಿ ಕಂಟ್ರೋಲರ್, ಸ್ಟಾಂಡರ್ಡೈಸರ್, ದೃಢೀಕರಣ ಏಜೆನ್ಸಿ, ಸಂಸ್ಕರಣಕಾರರು ಇತ್ಯಾದಿ ರೂಪದಲ್ಲಿ. ಇವರೆಲ್ಲ ರೈತರ ಲಾಭವನ್ನು ಕೊಳ್ಳೆ ಹೊಡೆದು ನಡೆದಿದ್ದರು. **ವಾಲ್‌ಮಾರ್ಟ್ ಒಂದು ಅತಿ ದೊಡ್ಡ ದಲಾಲಿ. ಅದು ಸಣ್ಣ ಸಣ್ಣ ದಲಾಲರನ್ನೆಲ್ಲಾ ನುಂಗಿಹಾಕುತ್ತದೆ ಎಂಬುದನ್ನು ನಾವು ಮರೆಯುವುದು ಬೇಡ.**

ದೈತ್ಯ ಚಿಲ್ಲರೆ ವ್ಯಾಪಾರದ ಕಂಪನಿಗಳು ರೈತರ ಹೊಲದಿಂದ ಗ್ರಾಹಕರ ತಟ್ಟೆಯವರೆಗೆ ಒಳರಚನೆಯ ವ್ಯವಸ್ಥೆ ಮಾಡುತ್ತವೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ. ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಇಂಥ ಒಳರಚನೆಗಳೇನಾದರೂ ಇದ್ದರೆ ಅದನ್ನು ಸರ್ಕಾರ ಕೃಷಿ ಸಬ್ಸಿಡಿಯ ರೂಪದಲ್ಲಿ ನಿರ್ಮಾಣ ಮಾಡಿರುವುದು. ಭಾರತದಲ್ಲಿ 40% ಕೃಷಿ ಆಹಾರ ಉತ್ಪನ್ನ ವ್ಯರ್ಥವಾಗಿ ಹೋಗುತ್ತಿದ್ದು ಅದನ್ನು ನಿಲ್ಲಿಸಲಾಗುತ್ತದೆ ಎಂಬುದು ಕೂಡಾ ದೊಡ್ಡ ಭ್ರಮೆ. ಅಮೆರಿಕದಲ್ಲಿ ಸಂಸ್ಕರಣೆಯ ನಂತರ 40% ಆಹಾರ ವ್ಯರ್ಥವಾಗುತ್ತಿದ್ದು ಇದನ್ನು ತಡೆಗಟ್ಟಲು ವಾಲ್‌ಮಾರ್ಟ್‌ಗೆ ಸಾಧ್ಯವಾಗಿಲ್ಲ. ಬೇಕೂ ಆಗಿಲ್ಲ.

ಇನ್ನು ನೌಕರಿ ಸೃಷ್ಟಿ ಮತ್ತು ಬಡತನ ನಿರ್ಮೂಲನೆಯ ವಿಚಾರಕ್ಕೆ ಬಂದರೆ, 2004ರಲ್ಲಿ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಸ್ಟೀಫನ್ ಗೋತ್ಸೆ ಮತ್ತು ಹೇಮ ಸ್ವಾಮಿನಾಥನ್ ಮಾಡಿದ ಅಧ್ಯಯನ ನೋಡಬಹುದು. ವಾಲ್‌ಮಾರ್ಟ್ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿಕೊಂಡಿದ್ದ ರಾಜ್ಯಗಳಿಗೆ ಹೋಲಿಸಿದರೆ ವಾಲ್‌ಮಾರ್ಟ್ ಇಲ್ಲದ ರಾಜ್ಯಗಳಲ್ಲಿ ಬಡತನ ಮತ್ತು ನಿರುದ್ಯೋಗ ತುಂಬಾ ಕಡಿಮೆ ಇತ್ತು. 450 ಶತಕೋಟಿ ಡಾಲರ್ ವಹಿವಾಟು ಇರುವ ವಾಲಮಾರ್ಟ್ ಕಂಪನಿ ಕೇವಲ 2.1 ದಶಲಕ್ಷ ಜನ ನೌಕರರನ್ನು ಹೊಂದಿದೆ. ಭಾರತದಲ್ಲಿ ನೋಡಿದಾಗ 460 ಶತಕೋಟಿ ಡಾಲರ್ ಮಾರುಕಟ್ಟೆ ಇರುವ ಚಿಲ್ಲರೆ ವ್ಯಾಪಾರ ಕ್ಷೇತ್ರ 44 ದಶಲಕ್ಷ ಜನರಿಗೆ ಕೆಲಸ ಕೊಟ್ಟಿದೆ. ಹಿಂದೆ ಹೇಳಿದ ಪ್ರಸಂಗದಲ್ಲಿ ಪೆಪ್ಸಿಕೋ ಕಂಪನಿ 50,000 ನೌಕರಿಗಳನ್ನು ಸೃಷ್ಟಿ ಮಾಡುವುದಾಗಿ ಮಾತು ಕೊಟ್ಟಿತ್ತು. ಅದು ಸೃಷ್ಟಿ ಮಾಡಿದ್ದು ಕೇವಲ 500 ನೌಕರಿಗಳನ್ನು, ಅದರಲ್ಲೂ 250 ಜನ ಕುಶಲರಹಿತ ನೌಕರರು. ಈ ವಿಚಾರದಲ್ಲಿ ಲೋಕಸಭೆಯಲ್ಲಿ ಕೂಡ ಚರ್ಚೆಯಾಗಿತ್ತು. ಸಾಲದೆಂಬಂತೆ, ಕಳೆದ ತಿಂಗಳು ಅಮೆರಿಕದಲ್ಲಿ ವಾಲ್ಮಾರ್ಟ್ ಕಂಪನಿಯ ನೌಕರರು ಅತಿ ಕಡಿಮೆ ಸಂಬಳ ಮತ್ತು ಕೆಟ್ಟ ಕೆಲಸದ ವಾತಾವಣವನ್ನು ಪ್ರತಿಭಟಿಸಿ ಬೀದಿಗಿಳಿದ್ದನ್ನು ನೋಡಿದೆವು. ವಾಲ್‌ಮಾರ್ಟ್ ಬಂದರೆ ಎಷ್ಟು ನೌಕರಿ ಸೃಷ್ಟಿಯಾಗುತ್ತದೆ, ಎಷ್ಟು ನೌಕರಿ ನಾಶವಾಗುತ್ತದೆ ಎಂಬುದಕ್ಕೆ ಇಷ್ಟು ಸಾಕಲ್ಲವೇ?

ಗ್ರಾಮೀಣ ಒಳರಚನೆ ಸುಧಾರಣೆ, ಉತ್ತಮ ಪೂರೈಕೆ ವ್ಯವಸ್ಥೆಯ ಜಾಲ ನಿರ್ಮಾಣ ಮತ್ತು ರೈತರಿಗೆ ಉತ್ತಮ ಆದಾಯ ಒದಗಿಸುವುದು ಇಂದಿನ ತುರ್ತು, ನಿಜ. ಅದನ್ನು ಸಾಧಿಸಲು ಹಾಲು ಉತ್ಪಾದಕರ ಸಹಕಾರ ಸಂಘದ ಮಾದರಿ ನಮ್ಮಲ್ಲಿ ಇದೆ. ಹಾಲಿನಂಥ ಹೆಚ್ಚು ಕಾಲ ದಸ್ತಾನಿಡಲು ಸಾಧ್ಯವಿಲ್ಲದ ಉತ್ಪನ್ನಕ್ಕೇ ಇದು ಸಾಧ್ಯವಾಗಿದೆಯೆಂದರೆ ಹಣ್ಣು, ತರಕಾರಿ ಮತ್ತು ಇತರ ಕೃಷಿ ಉತ್ಪನ್ನಗಳಿಗೆ ಇದು ಏಕೆ ಸಾಧ್ಯವಾಗುವುದಿಲ್ಲ? ಹಾಲನ್ನು ಒಂದು ಕಾಲಕ್ಕೆ ಆಮದು ಮಾಡಿಕೊಳ್ಳುತ್ತಿದ್ದ ಭಾರತ ಈಗ ಅತಿ ದೊಡ್ಡ ಹಾಲು ಉತ್ಪಾದಕ ದೇಶವಾಗಿದೆ. ಭಾರತದ ಕೃಷಿ ರಂಗದ ಸಮಸ್ಯೆಗಳಿಗೆ ಪಾಶ್ಚಾತ್ಯ ದೇಶಗಳಲ್ಲಿ ಖಂಡಿತಾ ಉತ್ತರವಿಲ್ಲ. ಉತ್ತರ ಇರುವುದು ನಮ್ಮ ಮನೆಯಂಗಳದಲ್ಲೇ. ನಾವು ಒಳಗಣ್ಣು ತೆರೆದು ನೋಡುವುದನ್ನು ಇನ್ನಾದರೂ ಕಲಿಯದಿದ್ದರೆ ರೈತರ ಹೆಸರಲ್ಲಿ ಇಂಥ ಪ್ರಮಾದಗಳು ಹೆಚ್ಚುತ್ತಾ ಸಾವಿನ ಬಲೆಯೂ ಬಲವಾಗುತ್ತಾ ಹೋಗುತ್ತದೆ. ■

# ಕರೆ ಮಾಡಿ ತಂಬಾಕಿಗೆ ಗುಡ್‌ಬೈ ಹೇಳಿ!

### ಅವ್ಯವಹಾರಗಳ ಮಾಹಿತಿ ಲಭ್ಯ!

ಬ್ಯಾಂಕ್‌ನ ಸಿಬ್ಬಂದಿ ಅಥವಾ ಹೊರಗಿನವರು ಬ್ಯಾಂಕಿಂಗ್ ವ್ಯವಹಾರದಲ್ಲಿ ಮಾಡಿದ ಅಪರಾತಪರಾದ ಮಾಹಿತಿಯನ್ನು ಮಾಹಿತಿ ಹಕ್ಕಿನಡಿ ಕೇಳಿದರೆ ಯಾವುದೇ ಬ್ಯಾಂಕ್ ಕಾಯ್ದೆಯ ಸೆಕ್ಷನ್ 8(1)(ಡಿ) ನೆಪ ಒಡ್ಡಿ ನಿರಾಕರಿಸುವಂತಿಲ್ಲ.

ಕೆನರಾ ಬ್ಯಾಂಕ್‌ನ ಬೆಂಗಳೂರು ಕಛೇರಿಗೆ ಮಾಹಿತಿ ಹಕ್ಕು ಅರ್ಜಿ ಸಲ್ಲಿಸಿದ ದಾವಣಗೆರೆಯ ಹೆಚ್. ಬಸವರಾಜ್ 2010ರ ಮಾರ್ಚ್ 30ರೊಳಗೆ ಬ್ಯಾಂಕ್‌ನಲ್ಲಾದ ಎಲ್ಲ ಭ್ರಷ್ಟಾಚಾರ, ನಷ್ಟ ಹಾಗೂ ದುರುಪಯೋಗದ ಪ್ರಕರಣಗಳ ಮಾಹಿತಿ ಕೊಡಿ ಎಂದು ಕೇಳಿದ್ದರು. ಬ್ಯಾಂಕ್ ಕಾಯ್ದೆಯ 'ಕಮರ್ಷಿಯಲ್ ಕಾನ್ಫಿಡೆನ್ಸ್' ಅವಕಾಶವನ್ನು ಬಳಸಿಕೊಂಡು ಅರ್ಜಿಗೆ ಮಾಹಿತಿ ನೀಡಲು ಬ್ಯಾಂಕ್ ನಿರಾಕರಿಸಿತ್ತು. ಮೇಲ್ಮನವಿ ಪ್ರಾಧಿಕಾರದಲ್ಲೂ ಅರ್ಜಿದಾರನ ಅಹವಾಲು ಬಿದ್ದುಹೋದುದರಿಂದ ಕೇಂದ್ರ ಮಾಹಿತಿ ಆಯೋಗದ ಮುಂದೆ ಪ್ರಕರಣ ದಾಖಲಾಯಿತು.

ಈ ಹಂತದಲ್ಲಿ ಮಾಹಿತಿ ನಿರಾಕರಿಸಿದ್ದನ್ನು ಸಮರ್ಥಿಸಿಕೊಂಡ ಬ್ಯಾಂಕ್, ಅರ್ಜಿದಾರ 2010ರವರೆಗೆ ಎಂದು ತಿಳಿಸಿದ್ದಾನೆಯೇ ವಿನಃ ಯಾವ ವರ್ಷದಿಂದ ಯಾವ ವರ್ಷದವರೆಗೆ ಎನ್ನುವುದನ್ನು ತಿಳಿಸಿಲ್ಲ. ಭ್ರಷ್ಟಾಚಾರ ನಡೆದ ಬ್ಯಾಂಕ್ ಶಾಖೆಯನ್ನು ನಿರ್ದಿಷ್ಟಪಡಿಸಿಲ್ಲ. ಕೇಳಿದ ಮಾಹಿತಿ ನಮ್ಮಲ್ಲಿ ಸಂಗ್ರಹಿಸಿಡಲಾಗಿಲ್ಲ. ಇಂತಹ ಮಾಹಿತಿ ಕೊಡುವುದರಿಂದ ಬ್ಯಾಂಕ್‌ನ ಗೌರವಕ್ಕೆ ಧಕ್ಕೆಯಾಗುತ್ತದೆ. ಇದರಿಂದಾಗಿ ಬ್ಯಾಂಕ್‌ನ ಕುರಿತಾಗಿ ಸಾರ್ವಜನಿಕ ತಿಳುವಳಿಕೆ ಪ್ರಭಾವಿತವಾಗಿ ವ್ಯವಹಾರ ಕುಸಿಯುವ ಸಾಧ್ಯತೆಗಳಿವೆ. ಹಾಗಾಗಿ ಇದನ್ನು ವ್ಯಾವಹಾರಿಕ ಗುಟ್ಟು ಎಂಬ ನೆಲಗಟ್ಟಿನ ಮೇಲೆ ನಿರಾಕರಿಸಿದ್ದೇವೆ ಎಂದು ಪ್ರತಿಪಾದಿಸಿತು.

ಬಸವರಾಜ್ ಒಂದೇ ಅಂಶವನ್ನು ವಾದಿಸಿದರು: ಪ್ರತಿ ಬ್ಯಾಂಕ್ ಪ್ರತಿ ವರ್ಷ ರಿಸರ್ವ್ ಬ್ಯಾಂಕ್‌ಗೆ ವಾರ್ಷಿಕ ವರದಿ ಸಲ್ಲಿಸಿ, ಆದ ಅವ್ಯವಹಾರ, ದುರುಪಯೋಗದ ಮಾಹಿತಿ ಕೊಡುತ್ತದೆ. ಇದು ಸಾರ್ವಜನಿಕ ಮಾಹಿತಿ, ಇದನ್ನು ನನಗೆ ಕೊಡಿಸಿ. ಕೇಂದ್ರ ಆಯೋಗ ಅರ್ಜಿದಾರನ ವಾದವನ್ನೇ ಪುರಸ್ಕರಿಸಿತು. ಪಾರದರ್ಶಕತೆಯಿಂದ ವ್ಯಾವಹಾರಿಕ ನಷ್ಟ ಆಗುತ್ತದೆನ್ನುವುದನ್ನು ಒಪ್ಪುವಂತಿಲ್ಲ. ಕಾಯ್ದೆಯ ರಿಯಾಯ್ತಿಗಳ ಪರಿಧಿಗೆ ಭ್ರಷ್ಟಾಚಾರದ ವಿವರಗಳು ಬರುವುದಿಲ್ಲ. ಮಾಹಿತಿ ಕೊಡತಕ್ಕದ್ದು ಎಂದು ಆದೇಶಿಸಿತು.

### ಸಕಾಲ: ಪ್ರತ್ಯೇಕ ಅರ್ಜಿ ಬೇಡ

ಸಕಾಲ ಯೋಜನೆಯ ಬಗ್ಗೆ ಸಾರ್ವಜನಿಕರಲ್ಲಿ ಕೆಲವು ಗೊಂದಲಗಳಿವೆ. ಸಕಾಲಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕೇ? ಈ ಅರ್ಜಿ ನಮೂನೆಗಳು ಎಲ್ಲಿ ದೊರೆಯುತ್ತದೆ? ಅದಕ್ಕೆ ಪ್ರತ್ಯೇಕ ಶುಲ್ಕ ಭರಿಸಬೇಕೇ?

ಸಕಾಲ ಕಾಯ್ದೆಯ ವ್ಯಾಪ್ತಿಗೆ ಬರುವ ಇಲಾಖೆಗಳು ತಾವು ನೀಡುವ ಸೇವೆಗಳ ಕುರಿತು ಸಾರ್ವಜನಿಕರು ಸಲ್ಲಿಸಬೇಕಾದ ಅರ್ಜಿ ನಮೂನೆಗಳನ್ನು ಈಗಾಗಲೇ ಹೊಂದಿವೆ. ಇವುಗಳ ಮೇಲೆ ಕರ್ನಾಟಕ ನಾಗರಿಕ ಸೇವಾ ಖಾತರಿ ಕಾಯಿದೆ ಎನ್ನುವ ಮುದ್ರೆ ಇದೆ. ಉದಾಹರಣೆಗೆ ಜನನ/ಮರಣ ಪ್ರಮಾಣ ಪತ್ರ ಪಡೆಯಬೇಕಾದಲ್ಲಿ ಸಾರ್ವಜನಿಕರು ಸಲ್ಲಿಸಬೇಕಾದ ಅರ್ಜಿ ಸಕಾಲ ಕಾಯಿದೆ ಬರುವ ಮುಂಚೆ ಇದ್ದಂತೆಯೇ ಇದೆ. ಅದರ ಮೇಲೆ ಕರ್ನಾಟಕ ನಾಗರಿಕ ಸೇವಾ ಖಾತರಿ ಕಾಯಿದೆ ಎಂದು ಮುದ್ರಿಸಲಾಗಿದೆ. ಸಾರ್ವಜನಿಕರು ಈ ಹಿಂದೆ ಈ ಸೇವೆಗಳನ್ನು ಪಡೆಯಲು ಭರಿಸಬೇಕಾಗಿದ್ದ ಶುಲ್ಕವನ್ನೇ ಈಗಲೂ ಪಾವತಿಸಬೇಕು. www.sakala.kar.nic.in/gsc_rpt ಯಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದು.




**ಆರ್‌ಟಿಐ ಅಡಿ ಕೇಳಲಾದ ಭ್ರಷ್ಟಾಚಾರದ ಮಾಹಿತಿಯನ್ನು ಬ್ಯಾಂಕ್ ಕಾಯಿದೆಯ ಸೆಕ್ಷನ್ ಮುಂದಿಟ್ಟು ನಿರಾಕರಿಸುವಂತಿಲ್ಲ**

### ತಂಬಾಕು ಬಿಡಲು ಫೋನ್ ಮಾಡಿ

ಈವರೆಗೆ ತಂಬಾಕು ಸೇವಿಸಿದ್ದು ಸಾಕು ಎಂದು ಹೊಸ ಜೀವನವನ್ನು ಆರಂಭಿಸುವ ತುಡಿತವಿದ್ದವರು ಒಂದು ಉಚಿತ ದೂರವಾಣಿಗೆ ಕರೆ ಮಾಡಿ ಟೊಬ್ಯಾಕೋ ಫ್ರೀ ಎನ್ನಿಸಿಕೊಳ್ಳಬಹುದು! ರಾಷ್ಟ್ರೀಯ ತಂಬಾಕು ವರ್ಜನೆ ಕುರಿತಾದ ಸಹಾಯವಾಣಿ 1800 2277 87 ಸಂಖ್ಯೆಗೆ ಕರೆ ಮಾಡಿ, ಸೂಕ್ತವಾದ ಪರಿಹಾರ ಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ.

ತಂಬಾಕು ಉತ್ಪನ್ನಗಳ ತಯಾರಕರು ಹಾಗೂ ಭಾರತೀಯ ದಂತ ವೈದ್ಯಕೀಯ ಸಂಘದ ತಂಬಾಕು ವ್ಯಸನ ವಿಮೋಚನ ಉಪಕ್ರಮ ಕೇಂದ್ರ(ಟಿಐಐ)ದ ಜಂಟಿ ಸಹಭಾಗಿತ್ವದಲ್ಲಿ ಈ ಸಹಾಯವಾಣಿಯನ್ನು ತೆರೆಯಲಾಗಿದೆ. ಮುಂಬಯಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಸಹಾಯವಾಣಿ ಕೇಂದ್ರವು, ತಂಬಾಕು ವ್ಯಸನ ವಿಮೋಚನೆ ಪ್ರಕ್ರಿಯೆಯಲ್ಲಿ ಬದ್ಧತೆಯುಳ್ಳ ತಜ್ಞರನ್ನು ಒಳಗೊಂಡಿದೆ. ಇವರು ಕರೆದಾರರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಾರೆ. ಕರೆದಾರರು ಹಿಂದಿ, ಇಂಗ್ಲಿಷ್, ಮರಾಠಿ, ಗುಜರಾತಿ, ಬಂಗಾಲಿ ಭಾಷೆಗಳಲ್ಲಿ ಸಮಸ್ಯೆ ಹಂಚಿಕೊಳ್ಳಬಹುದು. ಕರೆದಾರರಿಗೆ ತಂಬಾಕು ಜಗಿತದ ಹವ್ಯಾಸವನ್ನು ವೈದ್ಯಕೀಯ ಚಿಕಿತ್ಸೆಗಳ ಮೂಲಕ ಹೇಗೆ ನಿಯಂತ್ರಿಸಬಹುದಾಗಿದೆ ಎಂದು ತಿಳಿ ಹೇಳಲಾಗುವುದು.

ಪ್ರತಿದಿನ ವಿವಿಧ ಭಾಷೆಗಳ ಜನರು ನಮಗೆ ಕರೆಗಳನ್ನು ಮಾಡಿ, ತಂಬಾಕು ಉತ್ಪನ್ನಗಳಿಂದ ನಮಗೆ ಮುಕ್ತಿ ದೊರಕಿಸಿ ಎಂದು ಅಂಗಲಾಚುತ್ತಿದ್ದಾರೆ. ನಮ್ಮ ಭಾಷಾ ತಜ್ಞರ ಮೂಲಕ ತಂಬಾಕು ವ್ಯಸನಿಗಳ ಸಮಸ್ಯೆಯನ್ನು ಅರಿತುಕೊಂಡು, ಅವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದೇವೆ. ಭದ್ರತೆಯ ಕಾರಣಗಳಿಗಾಗಿ ಕರೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ ಎಂದು ಸಹಾಯವಾಣಿಯ ಕಾರ್ಯನಿರ್ವಾಹಕ ಅಧಿಕಾರಿ ವಿಪುಲ್ ತಿಳಿಸುತ್ತಾರೆ. ತಂಬಾಕು ವ್ಯಸನಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಜತೆಯಲ್ಲಿ ಟಿಐಐನಡಿಯಲ್ಲಿ ನೋಂದಾಯಿಸಲ್ಪಟ್ಟಿರುವ ವೈದ್ಯರ ಸಂಪರ್ಕ ವಿಳಾಸವನ್ನೂ ವ್ಯಸನಿಗಳಿಗೆ ಸಹಾಯವಾಣಿ ನೀಡುತ್ತಿದೆ. ಸಹಾಯವಾಣಿಯ ವೆಬ್‌ಸೈಟ್ www.tii.orgನಲ್ಲಿ ಹೆಚ್ಚಿನ ವಿವರಗಳನ್ನು ನೋಡಬಹುದು.

**● ಮಾವೆಂಸ ಪ್ರಸಾದ್**

ಇಲ್ಲಿನ ಮಾಹಿತಿಗಳ ಬಗ್ಗೆ ಲೇಖಕನಿಂದಲೇ ವಿವರ ಬೇಕಿದ್ದರೆ ಸಂಜೆ 8ರ ನಂತರ ಸಂಪರ್ಕಿಸಬಹುದು. ಫೋನ್–08183 236068, 9886407592, ಇ ಮೇಲ್– mavemsa@gmail.com



# ಸಾವಯವ ಬೇಸಾಯ ಕೈಪಿಡಿ

ಕರ್ನಾಟಕ ಸಾವಯವ ಕೃಷಿಯಲ್ಲಿ ದೇಶದಲ್ಲೇ ಮುಂದಿರುವ ರಾಜ್ಯ. ಸಾವಿರಾರು ರೈತರು ರಾಜ್ಯದಲ್ಲಿ ಸಾವಯವ ಕೃಷಿ ಮಾಡುತ್ತಿದ್ದಾರೆ. ರಾಜ್ಯದ ಉತ್ತರ ತುದಿಯಿಂದ ದಕ್ಷಿಣ ತುದಿಯವರೆಗೆ, ಮಲೆನಾಡು, ಬಯಲುಸೀಮೆ, ನೀರಾವರಿ, ಮಳೆಯಾಶ್ರಿತವೆನ್ನದೆ ಎಲ್ಲಾ ಪ್ರದೇಶಗಳಲ್ಲೂ, ಎಲ್ಲಾ ಬಗೆಯ ಸನ್ನಿವೇಶದಲ್ಲೂ ಸಾವಯವ ಕೃಷಿ ಯಶಸ್ವಿಯಾಗಿ ನಡೆಯುತ್ತಿದೆ. ದವಸ ಧಾನ್ಯಗಳು, ಎಣ್ಣೆ ಕಾಳುಗಳು, ಹಣ್ಣು–ತರಕಾರಿಗಳು, ತೋಟದ ಬೆಳೆಗಳು, ಪ್ಲಾಂಟೇಷನ್ ಬೆಳೆಗಳು ಎಲ್ಲದರಲ್ಲೂ ರೈತರು ಸಾವಯವ ಬೆಳೆ ನಿರ್ವಹಣಾ ಪದ್ಧತಿಗಳನ್ನು ಯಶಸ್ವಿಯಾಗಿ ಅಳವಡಿಸಿದ್ದಾರೆ. ಈ ಎಲ್ಲಾ ಬೆಳೆಗಳಲ್ಲೂ ಅನೇಕಾನೇಕ ರೈತರು ಅತ್ಯುತ್ತಮ ಇಳುವರಿ ಪಡೆಯುತ್ತಿದ್ದಾರೆ. ಈ ಎಲ್ಲಾ ರೈತರ ಅನುಭವ ಮತ್ತು ಚಿಂತನೆಗಳನ್ನು ಒಂದೆಡೆ ಕಲೆ ಹಾಕಬೇಕಾದ ಕೆಲಸ ತುರ್ತಾಗಿ ಆಗಬೇಕಿದೆ. ಇದರಿಂದ ಪರ್ಯಾಯದ ಹುಡುಕಾಟದಲ್ಲಿರುವ ಎಷ್ಟೋ ರೈತ ಬಾಂಧವರಿಗೆ ಮಾಹಿತಿ ಮತ್ತು ಆತ್ಮವಿಶ್ವಾಸ ದೊರೆಯುತ್ತದೆ.

'ಸಹಜ ಸಾಗುವಳಿ' ಪತ್ರಿಕೆ ಕಳೆದ 10 ವರ್ಷಗಳಿಂದ ಕರ್ನಾಟಕದ 30ಕ್ಕೂ ಹೆಚ್ಚು ಉದ್ದಾಮ, ಪರಂಪರಾಗತ ಸಾವಯವ ಕೃಷಿಕರ ಸುದೀರ್ಘ ಕಥನಗಳನ್ನು ಪ್ರಕಟಿಸಿದೆ. 'ಸಾವಯವ ಪರಂಪರೆಯ ಕಥನ' ಈಗಾಗಲೇ 2 ಭಾಗಗಳಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದು ಮೂರನೇ ಭಾಗ ಪ್ರಕಟಣೆಗೆ ಸಿದ್ಧವಿದೆ. ಹಾಗೆಯೇ ಕೃಷಿಯಲ್ಲಿ ಮಹಿಳೆಯರ ಜ್ಞಾನವನ್ನು ಕೂಡ ಸವಿಸ್ತಾರವಾಗಿ ದಾಖಲಿಸಿ ಪ್ರಕಟಿಸಿದೆ. ಎರಡು ಯಶಸ್ವಿ ಸಾವಯವ ಗ್ರಾಮಗಳ ಸಾಮುದಾಯಕ ಪ್ರಯತ್ನದ ಸವಿರಣ ಚಿತ್ರಣವನ್ನು ಕೂಡ ಮಾಡಲಾಗಿದೆ. ಮಳೆಯಾಶ್ರಿತ ಸಾವಯವ ಕೃಷಿಯಲ್ಲಿ ಅಸಾಧಾರಣ ಸಾಧನೆ ಮಾಡಿರುವ, ಕರ್ನಾಟಕದ ಸಾವಯವ ಕೃಷಿ ಭೀಷ್ಮ ಎಂದೇ ಹೆಸರಾಗಿರುವ ಗದುಗಿನ ಶ್ರೀ ಡಿ.ಡಿ.ಭರಮಗೌಡ್ರ ಅವರ ಆಳ ಅನುಭವ, ಪ್ರಚಂಡ ಕೃಷಿ ಜ್ಞಾನವನ್ನು ಸವಿಸ್ತಾರವಾಗಿ ದಾಖಲಿಸಿ ಪುಸ್ತಕ ರೂಪದಲ್ಲಿ ಸಿದ್ಧಪಡಿಸಲಾಗಿದ್ದು ಸದ್ಯದಲ್ಲೇ ಬಿಡುಗಡೆಗೊಳ್ಳಲಿದೆ.

ಇದೆಲ್ಲಾ ಆಗಿರುವ ಕೆಲಸವಾದರೆ, ಆಗಬೇಕಾದ್ದು ಇನ್ನೂ ಬೇಕಾದಷ್ಟಿದೆ. ಕರ್ನಾಟಕದ ಕನಿಷ್ಟ ಒಂದು ನೂರು ಸಾವಯವ ಕೃಷಿಕರ ಚಿತ್ರಣವನ್ನು ಒಂದೇ ಗ್ರಂಥದಲ್ಲಿ ಹೊಂದಿಸಿ ಕೊಡುವುದು ಈ ಹೊತ್ತಿನ ತುರ್ತಾಗಿದೆ.

ಈ ಹಿನ್ನೆಲೆಯಲ್ಲಿ ಓಎಫ್‌ಎಐ– ಕರ್ನಾಟಕ ಮತ್ತು 'ಇಕ್ರಾ' ಜಂಟಿಯಾಗಿ ರಾಜ್ಯದ ಒಂದು ನೂರು ಸಾವಯವ ರೈತರ ವಿವರಗಳನ್ನೊಳಗೊಂಡ ಕೈಪಿಡಿ ಅಥವಾ ಸೋರ್ಸ್ ಬುಕ್ ಅನ್ನು ಹೊರತರಲು ಯೋಜಿಸಿದೆ.

ತಮ್ಮಲ್ಲಿ ಅನೇಕರು ಈ ಕೈಪಿಡಿಯ ರೈತರಾಗಿ ಸೇರಬಲ್ಲವರಾಗಿದ್ದೀರಿ. ಸಾವಯವ ಕೃಷಿಯಲ್ಲಿನ ತಮ್ಮ ಅನುಭವ/ ಜ್ಞಾನವನ್ನು ಇತರರಿಗೆ ತಲುಪಿಸಲು ಇದು ತಮಗೊಂದು ಸದವಕಾಶವಾಗಿರುತ್ತದೆ. ನೀವು ಸಾವಯವ, ಸಹಜ, ಬಯೋಡೈನಮಿಕ್ ಅಥವಾ ಇನ್ಯಾವುದೇ ರೀತಿಯ ಪರಿಸರ ಪ್ರಿಯ ಸುಸ್ಥಿರ ಕೃಷಿಯಲ್ಲಿ ತೊಡಗಿರಬಹುದು. ಹೊಲದ ಬೇಸಾಯ ಅಥವಾ ತೋಟಗಾರಿಕೆ ಬೇಸಾಯ ಮಾಡುತ್ತಿರಬಹುದು. ಭತ್ತ, ಕಬ್ಬುಗಳನ್ನು ಬೆಳೆಯುವ ನೀರಾವರಿ ರೈತರಾಗಿರಬಹುದು. ಕರ್ನಾಟಕದ ಯಾವುದೇ ಭಾಗದಲ್ಲಿರಬಹುದು. ನಿಮಗೆ ಕೈಪಿಡಿಯ 100 ರೈತರಲ್ಲಿ ಒಬ್ಬರಾಗಿ ಸೇರ್ಪಡೆಯಾಗಲು ಅವಕಾಶವಿರುತ್ತದೆ.

ತಾವು ಈ ಸೋರ್ಸ್ ಬುಕ್‌ನಲ್ಲಿ ಸೇರಬಯಸುವಿರಾದರೆ ದಯಮಾಡಿ ತಮ್ಮ ಕೃಷಿ ಕುರಿತ ಎರಡು ಪುಟಗಳ ಟಿಪ್ಪಣಿ ಮತ್ತು ಸೂಕ್ತ ಫೋಟೋಗಳನ್ನು ಓಎಫ್‌ಎಐ– ಕರ್ನಾಟಕ ರಾಜ್ಯ ಕಾರ್ಯಾಲಯಕ್ಕೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಸದ್ಯಕ್ಕೆ ನಾನು ಬೇಡ, ನನ್ನ ಸ್ನೇಹಿತ–ಸ್ನೇಹಿತೆ ಇರಲಿ, ನನ್ನ ಸೋದರ–ಸೋದರಿ ಇರಲಿ, ನನ್ನ ತಂದೆ–ತಾಯಿ ಇರಲಿ, ಪಕ್ಕದ ಊರಿನವರಿರಲಿ, ನಮ್ಮ ಜಿಲ್ಲೆಯವರು ಇರಲಿ... ಎಂದು ನೀವು ಭಾವಿಸುವಿರಾದರೆ ಖಂಡಿತವಾಗಿಯೂ ಅವರ ಕುರಿತ ಟಿಪ್ಪಣಿ ಕಳುಹಿಸಬಹುದು.

ಇ–ಮೇಲ್‌ನಲ್ಲಿ ಕೂಡ ಕಳುಹಿಸಬಹುದು. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಸೋರ್ಸ್ ಬುಕ್ ತಂಡ ನಿಮ್ಮನ್ನು ಸಂಪರ್ಕಿಸುತ್ತದೆ. ಅಥವಾ ನಿಮ್ಮಲ್ಲಿಗೆ ಬಂದು ಹೆಚ್ಚಿನ ದಾಖಲಾತಿ ಮಾಡಿಕೊಳ್ಳುತ್ತದೆ.

ಕೃಷಿಯಲ್ಲಿ ರೈತರ ಆಸಕ್ತಿ ಕ್ಷೀಣಿಸುತ್ತಿರುವ ಇವತ್ತಿನ ಸನ್ನಿವೇಶದಲ್ಲಿ ಸಾವಯವ ಬೇಸಾಯ ಕೈಪಿಡಿಯು ರೈತರಿಗೆ ಹೊಸ ಉತ್ಸಾಹ ಮತ್ತು ಭರವಸೆ ಮೂಡಿಸುತ್ತದೆ ಎಂಬುದರಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆ. ಈ ವಿಚಾರದಲ್ಲಿ ತಮ್ಮ ಕೊಡುಗೆಯನ್ನು ತಪ್ಪದೆ ನಿರೀಕ್ಷಿಸುತ್ತೇವೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ಓಎಫ್‌ಎಐ ರಾಜ್ಯ ಕಾರ್ಯಾಲಯ, ಕೇರಾಫ್ ಇಕ್ರಾ', ನಂ.22, 5ನೇ ಕ್ರಾಸ್, ಮೈಕೆಲ್ ಪಾಳ್ಯ, ಹೊಸ ತಿಪ್ಪಸಂದ್ರ ಅಂಚೆ, ಬೆಂಗಳೂರು– 560 075 ದೂರವಾಣಿ: 080–2528 3370, 2521 3104 ಇಮೇಲ್: icrablr@gmail.com ಸಂಪರ್ಕಿಸಿ

## ಅಗ್ರೋ ಫಾರೆಸ್ಟ್ರಿ ಕಾರ್ಯಾಗಾರ

**ದಿನಾಂಕ: 23.11.2012ರಿಂದ 26.11.2012**

**ಪ್ರಧಾನ ಸಂಪನ್ಮೂಲ ವ್ಯಕ್ತಿ: ಪಿ.ಆರ್. ಶೇಷಗಿರಿ ರಾವ್.**

**ಇವರ ಜೊತೆ ಅಗ್ರೋ ಫಾರೆಸ್ಟ್ರಿಯಲ್ಲಿ ಪರಿಶ್ರಮವಿರುವ ಕೆಲ ರೈತರು ಮತ್ತು ವಿಜ್ಞಾನಿಗಳು ಸಹ–ಸಂಪನ್ಮೂಲ ವ್ಯಕ್ತಿಗಳಾಗಿ ಒತ್ತಾಸೆ ನೀಡುತ್ತಾರೆ.**

ನಾಲ್ಕು ದಿನಗಳ ಈ ಕಾರ್ಯಾಗಾರದಲ್ಲಿ, ಅಗ್ರೋ ಫಾರೆಸ್ಟ್ರಿಯಲ್ಲಿ ಈಗಾಗಲೇ ನಡೆದಿರುವ ರೈತರ ಮತ್ತು ಇತರ ಪ್ರಯೋಗಗಳು, ಅವುಗಳ ವಿನ್ಯಾಸ, ಪ್ರತಿ ಪ್ರದೇಶದ ನೂರು ವರ್ಷಗಳ ಮಳೆ ಮಾದರಿಯ ವಿಶ್ಲೇಷಣೆ ಮತ್ತು ಮ್ಯಾಪಿಂಗ್, ಲಭ್ಯವಿರುವ ನೀರಿನ ಪ್ರಮಾಣ, ನೀರಿನ ಶೇಖರಣೆ, ಕೃಷಿ ಭೂಮಿಯಲ್ಲಿ ಮರ ಜೋಡಣೆಯ ನಿಯಮಗಳು, ಮರಗಳನ್ನು ಅರ್ಥ ಮಾಡಿಕೊಳ್ಳುವುದು, ನಮ್ಮ ಆದ್ಯತೆಯ ಮರಗಳು, ಬೇಡಿಕೆ ಮತ್ತು ಪೂರೈಕೆ ಮುಂತಾದ ವಿಷಯಗಳಿಗೆ ಸಂಬಂಧಿಸಿ ಪ್ರತಿಯೊಬ್ಬ ಶಿಭಿರಾರ್ಥಿಯ ಯೋಜನೆ ಮತ್ತು ವಿನ್ಯಾಸ ತಯಾರಿಸಲಾಗುವುದು. ಶಿಭಿರಾರ್ಥಿಗಳ ಜೊತೆ ಮುಂದಿನ ದಿನಗಳಲ್ಲೂ ಸಂಪರ್ಕದಲ್ಲಿದ್ದು ಸಾಧಕ ಬಾಧಕಗಳ ಪರಿಶೀಲನೆ ಮತ್ತು ಮುಂದುವರೆದ ಮಾರ್ಗದರ್ಶನಗಳಿಗೆ ಅವಕಾಶ ಇರುವಂತೆ ಕಾರ್ಯಾಗಾರವನ್ನು ಯೋಜಿಸಲಾಗಿದೆ.

ಹೊಲದಲ್ಲಿ ಮರಗಿಡ ಜೋಡಣೆ/ಅಗ್ರೋ ಫಾರೆಸ್ಟ್ರಿಯಲ್ಲಿ ನಿಜವಾದ ಆಸಕ್ತಿ ಹೊಂದಿದ್ದು ತಮ್ಮ ಕೃಷಿಯಲ್ಲಿ ಅಳವಡಿಸಬಯಸುವ 25–30 ಜನ ರೈತರಿಗೆ ಮಾತ್ರ ಕಾರ್ಯಗಾರದಲ್ಲಿ ಭಾಗವಹಿಸುವ ಅವಕಾಶ ಇರುತ್ತದೆ. ಶಿಬಿರಾರ್ಥಿಗಳ ಆಯ್ಕೆಗೆ ಮಾನದಂಡಗಳಿದ್ದು ಆಯ್ಕೆಯಾದವರಿಗೆ ಮಾತ್ರ ಭಾಗವಹಿಸುವ ಅವಕಾಶವಿರುತ್ತದೆ.

ಕಾರ್ಯಾಗಾರ ಬೆಂಗಳೂರಿನಲ್ಲಿ ನಡೆಯುತ್ತಿದ್ದು ನೊಂದಣಿ ಶುಲ್ಕ ರೂ. 300/– ಇರುತ್ತದೆ. ಅನುಭವ ಹಂಚಿಕೊಳ್ಳುವ ಅಗ್ರೋ ಫಾರೆಸ್ಟ್ರಿಯಲ್ಲಿ ಪರಿಶ್ರಮ ಹೊಂದಿದ ರೈತರು: ಸುಂದರ್‌ರಾಮನ್ ಮತ್ತು ರವಿ, ಸತ್ಯಮಂಗಲ, ತಮಿಳುನಾಡು. ಡಾ। ಜಿ.ವಿ ಹೆಗ್ಗಡೆ, ಸಿರಸಿ 3. ಶಂಕರಗೌಡ, ಮುದೇನೂರು, ಹಾವೇರಿ 4. ಗಂಗಮ್ಮ, ಲಕ್ಕಸಂದ್ರ, ಮಾಗಡಿ 5. ಕೆ. ಶೇಖರಪ್ಪ– ಜಗಳೂರು 6. ಶಿವನಂಜಯ್ಯ, ನಂಜನಗೂಡು 7. ರಾಘವ, ದಾವಣಗೆರೆ

ಪಾಲ್ಗೊಳ್ಳಲು ಇಚ್ಚಿಸುವವರು 'ಇಕ್ರಾ', ನಂ.22, 5ನೇ ಕ್ರಾಸ್, ಮೈಕೆಲ್ ಪಾಳ್ಯ, ಹೊಸ ತಿಪ್ಪಸಂದ್ರ ಅಂಚೆ, ಬೆಂಗಳೂರು– 560 075 ದೂರವಾಣಿ: 080–2528 3370, 2521 3104, ಇಮೇಲ್: icrablr@gmail.com ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದಾಗಿದೆ.

Printed and Published by P Babu, on behalf of ICRA, 22, `Samskruthi', Michaelpalya, NTS Post, Bangalore 560 075
Printed at ILA Mudrana, No. 36, 40 Ft. road, Raghavanagar, NTY layout, Bangalore- 560 026 Ph:26757159, 26755656

# ಓದುಗರ ಊರಿನಿಂದ

'ಬರ' ಕುರಿತ ಶೇಷಗಿರಿರಾವ್ ಮತ್ತು ಭರಮಗೌಡ್ರ ಅವರ ಲೇಖನಗಳು ಬಹಳ ಇಷ್ಟವಾದವು. ಭರಮಗೌಡ್ರ ಅವರು ಹಸಿರೆಲೆ ಗೊಬ್ಬರ ಖಡ್ಡಾಯ, ಮಳೆ ಹೋದರೆ ಮೇವಿಲ್ಲ ಎನ್ನುವವರು ರೈತರೇ ಅಲ್ಲ ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿರುವುದು, ಇವರಿಬ್ಬರೂ ಸರ್ಕಾರ ಮತ್ತು ಕಂಪನಿಗಳು ರೈತರಿಗೆ ಸೃಷ್ಟಿಸುತ್ತಿರುವ ಅವಲಂಬನೆಯನ್ನು ಬಯಲಿಗೆಳೆದಿರುವುದು ಚೆನ್ನಾಗಿದೆ. ಸಹಜ ಸಾಗುವಳಿ ಸಂಪಾದಕಿ ವಿ ಗಾಯತ್ರಿಯವರಿಗೆ ಪ್ರತಿಷ್ಠಿತ ಕೌಂಟರ್ ಮೀಡಿಯಾ ಪ್ರಶಸ್ತಿ ಬಂದಿರುವುದು ಹೆಮ್ಮೆ ಎನಿಸಿತು.

**● ಬಿ. ಚಂದ್ರಯ್ಯ, ಅಂಕಸಂದ್ರ, ಗುಬ್ಬಿ ತಾ। ತುಮಕೂರು ಜಿ।**

ಪಿ.ಆರ್ ಶೇಷಗಿರಿರಾವ್ ಅವರ ಸಂದರ್ಶನ ಬಹಳ ಸೊಗಸಾಗಿ ಮೂಡಿ ಬಂದಿದೆ. ಕೊನೆಯಲ್ಲಿ ಅವರು, ಮುಗ್ಧ ರೈತರನ್ನು ರಾಜಕಾರಣಿಗಳು, ಕಂಪನಿಗಳು ಎರಡೂ ಕೈನೀಡಿ ತಮ್ಮ ತೆಕ್ಕೆಗೆ ಹೇಗೆ ಸೆಳೆದುಕೊಳ್ಳುತ್ತಾರೆ ಎಂದು ಸಾದೋಹರಣವಾಗಿ ವಿವರಿಸಿರುವುದು ಚನ್ನಾಗಿದೆ. ಭರಮಗೌಡ್ರರು 'ಬರವೇನ ಬಣ್ಣಿಸಲಿ'ನಲ್ಲಿ ಹಸಿ ಬರ, ಒಣ ಬರಗಳ ಬಗ್ಗೆ ಚನ್ನಾಗಿ ತಿಳಿಸಿದ್ದಾರೆ. ಮಳೆ ಹೋದರೆ ಮೇವಿಲ್ಲ ಅನ್ನುವವನು ರೈತನೇ ಅಲ್ಲ ಎಂದು ಸರಿಯಾಗಿ ಎಚ್ಚರಿಸಿದ್ದಾರೆ. ಪಿ. ಸಾಯಿನಾಥ್ ಅವರ 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಅನ್ನುವುದು ಪ್ರತಿ ಗ್ರಾಮದ ಹತ್ತಾರು ಜನಗಳಿಗೆ, ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಇಷ್ಟ, ರೈತನಿಗೆ ಕಷ್ಟ ಎಂದಾಗುತ್ತಲ್ಲವೇ? ನಾನು ಈ ಪುಸ್ತಕ ಕೊಂಡು ಓದುತ್ತಿದ್ದೇನೆ. ಸಾಯಿನಾಥರ ಕೌಂಟರ್ ಮೀಡಿಯಾ ಪ್ರಶಸ್ತಿ ಸಹಜ ಸಾಗುವಳಿಯ ಸಂಪಾದಕಿ ವಿ ಗಾಯತ್ರಿಯವರಿಗೆ ಸಲ್ಲಿರುವುದು ಕಂಡು ಬಹಳ ಸಂತೋಷವಾಯಿತು. ಗಾಯತ್ರಿಯವರು ಗ್ರಾಮೀಣ ಭಾಗದ ಸಣ್ಣ ಅತಿ ಸಣ್ಣ ರೈತಕುಟುಂಬಕ್ಕೆ ಒಬ್ಬ ಗುರು ಮಾತೆ ಇದ್ದ ಹಾಗೆ. ಇವರಿಗೆ ಸಂದಿರುವ ಪ್ರಶಸ್ತಿ ಪತ್ರಿಕೆಯ ಎಲ್ಲಾ ಚಂದಾದಾರರಿಗೂ ಮತ್ತು ರೈತ ಬಾಂಧವರಿಗೂ ಅತೀವ ಸಂತೋಷ ತಂದಿರುತ್ತದೆ. ಡಾ। ಪ್ರಕಾಶ್ ಅವರ ಬಿತ್ತನೆ ಬೀಜ ಅವಲೋಕನ ಎಲ್ಲಾ ರೈತರು ಗಮನಿಸಬೇಕಾದ ಮಾಹಿತಿ.




**● ಕೆ. ಶೇಖರಪ್ಪ, ಬಸವನಕೋಟೆ, ಜಗಳೂರು ತಾ। ದಾವಗೆರೆ ಜಿ।**

ಬರ ಅಂದ್ರೆ ಎಲ್ಲರಿಗೂ ಇಷ್ಟ ಅಂತಿದೆಯಲ್ಲ? ಯಾರವರು ಬರವನ್ನು ಇಷ್ಟಪಡುವವರು? ಪುಸ್ತಕ ಓದಲು ಆಸೆಯಾಗಿದೆ. ಹಣ ಕಳಿಸುತ್ತೇನೆ. ದಯಮಾಡಿ ಕಳುಹಿಸಿಕೊಡಿ. ತಪ್ಪದೆ ಈ ಪುಸ್ತಕದ ಭಾಗಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಮರೆಯಬೇಡಿ.

**● ಆರ್.ಸಿ.ಪಾಟೀಲ್, ಶಹಬಾದ್**

ಸಹಜ ಸಾಗುವಳಿಯ 55ನೇ ಸಂಚಿಕೆಯ ಎಲ್ಲ ಲೇಖನಗಳು ಮನಮುಟ್ಟುವಂತಿವೆ. ಎರಡು ಕಂತುಗಳಲ್ಲಿ ಪ್ರಕಟವಾದ ಶ್ರೀ ಶಂಕರಗೌಡ ಮತ್ತು ಪರಿವಾರದ ಸ್ವಾವಲಂಬಿ ಕೃಷಿ ಮತ್ತು ಬದುಕುಗಳ ಅನುಭವದ ಲೇಖನ ಮನಮುಟ್ಟುವ ಹಾಗೆ ಮೂಡಿಬಂದಿದೆ. ಪ್ರತಿ ಸಾಲೂ ಜೀವಕಳೆಯಿಂದ ಕಂಗೊಳಿಸುತ್ತದೆ. ಕೃಷಿ ಇಲಾಖೆಯ ಡಾ। ಪ್ರಕಾಶ್ ಬಿಟಿ ಹತ್ತಿ ಕುರಿತು ಹೇಳಿರುವುದು ಕಣ್ಣು ತೆರೆಸುವಂತಿದೆ. ನಾವು ಸಾವಯವ ರೈತರು. ನಮಗೆ ಬಿ.ಟಿ ಹತ್ತಿ ಬೇಡ. ಡಿಸಿಎಚ್–32, ಎನ್‌ಎಚ್–44 ಬೀಜಗಳು ಬೇಕು. ಸರ್ಕಾರ ಈ ಬೀಜಗಳನ್ನು ಈಗಲೂ ಒದಗಿಸುವುದಾದರೆ ನಾವು ರೈತರು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ. 'ಬಳಕೆ ತಿಳುವಳಿಕೆ'ಯಲ್ಲಿ ಚಿನ್ನ ಅಡವಿಡಲು ಬ್ಯಾಂಕ್ ಸ್ಕೀಮ, ವಿಷ ಆದೀತು ವಿಸಾ ಕಾರ್ಡ್ ಬಹಳ ಅರ್ಥಗರ್ಭಿತವಾಗಿದೆ. 'ಬರ'ದ ಲೇಖನಗಳು ಅಷ್ಟೇ ಚನ್ನಾಗಿವೆ. ಈ ಎಲ್ಲ ವಿಚಾರಗಳನ್ನು ಹಳ್ಳಿಯ ಓದುಗರ ಮನಮುಟ್ಟುವಂತೆ ಸೂಕ್ಷ್ಮ ಶಬ್ದಗಳಿಂದ ಬರೆದು ನಮ್ಮ ಮನೆ ಬಾಗಿಲು ತಟ್ಟಿ ಮುಟ್ಟಿಸಿ ಎಚ್ಚರಿಸುವ ಸಂಪಾದಕರಿಗೆ ನಮ್ಮೆಲ್ಲ ಕುಟುಂಬ ಪರಿವಾರದ ಅನಂತ ಶರಣು ಶರಣಾರ್ಥಿಗಳೆಂದೆ.

**● ಬಸವರಾಜ. ಮ.ಹೂಗಾರ, ಕನ್ನಳ್ಳಿ, ಸುರಪೂರ ತಾ। ಗುಲ್ಬರ್ಗ ಜಿ।**

55ನೇ ಸಂಚಿಕೆಯಲ್ಲಿ ಪ್ರಕಟವಾದ 'ಕೋಳಿ ಪ್ರಿಯರೆ, ಕೊಂಚ ನಿಲ್ಲಿ' ಲೇಖನ ಆಘಾತಕಾರಿಯಾಗಿದೆ. ತನ್ನ ಕುಲಗೆಟ್ಟ ಬುದ್ಧಿಯಿಂದ ಅಮೆರಿಕ ಪ್ರಪಂಚವನ್ನೇ ಕುಲಗೆಡಿಸುತ್ತಿದೆ. ಕುಲಾಂತರಿ ಕೋಳಿಯಂತೂ ನೋಡಿದರೆ ಬೆಚ್ಚಿ ಬೀಳುವಂತಿದೆ. ಜಾನುವಾರುಗಳು ಹೇಗೆ ನಮ್ಮ ಜೊತೆ ಪ್ರೀತಿ ವಿಶ್ವಾಸದ ಸಂಬಂಧ ಹೊಂದಿರುತ್ತವೆಯೋ ಹಾಗೆಯೇ ನಮ್ಮ ಕೋಳಿಗಳು ಕೂಡ ನಮ್ಮ ಜೊತೆ ಹೊಂದಿಕೊಂಡಿರುತ್ತವೆ. ಕೋಳಿಗಳನ್ನು ಕೇವಲ ತಿನ್ನುವ ವಸ್ತು ಎಂದು ನಾವು ಯಾವತ್ತೂ ತಿಳಿದುಕೊಂಡಿಲ್ಲ. ಆದರೆ ಬರೀ ಮಾಂಸಕ್ಕಾಗಿ ಟ್ಯೂಬುಗಳನ್ನು ಅಳವಡಿಸಿ 'ಜೀವ' ಕೊಡುವ ಕುಲಾಂತರಿ ಕೋಳಿಯ ಕಲ್ಪನೆಯೇ ವಿಕೃತ. ಇಂತಹ ಅಪಾಯಕಾರಿ ಬೆಳವಣಿಗೆಯ ಬಗ್ಗೆ ನಮಗೆ ಮಾಹಿತಿ ನೀಡಿದ ಪತ್ರಿಕೆಗೆ ಧನ್ಯವಾದಗಳು.

**● ಬಿ. ಪತ್ರಿಗೌಡ, ಅಂಬಳಿ ಗ್ರಾಮ, ಹ.ಬೊ. ಹಳ್ಳಿ ತಾ। ಬಳ್ಳಾರಿ ಜಿ।**

ಕೌಂಟರ್ ಮೀಡಿಯಾ ಪ್ರಶಸ್ತಿ ವಿ. ಗಾಯತ್ರಿಯವರಿಗೆ ದೊರಕ್ಕಿದ್ದು ಸೂಕ್ತವಾಗಿದೆ. ಅವರನ್ನು ಅಭಿನಂದಿಸುತ್ತಲೇ ಅವರಿಂದ ಇನ್ನೂ ಹೆಚ್ಚು ಮಹತ್ವದ ಕೆಲಸಗಳನ್ನು ನಿರೀಕ್ಷಿಸುತ್ತೇವೆ.

**● ಡಾ। ಬನು ದೇಶಪಾಂಡೆ, ಸಹ ಪ್ರಾಧ್ಯಾಪಕರು, ಕೃಷಿ ವಿ.ವಿ, ಬೆಂಗಳೂರು**


ಮುದ್ರಿತ ವಿಷಯ
ಪುಸ್ತಕ ಅಂಚೆ

Registered with Registrar of Newspapers for
India under No. KARKAN/2002/9523


To,


ಇಂದ:
**ಸಹಜ ಸಾಗುವಳಿ**
ನಂ.22, 'ಸಂಸ್ಕೃತಿ', 5ನೇ ಕ್ರಾಸ್, ಮೈಕೆಲ್ ಪಾಳ್ಯ, 2ನೇ ಹಂತ, ಹೊಸ ತಿಪ್ಪಸಂದ್ರ ಅಂಚೆ, ಬೆಂಗಳೂರು–560 075